ಚಿನ್ನದ ದೋಸೆ

ಮತ್ತು ಇತರ ಕಥೆಗಳು

ಜಿ. ಪಿ. ರಾಜರತ್ನಂ

ಚಿನ್ನದ ದೋಸೆ

ಮತ್ತು ಇತರ ಕಥೆಗಳು

ಬರೆದವರು:

ಕರ್ಣಾಟಕ ಸಂಘದ ಸದಸ್ಯರು

ಸಂಪಾದಕರು:

ಜಿ. ಪಿ. ರಾಜರತ್ನಂ

ಕರ್ಣಾಟಕ ಸಂಘ

ಸೆಂಟ್ರಲ್ ಕಾಲೇಜ್, ಬೆಂಗಳೂರು

ಚಿನ್ನದ ದೋಸೆ

ಮತ್ತು ಇತರ ಕಥೆಗಳು

ಬರೆದವರು:

ಕರ್ಣಾಟಕ ಸಂಘದ ಸದಸ್ಯರು

ಸಂಪಾದಕರು:

ಜಿ. ಪಿ. ರಾಜರತ್ನಂ

ಕರ್ಣಾಟಕ ಸಂಘ

ಸೆಂಟ್ರಲ್ ಕಾಲೇಜ್, ಬೆಂಗಳೂರು

ಮೊದಲನೆಯ ಮುದ್ರಣ:
ಜನವರಿ, ೧೯೫೩

ಆಕರ: https://archive.org/details/dli.osmania.3169
ಓಸಿಆರ್ ಪರಿವರ್ತನೆ : ವಿಶು [https://vishwakoshaagaara.blogspot.com/]

ಬೆಲೆ : ಹನ್ನೆರಡಾಣೆ

ಬೆಂಗಳೂರಿನ **ಬಿ. ಬಿ. ಡಿ. ಪವರ್ ಪ್ರೆಸ್ಸಿನಲ್ಲಿ**
ಯು. ನರಸಿಂಹ ಮಲ್ಯರಿಂದ ಮುದ್ರಿತವಾಯಿತು

ವಿಷಯಗಳು

ಅರಿಕೆ

ಸೆಂಟ್ರಲ್ ಕಾಲೇಜ್ ಕರ್ಣಾಟಕ ಸಂಘವು ೧೯೫೨ನೆಯ ವರ್ಷ ನಾಲ್ಕು ಹೊಸ ಪುಸ್ತಕಗಳನ್ನು ಪ್ರಕಟಪಡಿಸಿತು. ಅವುಗಳ ವಿವರವನ್ನು ಪುಸ್ತಕದ ಕೊನೆಯಲ್ಲಿ ಕೊಟ್ಟಿದೆ. ಮತ್ತೆ ೧೯೫೩ರಲ್ಲಿ ಈಗ ತಾನೆ ಮತ್ತೊಂದು ಪುಸ್ತಕವನ್ನು ಪ್ರಕಟಿಸಿದೆ. ಅದರ ಹೆಸರು '**ಬಾಲ ಸರಸ್ವತಿ.**'

'**ಬಾಲ ಸರಸ್ವತಿ**'ಯ ವಿಶಿಷ್ಟತೆಯೆಂದರೆ ಅದು ಕೇವಲ ವಿದ್ಯಾರ್ಥಿಗಳ ಬರಹಗಳಿಂದಲೇ ಆಗಿರುವುದು. ಅವುಗಳಲ್ಲಿ ಕೆಲವು ಅವರೇ ಸ್ವಂತವಾಗಿ ಆಯ್ದುಕೊಂಡ ವಿಷಯಗಳನ್ನು ವಿಸ್ತರಿಸಿ ಬರೆದವು; ಮತ್ತೆ ಕೆಲವು ಸಂಘವು ಆಗಾಗ ಸೂಚಿಸಿ ನಿಯಮಿಸಿದ ವಿಷಯಗಳನ್ನು ಸಮಾಲೋಚಿಸಿ ಬರೆದವು. ಅವುಗಳ ವಿವಿಧತೆಯನ್ನೂ ವೈಯಕ್ತಿಕವಾದ ಸ್ವತಂತ್ರ ವಿಚಾರವನ್ನೂ ತಮ ತಮಗೇ ವಿಶಿಷ್ಟವಾದ ಧೋರಣೆಯನ್ನೂ ವಿದ್ಯಾರ್ಥಿಗಳಲ್ಲಿ ಆಸಕ್ತಿಯಿರುವವರೆಲ್ಲರೂ ಪರಾಮರ್ಶಿಸಬೇಕು.

ಆ ಬರಹಗಳ ಕುಚ್ಚಿನಿಂದ ಪ್ರತ್ಯೇಕಿಸಿ ತೆಗೆದದ್ದು ಈ ಒಂದು ಚೋಟು. ಇದರಲ್ಲಿ ಎಂಟು 'ಅಜ್ಜಿಕತೆ'ಗಳಿವೆ. ಇಂಗ್ಲಿಷಿನಲ್ಲಿ ಯಾವುದನ್ನು Fairy Tales, Folk-tales, House-hold tales ಎನ್ನುತ್ತಾರೋ ಅಂತವುಗಳನ್ನು ಬರೆದು ಕೊಡಬೇಕೆಂದು ನಮ್ಮ ಸದಸ್ಯರನ್ನು ಕೇಳಿಕೊಂಡಿದ್ದೆವು. ತಮ್ಮ ತಮ್ಮ ಸ್ಥಳಗಳಲ್ಲಿ, ತಮ್ಮ ತಮ್ಮ ಹಿರಿಯರಿಂದ ತಾವು ಕೇಳಿದ್ದಿರಬಹುದಾದ 'ನಾಡಕತೆ'ಗಳನ್ನು ಆದಷ್ಟು ಮಟ್ಟಿಗೆ ತಾವು ಕೇಳಿದ ಹಾಗೆಯೇ, ಅದೇ ವ್ಯವಹಾರದ ನುಡಿಯಲ್ಲೇ ಬರೆದುಕೊಡಲೆಂದು ಅಪೇಕ್ಷಿಸಿದ್ದೆವು. ಅದರಂತೆ ಬಂದ ಹಲವು ಕಥೆಗಳಲ್ಲಿ ಈ ಎಂಟನ್ನು ಆರಿಸಿಕೊಂಡಿದ್ದೇವೆ. ದೊಡ್ಡ ಗ್ರಂಥವಾದ 'ಬಾಲ ಸರಸ್ವತಿ'ಯಿಂದ ಈ ಎಂಟು ಕಥೆಗಳನ್ನು ಪ್ರತ್ಯೇಕಿಸಿ ಕಿರುಪುಸ್ತಕವನ್ನು ಪ್ರಕಟಿಸಿದರೆ, ನಮ್ಮ ಕನ್ನಡದ ಮಕ್ಕಳಿಗೆ ಒಂದು ಚಕ್ಕೆ ಮಿಠಾಯಿ ಆಗಬಹುದು ಎಂದು ಇದನ್ನು ತನಿಯಾಗಿ ಪ್ರಕಟಿಸಿದ್ದೇವೆ. ಇವುಗಳಲ್ಲಿ ಬರಿಯ ಚಿತ್ರವಾಗಿ ಬಂದ ಕಥೆಗಳು ಕೆಲವು, ಚೌಕಟ್ಟನ್ನೂ ಕಟ್ಟಿಕೊಂಡು ಬಂದವು ಕೆಲವು. ಈ ಕಥೆಗಳಲ್ಲಿ ಕಂಡುಬರುವ ನಿರೂಪಣೆಯ ಪದ್ಧತಿಯೂ ಮಾತಿನ ಧೋರಣೆಯೂ ಗುರಿಯ ಕಡೆಗೆ ನಡೆಯುತ್ತಿರುವ ದೃಷ್ಟಿಯೂ ದೊಡ್ಡವರಿಗೆಲ್ಲ ಮೆಚ್ಚಿಕೆಯಾದೀತೆಂದು ನಮ್ಮ ನಂಬಿಕೆ.

ಈ ಎಂಟು ಕಥೆಗಳನ್ನು ಪ್ರತ್ಯೇಕವಾಗಿ ಪ್ರಕಟಿಸುವುದರಲ್ಲಿ ಸಂಘದ ಇಷ್ಟಾರ್ಥ ಇನ್ನೂ ಒಂದುಂಟು. ಆದೇನೆಂದರೆ.- ಇವುಗಳನ್ನು ನೋಡಿದ ವಿದ್ಯಾರ್ಥಿಗಳಿಗೆ ಈ ಕೆಲಸ ಒಪ್ಪಿಕೆಯಾಗಿ, ಅವರೂ ಇನ್ನಿಷ್ಟು ಇಂತಹ ಕತೆಗಳನ್ನು ನೀರು ಬೆರಸದೆ ಸಂಗ್ರಹಿಸತೊಡಗಬಹುದು ಎಂಬುದು; ಅಲ್ಲದೆ ಇಂತಹ ಸಂಗ್ರಹಗಳನ್ನು ಇನ್ನಿತರ ಪ್ರಕಾಶನ ಮಂದಿರಗಳೂ ಕೈಕೊಂಡು ಪ್ರಕಟಿಸಬಹುದೆಂಬುದು.

ಮನಸ್ಸು ಮಾಡಿದರೆ- ಗ್ರಾಮಾಂತರಗಳಿಂದ ಬರುವ ನಮ್ಮ ವಿದ್ಯಾರ್ಥಿ ವರ್ಗ ನಮ್ಮ 'ನಾಡಕತೆ'ಗಳ ಉದ್ಧಾರಕಾರ್ಯಕ್ಕೆ ಕಂಕಣ ಕಟ್ಟಿ, ಜರ್ಮನಿ ದೇಶದ ಗ್ರಿಮ್ ಸೋದರರು ವಿಶ್ವವಿಖ್ಯಾತರಾದಂತೆ, ಕರ್ಣಾಟಕದ ತುಂಬ ತಮ್ಮ ಹೆಸರನ್ನು ಸಾರ್ಥಕವಾಗಿ ಓಡಿಯಾಡಿಸಬಹುದು.

ಜನವರಿ, ೧೯೫೩ **ಜಿ. ಪಿ. ರಾಜರತ್ನಂ**

ಸೆಂಟ್ರಲ್ ಕಾಲೇಜ್, ಬೆಂಗಳೂರು **ಕರ್ಣಾಟಕ ಸಂಘದ ಪರವಾಗಿ**

ವಂದನೆ

ಇಲ್ಲಿ ಪ್ರತಿ ಕಥೆಯನ್ನೂ ಒಂದು ಹೊಸ ಪುಟದಿಂದ ಆರಂಭಿಸಿದ್ದೇವೆ. ಕೆಲವು ಕಡೆ ಕಥೆ ಮುಗಿದ ಪುಟದ ಕೆಳಗೆ ಸ್ವಲ್ಪ ಅವಕಾಶ ಮಿಕ್ಕಿದ್ದುಂಟು. ಅಂಥಕಡೆ ಅದನ್ನು ವ್ಯರ್ಥ ಮಾಡಬಾರದೆಂದು, ”ಮಂಕು ತಿಮ್ಮನ ಕಗ್ಗ”ದಿಂದ ಕೆಲವು ಸೂಕ್ತಿಗಳನ್ನು ಸೇರಿಸಿದ್ದೇವೆ. ಇದಕ್ಕೂ ಕಥೆಗೂ ಸಂಬಂಧ ಏನೂ ಇಲ್ಲ, ಇರಬೇಕಾದ್ದೂ ಇಲ್ಲ.

”ಕಗ್ಗ”ದಿಂದ ಈ ಪಂಕ್ತಿಗಳನ್ನು ಬಳಸಿಕೊಳ್ಳಲು ಅನುಮತಿ ಕೊಟ್ಟಿದ್ದಕ್ಕಾಗಿ ”ಮಂಕುತಿಮ್ಮನ ಕಗ್ಗ”ದ ಕವಿ ಶ್ರೀ ಡಿ. ವಿ. ಜಿ. ಅವರಿಗೂ ಪ್ರಕಾಶಕರಾದ ಕಾವ್ಯಾಲಯ ಸಂಸ್ಥೆಗೂ ಸಂಘದ ವಂದನೆಗಳು.

ಚಿನ್ನದ ದೋಸೆ

ಕಾರಂತರ ಕಾದಂಬರಿ "ಔದಾರ್ಯದ ಉರುಳಲ್ಲಿ" ಓದುತ್ತಿದ್ದೆ. ಕತೆಯ ಉರುಳಲ್ಲಿ ಸಿಕ್ಕಿ, ಏಳನೆಯ ಅಧ್ಯಾಯ ಮುಗಿಸುವವರೆಗೂ ಪ್ರಜ್ಞೆಯಿಲ್ಲದೆ ಓದಿಬಿಟ್ಟೆ. ನೇತ್ರಾವತಿ ನದಿಯ ನೆರೆಯ ಹಾವಳಿ ಓದಿದಾಗ ನನ್ನ ಕಣ್ಣೂ ಅವಳ ಜ್ಞಾಪಕ ಮಾಡಿತು. ಎಂಟನೆಯ ಅಧ್ಯಾಯ ಪ್ರಾರಂಭ ಮಾಡಿದೆ : "ನೆರೆಗೆ ಬಲಿಯಾದ ಊರವರ ಚಿಂತೆಯು ನೂರಾರು ಬಗೆಯಾಗಿತ್ತು." ಅಷ್ಟು ಹೊತ್ತಿಗೆ ಒಳಗೆ ದೋಸೆ ಹೊಯ್ಯುತ್ತಿರುವ ಶಬ್ದ ಕೇಳಿಸಿತು. ಹಸಿವಿಗೆ ಬಲಿಯಾದ ನನ್ನ ಹೊಟ್ಟೆಯ ಚಿಂತೆ ಪ್ರಾರಂಭವಾಯಿತು. ಗಡಿಯಾರ ನೋಡಿದೆ. ಆಗಲೇ ಒಂದು ಗಂಟೆ ! "ಇದೇನು ಇಷ್ಟು ಹೊತ್ತಾದರೂ ಅಜ್ಜಿಯ ಕರೆ ಇಲ್ಲ!" ಎಂದು ಅಡಿಗೆಯ ಕೋಣೆ ಹೊಕ್ಕೆ. "ಆಯ್ತು ಕಣೋ. ಒಂದು ದಿನ ಸ್ವಲ್ಪ ಹೊತ್ತಾಯ್ತು ಅಂದರೆ ಆಯ್ತು ! ಈಗಿನ ಹುಡುಗರಿಗೆ ಅದೇನು ತಾಳ್ಮೆಯೋ ನಾ ಕಾಣೆ! ಹೋಗಲಿ, ದಿನಾ ದೇವರ ದರ್ಶನ ತೆಗೆದುಕೊಳ್ಳದಿದ್ದರೆ ಅಷ್ಟೇ ಹೋಯಿತು. ವಿದ್ಯಾರ್ಥಿ ನೀನು. ಸರಸ್ವತಿಗೆ ನಮಸ್ಕಾರ ಮಾಡು. ಪರೀಕ್ಷೆಯಲ್ಲಿ ಪಾಸಾಗ್ತೀಯ. ನೋಡು, ನಿನ್ನ ತಂಗಿ ಪುಸ್ತಕಗಳನ್ನು ಹೇಗೆ ಇಟ್ಟು ಅಲಂಕಾರ ಮಾಡಿದ್ದಾಳೆ!" ಸರಿ, ಅಜ್ಜಿ ಹೇಳಿದ ಮೇಲೆ ನಾನು ಮಾತನಾಡುವ ಹಾಗಿಲ್ಲ. ದೇವರ ಕೋಣೆಯ ಕಡೆ ಹೋದೆ. ನನ್ನ ತಂಗಿ "ಸರಸ್ವತೀ ದೇ ಮಜ ದಿವ್ಯಮತಿ"- ಹಾಡುತ್ತಾ ನಮಸ್ಕಾರ ಹಾಕುತ್ತಿದ್ದಳು. "ಸರಿ. ಇವಳಿಗೆ ಬುದ್ಧಿ ಇಲ್ಲ ಅಂತ ಇವಳು ಸರಸ್ವತಿಯನ್ನು ಕೇಳಿಕೊಳ್ಳುತ್ತಾಳೆ. ನಾನು, ಬುದ್ಧಿ ಇರೋನು, ಸೆಂಟ್ರಲ್ ಕಾಲೇಜಿನಲ್ಲಿ ಓದೋನು, ಸರಸ್ವತಿಗೆ, ಒಂದಡಿ ಕಾಗದಕ್ಕೆ, ಅದರ ಮುಂದೆ ಇಟ್ಟಿರುವ ನನ್ನ ತಂಗಿಯ ಹಳೆಯ ಹರಿದುಹೋದ ಪುಸ್ತಕಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಬೇಕೆ ! ಹೀಗೆ ಒಂದು ವೇಳೆ ನಮಸ್ಕಾರ ಮಾಡಿದ್ದರಿಂದ ನನಗೆ ವಿದ್ಯೆ ಬರುವ ಹಾಗಿದ್ದರೆ, ನಾನು ದಿನವೂ ಕಾಲೇಜಿನ ತನಕ ನಡೆದುಕೊಂಡು ಹೋಗಿ, ಅಲ್ಲಿ ಮಧ್ಯಾಹ್ನ ನಿದ್ದೆ ಬಂದರೂ ತಡೆದುಕೊಂಡು, ಅಧ್ಯಾಪಕರ ಕೊರೆತಕ್ಕೆ ನನ್ನ ತಲೆ ಏಕೆ ಒಡ್ಡಬೇಕು? ಎಲ್ಲಾ ಸುಳ್ಳು. ಅಜ್ಜಿಗೊಂದು ಕೆಲಸವಿಲ್ಲ." ಎಂದುಕೊಂಡು ಹಾಗೆಯೇ ಹಿಂದಿರುಗಿ ಹೋಗೋಣವೇ ಎಂದು ನೋಡಿದೆ. ಅಷ್ಟರಲ್ಲಿ ಬಾಗಿಲ ಹಿಂದೆ ಅವಿತು ನೋಡುತ್ತಿದ್ದ ನನ್ನ ತಂಗಿ "ತಡಿ, ಅಜ್ಜಿಗೆ ಹೇಳ್ತೀನಿ. ನಮಸ್ಕಾರ ಮಾಡದೆ ಹಾಗೇ ಬರ್ತೀಯಾ?" ಎಂದು ಹೊರಟಳು. "ಇಲ್ಲಾ ಕಣೆ. ಇಲ್ಲಿ ಬಾರೆ. ನನ್ನ ಷರ್ಟ್ ತೆಗೆದಿಟ್ಟು ನಮ-

ಸ್ಕಾರ ಮಾಡೋಣ ಅಂತ..." ಎಂದು ನಾನು ತಡವರಿಸಬೇಕಾಯ್ತು. ನನಗೆ ನನ್ನ ತಂಗಿ ಅಂದರೆ ಹೆದರಿಕೆ. ಅವಳು ಹೇಳಿದ್ದು ಅಜ್ಜಿಗೆ ವೇದವಾಕ್ಯ. ಯಾವುದೋ ಹಬ್ಬದ ದಿನ ಮರೆತು ಊಟಕ್ಕೆ ಅಂತ ಕುಳಿತೆ. "ಅಜ್ಜಿ, ಅಣ್ಣ ದೇವರಿಗೆ ನಮಸ್ಕಾರ ಮಾಡಲಿಲ್ಲ" ಎಂದಳು. ಸರಿ, ಅಜ್ಜಿ ನನ್ನ ಬಿಡ್ತಾಳೆಯೆ? "ಹೌದೇನೋ?" ಎಂದಳು. "ಇಲ್ಲ ಅಜ್ಜಿ, ಅವಳು ಸುಳ್ಳೇ ಹೇಳ್ತಾಳೆ" ಎಂದೆ. "ನಮ್ಮ ನಿರ್ಮಲಾ ಸುಳ್ಳು ಹೇಳ್ತಾಳೇನೊ? ಅವಳಿನ್ನೂ ಮಗು. ಮಗು ಅಂದರೆ ದೇವರೇ. ದೇವರು ಸುಳ್ಳು ಹೇಳ್ತಾನೇನೋ? ಸುಳ್ಳು ಹೇಳೋದು ನೀವೇ- ಕಾಲೇಜಿನ ಕೋಣಗಳು!" ಎಂಥ ಸಿಟ್ಟು ಬಂದಿತ್ತು ಗೊತ್ತೆ? ನಿರ್ಮಲಾ ಅದೃಷ್ಟ ಚೆನ್ನಾಗಿತ್ತು ಅವೊತ್ತು. ಕೊನೆಗೂ ನಾನು ನಮಸ್ಕಾರ ಮಾಡಿ ಬಂದ ಮೇಲೆ ಊಟ ಬಿತ್ತು. ಮತ್ತೆ ಹಾಗೆಯೇ ಆದೀತು ಎಂದು ಹೆದರಿದೆ. ಷರ್ಟ್ ತೆಗೆದಿಟ್ಟು, "ಸರಸ್ವತೀ, ಈ ನಿರ್ಮಲಾಗೆ ಒಳ್ಳೆಯ ಬುದ್ಧಿ ಕೊಡಮ್ಮ" ಎಂದು ನಮಸ್ಕಾರ ಹಾಕಿಯೇಬಿಟ್ಟೆ.

ಅಷ್ಟು ಹೊತ್ತಿಗೆ ಅಜ್ಜಿಯೇ ಅಲ್ಲಿಗೆ ಒಂದು ಮಡಕೆ ಹಿಡಿದುಕೊಂಡು ಬಂದರು. "ಇದೇನಜ್ಜಿ ಮಡಕೆ?" ಎಂದೆ. ನಿರ್ಮಲಾ "ಅಣ್ಣಾ, ಅದರಲ್ಲಿ ಸೌತೆಕಾಯಿ ದೋಸೆ ಇದೆ." ಎಂದಳು. "ಸೌತೆಕಾಯಿ ದೋಸೆ !- ಮಡಕೇಲಿ?" ಎಂದೆ ಆಶ್ಚರ್ಯದಿಂದ. "ಹೌದಣ್ಣ. ನಾಳೆ ಅದು ಚಿನ್ನ ಆಗಿಬಿಡುತ್ತೆ!" "ಚಿನ್ನ! ಏನೆ ಹಾಗೆಂದರೆ? ಹಾಗೆ ಚಿನ್ನ ಆಗೋ ಹಾಗಿದ್ದರೆ ನಾನು ಓದ್ತಾನೇ ಇರಲಿಲ್ಲ. ಒಂದು ದೋಸೆ ಇಡೋ ಕಡೆ ಹತ್ತು ದೋಸೆ ಇಟ್ಟರೆ ಆಗಿಹೋಯ್ತು!" ಎಂದೆ. ಅದೇನೋ ನನ್ನನ್ನು ವಾದದಲ್ಲಿ ಎಲ್ಲರೂ ಸೋಲಿಸುವವರೇ. "ಅತಿ ಆಸೆ ಗತಿಗೇಡು. ಆಸೆಪಟ್ಟರೆ ಆಗೋಲ್ಲ" ಎಂದಳು. ನನಗೆ Ben Jonson "Alchemist" ನಾಟಕ ಜ್ಞಾಪಕಕ್ಕೆ ಬಂತು. ಅದರಲ್ಲೂ ಹಾಗೇನೆ. "ನೀನು ಆಸೆ ಪಟ್ಟಿದ್ದರಿಂದ Philosopher's stone ತಯಾರು ಮಾಡಲಿಕ್ಕೆ ಆಗಲಿಲ್ಲ", ಅಂತ Subtle ಕೇಡಿ ತಿಳಿಗೇಡಿ Sir Epicure Mammonಗೆ ಹೇಳ್ತಾನೆ. ಅವನೇನೋ ನಂಬಿದ. ನಾನು Sir Epicure Mammonನೇ? ಅಷ್ಟು ಹೊತ್ತಿಗೆ ಅಜ್ಜಿ "ನೋಡೋ. ಅವಳಿಗೆ ಇರುವಷ್ಟು ಜಾಣತನ ನಿನಗಿಲ್ವಲ್ಲೋ. ಹೋಗಲಿ, ಊಟಕ್ಕೆ ಬಾ. ಹಿಂದೆ ನಡೆದ ಒಂದು ಸಮಾಚಾರ ಹೇಳ್ತೇನೆ" ಎಂದಳು. ಸರಿ, ಊಟಕ್ಕೆ ಹೊರಟೆವು. ನನಗೆ ಅಜ್ಜಿಯ 'ಸಮಾಚಾರ' ಅಂದರೆ ಅವಳು ಕತೆ ಕೇಳುವುದು ಅಂದರೆ ತುಂಬಾ ಆಸೆ. ಅವಳಿಗೂ ನಾನು ಅವಳ ಕತೆ ಕೇಳುವುದು ಅಂದರೆ ಆಯ್ತು. ನಾನು ಸುಮ್ಮನೆ ಅವಳು ಹೇಳಿದಕ್ಕೆ 'ಹೂ' ಎಂದು ಹೇಳುತ್ತಾ ಕುಳಿತು ಬಿಡ್ತೇನೆ. ಆಮೇಲೆ ಹಗೂರ ಟೀಕೆ ಪ್ರಾರಂಭ ಮಾಡ್ತೇನೆ. ಆಗ ಅವಳಿಗೆ ಸಿಟ್ಟು ಬಂದುಬಿಡುತ್ತದೆ. 'ಕೇಳೋ ತನಕ ಕೇಳಿ ಈಗ ಸಡ್ಡು ತೆಗೀತೀಯಾ?' ಅಂತ ಕೂಗಾಡಿಬಿಡ್ತಾಳೆ.

ಸರಿ. ಊಟಕ್ಕೆ ನಾನೂ ನಿರ್ಮಲಾ ಕುಳಿತೆವು. ಅಜ್ಜಿ ಈ ಕಡೆ ಬಡಿಸ್ತಾ ಆ ಕಡೆ ಕತೇನೂ ಹೇಳ-ಲಿಕ್ಕೆ ಪ್ರಾರಂಭ ಮಾಡಿದರು :

"ನಾನು ಇವಳ ಹಾಗೆ (ನಿರ್ಮಲಾ ವಯಸ್ಸಿನಷ್ಟು) ಇರಬೇಕಾದರೆ ನಮ್ಮ ಪಕ್ಕದ ಮನೇಲಿ 'ಸು-ಬ್ಬಮ್ಮ' ಅಂತಿದ್ರು. 'ಸುಬ್ಬಮ್ಮ' ಅಂದರೆ ಅವಳ ಹಾಗೆ ದೇವರ ಮೇಲೆ ಭಕ್ತಿ ಯಾರಿಗೂ ಇರಲಿಲ್ಲ. ಬಡವಿ ಪಾಪ. ಗಂಡ ಹೆಂಡತಿ ಯಾರ ಮನೆಯಲ್ಲಾದರೂ ಅಡಿಗೆ ಮಾಡಿ ಬಂದದ್ದರಲ್ಲಿ ಜೀವನ ಸಾಗಿಸುತ್ತಿದ್ದರು. ಗಂಡ ಒಂದು ತರಹ ಬೆಪ್ಪು. ಹೇಳಿದ ಕೆಲಸ ಒಂದಿಷ್ಟು ಮಾಡೋನು. ಕೆಲಸ ಇಲ್ಲದ ಹೊತ್ತಿನಲ್ಲಿ ಜಗಲಿ ಮೇಲೆ ಕುಳಿತು ಎಲೆ ಅಡಿಕೆ ತಿನ್ತಾ ಕುಳಿತಾ ಅಂದರೆ ಆಯ್ತು, ಗಂಟೆಗಟ್ಲೆ ಆದರೂ ಏಳ್ತಾ ಇರಲಿಲ್ಲ. ಪಾಪ ಅವಳ ಮನೆ- ಮನೆ ಎಂದರೆ ಏನು ಮನೆ?- ಸಣ್ಣ ಗುಡಿಸಿಲು- ಆದರೂ ಹೇಗೆ ಅಚ್ಚುಕಟ್ಟಾಗಿಟ್ಟಿದ್ದಳು ಅಂತೀಯಾ? ನೀವು ನೋಡಿ, ಇಷ್ಟು ಚೆನ್ನಾಗಿರೋ ಮನೇನ ಯಾತಕ್ಕೂ ಬೇಡದ ಹಾಗೆ ಮಾಡಿಬಿಡ್ತೀರಲ್ಲಾ. ಕಾಲೇಜಿಂದ ಬಂದ ಕೂಡಲೇ ಪುಸ್ತಕ ಎಲ್ಲೋ ಎಸೆದ- ಬೂಟ್ಸ್ ಮೂಲೆಗೆ ಒಗೆದ- ಒಂದೊಂದು ಸಾರಿ ಹಾಗೇನೆ ಅಡಿಗೆ ಮನೆಗೂ . . . "

"ಈ ಸುಬ್ಬಮ್ಮನ ವಿಚಾರ ಅನ್ನೋದು ಒಳ್ಳೆ ಗ್ರಹಚಾರಕ್ಕೆ ಬಂತಲ್ಲ" ಎಂದುಕೊಂಡೆ. "ಅದಿರಲಿ, ಸುಬ್ಬಮ್ಮನ ಕತೆ ಹೇಳಜ್ಜಿ." ಅಷ್ಟು ಹೊತ್ತಿಗೆ ನಿರ್ಮಲಾ ಅನ್ನ ಕೇಳಿದಳು. ಅಜ್ಜಿ ಅವಳಿಗೆ ಅನ್ನ ಸಾರು ಬಡಿಸಿ ಮತ್ತೆ ಪ್ರಾರಂಭ ಮಾಡಿದಳು :

"ಸರಿ, ಎಲ್ಲಿಯತನಕ ಹೇಳಿದೆ ?" ಎಂದು ಕೇಳಿದಳು. "ಸುಬ್ಬಮ್ಮ ಗುಡಿಸಲು ಅಚ್ಚುಕಟ್ಟಾಗಿ ಇಟ್ಟಿದ್ದಳು" ಎಂದು ಜ್ಞಾಪಿಸಿದೆ.

"ಹ್ಞ. ಒಂದು ದಿನ ಇದೇ ದಿವಸ ಶಾರದೆ ಪೂಜೆ, ದೇವರಿಗೆ ನೈವೇದ್ಯಕ್ಕೆ ಇಡೋಣ ಅಂದರೆ ಮನೇಲೇನೂ ಇಲ್ಲ. ಅದೇನೋ ಅವಳಿಗೆ ಆದಿನ ಸೌತೆಕಾಯಿ ದೋಸೆ ಮಾಡಿ ದೇವರಿಗೆ ಕೊಡ-ಬೇಕು ಅಂತ. ಯಾರ ಮನೇಲಾದರೂ ಸ್ವಲ್ಪ ಹಣ ಕೇಳೋಣ ಅಂದ್ರೆ- 'ಈ ಬಡವಿ ಮತ್ತೆ ಹಿಂತಿರುಗಿ ಎಲ್ಲಿ ಕೊಡ್ತಾಳೆ?–' ಎಂದು ಯಾರೂ ಕೊಡೋವ್ರಿಲ್ಲ. ಆಲೋಚನೆ ಮಾಡಿ ಮಾಡಿ, ಕೊನೆಗೆ ತನ್ನ ಮಗನನ್ನ ಅಡವಿಟ್ಟು ಆದರೂ ದೇವರ ಸೇವೆ ಮಾಡಬೇಕು ಅಂತ ನಿಶ್ಚಯ ಮಾಡಿದಳು."

ನಿರ್ಮಲಾ ಬಾಯಿಗೆ ಒಯ್ದ ತುತ್ತು ಕೆಳಗೆ ಕೆಡವಿಕೊಂಡಳು. "ಹಾ! ಮಗೂನ ಅಡವಿಟ್ಟಳೆ? ನಾನು ನನ್ನ ಗೊಂಬೆ ಕೂಡ ಏನಾದರೂ ಕೊಡೋಲ್ಲ?" ಎಂದಳು.

"ಅದಕ್ಕೇ ನಿಮಗೆ ದೇವರು ಪ್ರಸನ್ನ ಆಗೋಲ್ಲ" ಎಂದಳು ಅಜ್ಜಿ.

"ಹಾಗಾದರೆ ನಿನಗೆ ದೇವರು ಕಾಣಸ್ತಾನೇನಜ್ಜಿ?" ಎಂದು ಕೇಳೋಣ ಎಂದುಕೊಂಡೆ. ಆಮೇಲೆ ಜ್ಞಾಪಕಾ ಆಯ್ತು, ಅವಳು ಕತೆ ಮುಂದೆ ಹೇಳದಿದ್ದರೆ?

ಸರಿ. ಅಜ್ಜಿ ನನಗೆ ಅನ್ನ, ಮಜ್ಜಿಗೆ ಬಡಿಸಿದಳು. ನಿರ್ಮಲಾಗೆ ಪಲ್ಯ ಬಡಿಸಿ ಆಯ್ತು. ಮತ್ತೆ ಕತೆ ಮುಂದುವರಿಯಿತು :

"ಮಗೂನ ಅಡವಿಡ್ತೀನಿ ಅಂದರೂ ಇಟ್ಟುಕೊಳ್ಳುವವರು ಯಾರಿದ್ದಾರೆ? ಅವಳಿಗೆ ಜ್ಞಾಪಕ ಆಯ್ತು. ಪಕ್ಕದ ಕೇರೀಲಿ 'ಲಕ್ಷ್ಮಮ್ಮ' ಅಂತ ಇದ್ದರು. ಲಕ್ಷ್ಮಮ್ಮ ಅಂದರೆ ಸಾಕ್ಷಾತ್ ಲಕ್ಷ್ಮೀನೇ ಆಕೆ. ಬಂಗಾರ ಅಂದರೇನು ಅವರ ಮನೇಲಿ! ಊಟ ಮಾಡೋ ತಟ್ಟೆ ಕೂಡ ಬಂಗಾರದ್ದು! ಆದರೇನು ಮಾಡ್ತೀಯಾ, ಅವಳಿಗೆ ಮಕ್ಕಳೇ ಇರಲಿಲ್ಲ. ಎಷ್ಟು ದೇವರಿಗೆ ಹರಕೆ ಹಾಕಿಕೊಂಡಳೋ, ಎಷ್ಟು ಜನರಿಗೆ ದಾನ ಮಾಡಿದಳೊ! ಸನ್ಯಾಸಿಗಳು ಹೇಳಿದ ಹಾಗೆ ಮಾಡಿ ನೋಡಿದಳು. ಏನು ಆದರೂ ಮಕ್ಕಳೇ ಆಗಲಿಲ್ಲ. ಅವಳಿಗೆ ಈ ಸುಬ್ಬಮ್ಮನ ಮಗುವಿನ ಮೇಲೆ ಕಣ್ಣಿತ್ತು. ಆ ಮಗೂ ಆದರೂ ಹೇಗಿತ್ತು ಅಂತೀಯಾ? ಹೇಗೆ ಹೇಗೆ - ಒಳ್ಳೆ ಚೆಂಡು ಇದ್ದ ಹಾಗಿತ್ತು. ಯಾರು ನೋಡಿದರೂ ಅದನ್ನು ಮುದ್ದು ಮಾಡದೇ ಇರುತ್ತಿರಲಿಲ್ಲ. ಈ ಮಗೂನ ಮುದ್ದಿಡೋಕೋಸ್ಕರ ಲಕ್ಷ್ಮಮ್ಮ ಸುಬ್ಬಮ್ಮನಿಗೆ ಆಗಾಗ ರವೆ ಉಂಡೆ, ಅದು ಇದು ಮಾಡಲಿಕ್ಕೆಂದು ಕರೆಯುತ್ತಿದ್ದಳು. ಒಂದು ದಿನ ಹಗೂರ 'ನಿನಗೇಕಮ್ಮ, ಈ ಮಗು? ನಿನ್ನ ಬಡತನದಿಂದ ಇದಕ್ಕೇಕೆ ಕಷ್ಟ ಕೊಡ್ತೀಯಾ, ನನಗೆ ಸಾಕಲಿಕ್ಕೆ ಕೊಟ್ಟು ಬಿಡು' ಎಂದಳಂತೆ ಲಕ್ಷ್ಮಮ್ಮ. ಲಕ್ಷ್ಮಮ್ಮ ಹೀಗೆ ಹೇಳಿದಳು ಅಂತ ಸುಬ್ಬಮ್ಮ ನಮ್ಮಮ್ಮನ ಹತ್ತಿರ ಹೇಳಿ, ತನ್ನ ಬಡತನಕ್ಕೆ ಆಗಾಗ ಕಣ್ಣೀರು ಹಾಕ್ತಿದ್ದಳಂತೆ. ಅದು ಹೇಗಾದರೂ ಇರಲಿ. ಸುಬ್ಬಮ್ಮನಿಗೆ ಈಗ ಲಕ್ಷ್ಮಮ್ಮನ ಜ್ಞಾಪಕ ಆಯ್ತು. 'ಅವಳ ಹತ್ತಿರ ಹೋದರೆ ಹಣ ಸಿಗುತ್ತದೆ. ಮಗೂನ ಅವಳ ಹತ್ತಿರ ಬಿಟ್ಟು ಪೂಜೆ ಮಾಡಿಬಿಡೋದು. ನಾಳೆ ಕೆಲಸ ಎಲ್ಲಾದರೂ ಸಿಗುತ್ತೆ. ಹಣ ಕೊಟ್ಟು ಮಗೂನ ಬಿಡಿಸಿಕೊಂಡು ಬಂದು ಬಿಡೋದು' ಅಂತ ಮನಸ್ಸಿನಲ್ಲಿ ಮಾಡಿಕೊಂಡು, ಲಕ್ಷ್ಮಮ್ಮನ ಹತ್ತಿರ ಹೋದಳು. ಕೇಳಿದಳು. ಲಕ್ಷ್ಮಮ್ಮ ಇದೇ ಹೊತ್ತು ಅಂತ 'ಹೂ' ಎಂದಳು. "ಎಷ್ಟು ಬೇಕು?" ಎಂದಳು. ಸುಬ್ಬಮ್ಮನಿಗೆ ಒಂದು ರೂಪಾಯಿ ಸಿಕ್ಕರೆ ಸಾಕಾಗಿತ್ತು, ಅಷ್ಟೇ ಕೇಳಿದಳು. ಲಕ್ಷ್ಮಮ್ಮ ಕೊಟ್ಟಳು. ಸುಬ್ಬಮ್ಮ ಅದನ್ನು ತೆಗೆದುಕೊಂಡು ಹೋಗಿ, ಹಿಟ್ಟು ಸೌತೆಕಾಯಿ ಕೊಂಡು, ಸೌತೆಕಾಯಿ ದೋಸೆ ಮಾಡಿ, ಒಂದು ಮಡಕೆಯಲ್ಲಿ ದೇವರ ಮುಂದಿಟ್ಟು, ಮುಚ್ಚಿ ನಮಸ್ಕಾರ ಮಾಡಿ, ನಾಳೆ ಎಲ್ಲಾದರೂ ಕೆಲಸ ಸಿಗು-

ತ್ತೇನೋ ನೋಡೋಣ ಅಂತ ಹೊರಟಳು. ಅಷ್ಟರಲ್ಲೇ ಲಕ್ಷ್ಮಮ್ಮ ಏನು ಮಾಡಿದಾಳೆ ಗೊತ್ತೆ?- ಆ ಊರಿನ ಹೆಂಗಸರಿಗೆಲ್ಲಾ ಹೇಳಿಬಿಟ್ಟಿದ್ದಾಳೆ: 'ಸುಬ್ಬಮ್ಮನನ್ನ ಕೆಲಸಕ್ಕೆ ಕರೀಬೇಡಿ, ಕರೆದರೆ ನೋಡಿ!' ಎಂದು ಎಲ್ಲರಿಗೂ ಹೆದರಿಸಿಬಿಟ್ಟಿದ್ದಾಳೆ. ಲಕ್ಷ್ಮಮ್ಮನ ಮಾತು ಯಾರಾದರೂ ಮೀರೋದು ಅಂದರೆ ಏನು! ದಾರೀಲಿ ಹೋಗಿದ್ದರೆ ಕೆಲಸ ಇಲ್ಲದಿದ್ದರೂ ಸುಮ್ಮನೆ ಕರೆದು ನಾಲ್ಕು ಒಳ್ಳೆಯ ಮಾತನಾಡೋ ಹೆಂಗಸರು ಕೂಡ ಸುಬ್ಬಮ್ಮನ ಕಡೆ ನೋಡೋದಿಲ್ಲ ಆ ದಿನ. ಸುಬ್ಬಮ್ಮನಿಗೆ ಅರ್ಥವಾಗಲಿಲ್ಲ. ಆಗ ಅವಳಿಗೆ ಒಂದು ಮುದುಕಿ ಹೇಳಿದಳಂತೆ: "ನೋಡು, ಲಕ್ಷ್ಮಮ್ಮ ಹೀಗೆ ಹೆದರಿಸಿಬಿಟ್ಟಿದ್ದಾಳೆ. ನಿನ್ನ ಮಗೂ ಹೊಡೆಯೋ ಆಲೋಚನೆ ಇದೆಲ್ಲ. ಅಯ್ಯೋ ಬೆಪ್ಪೆ, ಮಗೂ ಕೊಟ್ಟು ಕೂರೋದೂ ಉಂಟೆ!' ಎಂದು ಹೇಳಿದಳು. ಸುಬ್ಬಮ್ಮನಿಗೆ ಏನು ಮಾಡಬೇಕು ಅಂತ ತಿಳಿಯಲಿಲ್ಲ."

ನನಗೂ ಏನು ಮಾಡಬೇಕು ಅಂತ ತಿಳಿಯಲಿಲ್ಲ. ನನ್ನ ಊಟ ಮುಗಿದು ಹೋಗಿ ಕೈ ಕೂಡ ಒಣಗಲಿಕ್ಕೆ ಬಂತು. ನಾನು ಏಳಲಿಲ್ಲ ಅಂತ ನಿರ್ಮಲಾ ಅವಳೂ ಕುಳಿತಿದ್ದಾಳೆ. "ಅಜ್ಜಿ, ಕೈ ತೊಳೆದು ಬರ್ತೀವಿ, ನೀನೂ ಊಟ ಮಾಡಿಬಿಡು. ಆಮೇಲೆ ಸುಬ್ಬಮ್ಮನ ಕತೆ ಹೇಳು" ಎಂದೆ. 'ಹಾಗೇ ಮಾಡು' ಎಂದು ತಾನೂ ಊಟಕ್ಕೆ ಕೂತಳು. ನಾನೂ ನಿರ್ಮಲಾ ಎದ್ದೆವು. ಕೈ ತೊಳೆದು ಕೊಂಡು ಬಂದೆವು. ನನಗೆ ನಿರ್ಮಲಾ ಮೇಲೆ ಸಿಟ್ಟು ಇದ್ದೇ ಇತ್ತು. "ಈಗ ಅಜ್ಜಿ ಕತೆ ಹೇಳಿದ ಮೇಲೆ"- ಎನ್ನುವಷ್ಟರಲ್ಲೇ, ಅಜ್ಜಿ ಬಾಯಲ್ಲಿ ತುತ್ತು ಇದ್ದಾಗ್ಯೂ "ಕತೆ ಅಲ್ಲಾ ಕಣೋ ಕತ್ತೆ- ನಡೆದ ಸಮಾಚಾರ" ಎಂದಳು. "ಹಾಗೇ ಆಗಲಿ, ಅಜ್ಜಿ. ನೀನು ಮೊದಲು ಊಟ ಮಾಡು" ಎಂದೆ. ಮತ್ತೆ ನಿರ್ಮಲಾ ಕಡೆ ತಿರುಗಿ "ಅಜ್ಜೀ-ದು ಆದ ಮೇಲೆ ಪಾಠ ಓದಿಕೋಬೇಕು ತಿಳಿತೋ? ರಾಜಿ ಜೊತೆಗೆ ಆಟಕ್ಕೆ ಓಡೀಯಾ?" ಎಂ-ದೆ. "ನಾನು ಪುಸ್ತಕ ಎಲ್ಲ ಸರಸ್ವತಿ ಮುಂದಿಟ್ಟು ಬಿಟ್ಟಿದ್ದೇನೆ. ಸಾಯಂಕಾಲ ಪೂಜೆ ಆದ ಮೇಲೇನೆ ತೆಗೆಯೋದು" ಎಂದಳು. ನನಗೆ 'ಅಯ್ಯೋ' ಎನ್ನಿಸಿತು. ನನಗೆ ಹಾಗೆ ಅಂತ ಅವಳು ಮೊದಲೇ ಹೇಳಿದ್ದರೆ, ನನ್ನ ಅಷ್ಟು ಪುಸ್ತಕಾನೂ ತಂದು ಪೇರಿಸಿ "ದೇವಿ, ಈ ದಿನ ನೀನೇ ಇದನ್ನೆಲ್ಲ ಓದಿಕೋ ಅಂತ ಹೇಳಿಬಿಡುತ್ತಿದ್ದೆನಲ್ಲಾ!" ಎನ್ನಿಸಿತು. ಇನ್ನು ಹೇಗೆ ಈ ನಿರ್ಮಲಾ ಮೇಲೆ ಸೇಡುತೀರಿಸಿಕೊಳ್ಳಲಿ ಎಂತ ಆಲೋಚನೆ ಮಾಡ್ತಾ ಇದ್ದೆ. ಅಷ್ಟು ಹೊತ್ತಿಗೆ ಅಜ್ಜಿ ಊಟ ಆಯ್ತು ಅಂತ ತಿಳಿಯೋ ಹಾಗೆ ಒಂದು ತೇಗು ಅಡಿಗೆ ಮನೆಯಿಂದ ಬಂತು. ಸರಿ ಅಂತ ಷರ್ಟು ಹಾಕಿಕೊಂಡು ಬಂದೆ. ಅಷ್ಟು ಹೊತ್ತಿಗೆ ನಿರ್ಮಲಾ ಎಲೆ ಅಡಿಕೆ ಜಜ್ಜಿ ಅಜ್ಜಿಗೆ ಕೊಡಲು ಬಂದಳು. "ಎಲಾ ಎಲಾ! ಹೀಗೆ ಸೀಸಿ ಹೊಡೆಯಲು ಹೆಂಗಸರು ಸಣ್ಣವರಿರಬೇಕಾದರೇ ಪ್ರಾರಂಭ ಮಾಡ್ತಾರಲ್ಲ" ಎಂತ ನನಗೆ ಆಶ್ಚರ್ಯ ಆಯ್ತು. ಅದಕ್ಕೇ ಕಾಲೇಜಿನಲ್ಲಿ ಯಾವ ಆನರ್ಸ್ ತೆಗೆದುಕೊಳ್ಳಿ- Merit scholarship ಇವರಿ-

ಗೇ !

ಎಲೆಅಡಿಕೆ ಅಗಿಯುತ್ತಾ- ಜಗಿಯೋದೇನು ಬಂತು ಅಲ್ಲಿ! ಹಲ್ಲಿದ್ದರಲ್ಲವೆ? ಮೆಲಕು ಹಾಕುತ್ತಾ ಅಜ್ಜಿ ನಿರ್ಮಲ ಚಾಪೆ ಮೇಲೆ ಕುಳಿತರು. ನಾನೂ ಕುಳಿತುಕೊಂಡೆ.

ಅಜ್ಜಿ, "ಎಲ್ಲಿ ತನಕ ಹೇಳಿದೆ?" ಎಂದು ಕೇಳಿದರು. ನನಗೂ ಈ ಗಲಾಟೇಲಿ ಮರೆತುಹೋ-ಗಿತ್ತು. ನಾನು ಆಲೋಚಿಸಲು ಪ್ರಾರಂಭಮಾಡಿದೆ. ಅಷ್ಟರಲ್ಲಿ ನಿರ್ಮಲಾ "ಸುಬ್ಬಮ್ಮನ ಫಜೀತಿ-" ಎಂದಳು. "ನೋಡಿದೆಯಾ, ಈ ಹುಡುಗಿಗಿರೋ ಅಷ್ಟು ಜ್ಞಾಪಕಶಕ್ತಿ ನಿನಗಿಲ್ಲ. ಈ ವಯಸ್ಸಿನಲ್ಲೇ ಹೀಗಾದರೆ ಮುಂದೆ ಹೇಗೋ ಅಪ್ಪ" ಎಂದು ಅಜ್ಜಿ ನಿಟ್ಟುಸಿರುಬಿಟ್ಟಳು. "ಈ ಶನಿ ಒಳ್ಳೇ ನನಗೆ ಬಯ್ಸಿಕೊಳ್ಳೋ ಹಾಗೆ ಮಾಡ್ತಾಳಲ್ಲ. ಸ್ವಲ್ಪ ಹೊತ್ತು ಸುಮ್ಮನಿರಲಿಕ್ಕೇನಾಗಿತ್ತು ಇವಳಿಗೆ?" ಎಂದು-ಕೊಂಡೆ. ಹೆಂಗಸರಿಗೆ ಜ್ಞಾಪಕಶಕ್ತಿ ಜಾಸ್ತಿ ಎನ್ನುವುದು ಆಗ ನನಗೆ ತೋರದೇ ಇರಲಿಲ್ಲ. ಮತ್ತೆ ಅಜ್ಜಿ-

"ಸುಬ್ಬಮ್ಮನಿಗೆ ರಾತ್ರಿ ಎಲ್ಲಾ ನಿದ್ದೆ ಇಲ್ಲ. 'ದೇವರೇ, ನನ್ನ ಮಗೂನ ನನಗೆ ಕೊಡೋ ಹಾಗೆ ಮಾ-ಡು' ಅಂತ ಅತ್ತಿದ್ದೂ ಅತ್ತಿದ್ದೆ. ಅತ್ತು ಅತ್ತು ಹಾಗೇ ನಿದ್ದೆ ಹತ್ತಿತು. ಬೆಳಗ್ಗೆ ಎದ್ದಳು. ಮಗೂ ಜ್ಞಾಪಕ ಆಯ್ತು. 'ಅಯ್ಯೋ, ಮಗೂಗೆ ಹಸಿವಾಗಿದೆಯೋ ಏನೋ, ಈ ದೋಸೆ ಆದರೂ ಒಯ್ತೀನಿ' ಅಂತ ದೇವರ ಮುಂದಿಟ್ಟ ಮಡಕೆ ಮುಚ್ಚಳ ತೆಗೆದು ನೋಡ್ತಾಳೆ ಜಗಜಗ ಹೊಳೀತಾ ಇದೆ!"

"ಏನೂ?"

"ಚಿನ್ನ ಕಣೋ!"

"ಅಂದರೆ"

"ದೋಸೆ ದೇವರ ಆಶೀರ್ವಾದದಿಂದ ಚಿನ್ನ ಆಗಿಹೋಯ್ತು. ಹಾಗೇ ಚಿನ್ನ ಮಾರಿ ಮಗೂನ ಬಿ-ಡಿಸಿಕೊಂಡು ಸಾಯೋತನಕ ಸುಖವಾಗಿದ್ದಳು. ಅದಕ್ಕೇ ನಾವು ವರ್ಷಾ ವರ್ಷಾ ಶಾರದೆ ಪೂಜೆಯ ದಿನ ಮಡಿಕೇಲಿ ಸೌತೆ ಕಾಯಿ ದೋಸೆ ಇಡೋದು !"

"ನಿಜವಾಗಿಯೂ ಚಿನ್ನ ಆಗುತ್ತೇನಜ್ಜಿ?" ಎಂದು ನಿರ್ಮಲಾ ಕೇಳಿದಳು.

"ಹಾಗೆ ಸುಬ್ಬಮ್ಮನಿಗಾಯ್ತು ಅಂತ ನಮಗಾಗುತ್ತೇನೆ?"

ನನಗೆ ಇದೇ ಹೊತ್ತು ಅಂತ ಹೇಳಿದೆ: "ನಿರ್ಮಲಾನ ಅಡವಿಟ್ಟು ದೋಸೆ ಮಾಡಿ ನೋಡಜ್ಜಿ!" ನಿರ್ಮಲಾ ನನ್ನನ್ನ ಗುರುಗುರು ನೋಡಿದಳು. ಇನ್ನು ಬುಳುಬುಳು ಅತ್ತರೆ ಸಮಾಧಾನ ಹೇಗಪ್ಪಾ ಮಾಡೋದು ಅಂತ ನನ್ನ ಕೋಣೆಗೆ ಓಡಿಬಿಟ್ಟೆ.

-ಹಾಲಾಡಿ ಮಾರುತಿರಾವ್.

ಮರಗೋಪಿ

ಒಂದಾನೊಂದು ಕಾಲದಲ್ಲಿ ಮಯೂರವರ್ಮಪುರ ಮತ್ತು ದೈತ್ಯಕೀರ್ತಿಪುರ ಎಂಬ ಎರಡು ಪಟ್ಟಣಗಳಿದ್ದುವು. ಮಯೂರವರ್ಮಪುರದಲ್ಲಿ ಚಂದ್ರಕೀರ್ತಿ ಮಹಾರಾಜನು ರಾಜ್ಯಭಾರ ಮಾಡುತ್ತಿದ್ದನು. ಆತನು ಬಹು ಸತ್ಯವಂತ, ಜನಗಳಿಗೆ ಯಾವ ತೊಂದರೆಯನ್ನೂ ಕೊಡದೆ ನೀತಿವಂತನಾಗಿ ಆಳುತ್ತಿದ್ದ.

ದೈತ್ಯಕೀರ್ತಿಪುರದಲ್ಲಿ ರುದ್ರಾಸುರನೆಂಬ ರಾಕ್ಷಸನು ಆಳುತ್ತಿದ್ದನು. ಅವನು ಕೆಟ್ಟ ಕೆಲಸಗಳನ್ನು ಮಾಡುವುದರಲ್ಲಿ ಎತ್ತಿದ ಕೈ. ಅವನ ಗುಣಗಳು ಮಯೂರವರ್ಮನ ಗುಣಗಳಿಗೆ ವಿರುದ್ಧವಾಗಿದ್ದುವು.

ಹೀಗೆಯೇ ಇರುವಾಗ ರುದ್ರಾಸುರನ ಆಸ್ಥಾನದಲ್ಲಿ ಒಂದು ದಿನ ಗಲಭೆಯಾಯಿತು. ”ನಮ್ಮ ರಾಜ್ಯದಲ್ಲಿ ಯಾರಾದರೂ ಹೋಗಿ ಮಯೂರವರ್ಮನ ಪಟ್ಟಣವನ್ನು ಹಾಳುಮಾಡಿ ಬಂದರೆ ಅವರಿಗೆ ತಕ್ಕ ಬಹುಮಾನ ಕೊಡುತ್ತೇವೆ” ಎಂದು ರಾಜ ನುಡಿದ. ಇಬ್ಬರು ರಾಕ್ಷಸ ದಂಪತಿಗಳು ಮುಂದೆ ಬಂದು, ”ನಾವು ನಾಶಮಾಡಿಬರುತ್ತೇವೆ, ವೀಳ್ಯವನ್ನು ಕೊಡಿ” ಎಂದು ಕೇಳಿದರು. ಹಾಗೆಯೇ ವೀಳ್ಯವನ್ನು ತೆಗೆದುಕೊಂಡು ಹೋದರು.

ಮಯೂರವರ್ಮನಿಗೆ ಸೂಕ್ಷ್ಮಮತಿ ಎಂಬ ಮಗನೂ ನವಿಲು ಚಿತ್ರಾಂಗಿ ಎಂಬ ಮಗಳೂ ಇದ್ದರು. ಇವರಿಬ್ಬರೂ ದಿನವೂ ಕುದುರೆ ಸವಾರಿ ಮಾಡಲು ಊರ ಹೊರಗೆ ಹೋಗುತ್ತಿದ್ದರು. ಒಂದು ದಿನ ಆ ವೀಳ್ಯವನ್ನು ತೆಗೆದುಕೊಂಡು ಬಂದ ರಾಕ್ಷಸರು ರಾಜಕುಮಾರರು ಬೇಟೆಯಿಂದ ಹಿಂದಿರುಗುವ ದಾರಿಯಲ್ಲಿ ಸೊಗಸಾದ ಎರಡು ಬೊಂಬೆಗಳಾಗಿ ಕುಳಿತುಕೊಂಡರು. ನವಿಲು ಚಿತ್ರಾಂಗಿಗೆ ಅವನ್ನು ನೋಡಿದ ಕ್ಷಣವೇ ಮನೆಗೆ ತೆಗೆದುಕೊಂಡು ಹೋಗಬೇಕೆಂಬ ಮನಸ್ಸಾಯಿತು. ಅಣ್ಣನು ಎಷ್ಟು ಬೇಡವೆಂದರೂ ಕೇಳದೆ ಅವುಗಳನ್ನು ತೆಗೆದುಕೊಂಡು ಬಂದು ಮನೆಯಲ್ಲಿಟ್ಟಳು.

ರಾಕ್ಷಸರು ಮಾಯಾವಿಗಳಾದ್ದರಿಂದ ರಾತ್ರಿಯೆಲ್ಲಾ ರಾಕ್ಷಸರಾಗಿಯೂ ಹಗಲೆಲ್ಲಾ ಬೊಂಬೆಗಳಾ-

ಗಿಯೂ ಇರುತ್ತಿದ್ದರು. ರಾತ್ರಿ ಎಲ್ಲರೂ ಮಲಗಿದ ಮೇಲೆ ತಮ್ಮ ನಿಜಸ್ವರೂಪವನ್ನು ತಾಳಿ, ಒಂದೊಂದು ಬೀದಿಯ ಜನರನ್ನು ಒಂದೊಂದು ದಿನ ತಿಂದುಹಾಕುವುದಕ್ಕೆ ಪ್ರಾರಂಭಿಸಿದರು. ಬೆಳಕು ಹರಿದಮೇಲೆ ಯಥಾಪ್ರಕಾರವಾಗಿ ತಮ್ಮ ಜಾಗದಲ್ಲಿ ಬೊಂಬೆಗಳಾಗುತ್ತಿದ್ದರು. ಚಂದ್ರಕೀರ್ತಿ ಮಹಾರಾಜನಿಗೆ ಬಹಳ ದಿಗಿಲಾಯಿತು. ಏನೇನು ಮಾಡಿದರೂ ಅದರ ಗುಟ್ಟು ಪತ್ತೆಯಾಗಲೆ ಇಲ್ಲ. ಎಷ್ಟು ಕಾವಲಿಟ್ಟರೂ ತಿಳಿಯಲು ಸಾಧ್ಯವಾಗಲೇ ಇಲ್ಲ. ಕೊನೆಗೆ ರಾಜನ ದಂಡು, ಪರಿವಾರ, ಮಂತ್ರಿ, ಪ್ರಧಾನಿ ಎಲ್ಲರೂ ಮುಗಿದುಹೋದರು.

ಕೊನೆಯದಾಗಿ ಉಳಿದಿದ್ದವರು ನಾಲ್ಕು ಮಂದಿ : ರಾಜದಂಪತಿಗಳು, ಅವರ ಮಕ್ಕಳು. ಒಂದು ರಾತ್ರಿ ಆ ರಾಕ್ಷಸರು ರಾಜದಂಪತಿಗಳನ್ನು ತಿನ್ನುತ್ತಿದ್ದಾಗ ಪಕ್ಕದಲ್ಲೇ ಮಲಗಿದ್ದ ಸೂಕ್ಷ್ಮಮತಿಗೆ ಎಚ್ಚರವಾಯಿತು. ಭಯ ಪಡದೆ, ಕೂಗದೆ ಎಲ್ಲವನ್ನೂ ನೋಡಿದನು. ಅವರು ಮತ್ತೆ ಬೊಂಬೆಗಳಾಗಿ ತಮ್ಮ ಸ್ಥಾನಕ್ಕೆ ಹೋದುದನ್ನು ಕಂಡನು. "ನಾಳೆ ಈ ಹುಡುಗರನ್ನು ಮುಗಿಸಿದರಾಯಿತು" ಎಂದು ಮಾತಾಡಿಕೊಂಡದ್ದನ್ನು ಕೇಳಿದನು. ಮರುದಿನ ಅಣ್ಣತಂಗಿಯರಿಬ್ಬರೂ ಬಹಳವಾಗಿ ಗೋಳಾಡಿದರು. "ಈ ದಿನ ಇಲ್ಲಿದ್ದರೆ ನಮ್ಮನ್ನೂ ತಿಂದುಹಾಕಿಬಿಡುತ್ತವೆ. ಈ ಊರನ್ನು ಮೊದಲು ಬಿಡೋಣ" ಎಂದು ಅಣ್ಣನು ತಂಗಿಗೆ ಹೇಳಿದನು. ಅದೇ ಪ್ರಕಾರ ತಮಗೆ ಬೇಕಾದ ಬಟ್ಟೆ ಬರೆಗಳನ್ನು ಕಟ್ಟಿಕೊಂಡು ಬಹುದೂರ ಪ್ರಯಾಣ ಮಾಡಿದರು. ಸಾಯಂಕಾಲದ ವೇಳೆಗೆ ಒಂದು ಪಟ್ಟಣಕ್ಕೆ ಬಂದು ಸೇರಿದರು.

ಆ ಊರಿನ ಬಾಗಿಲ ಹತ್ತಿರ ಒಬ್ಬ ಸುಣ್ಣ ಮಾರುವವನು ಕುಳಿತಿದ್ದ. ಇವರು ಅವನ ಹತ್ತಿರ ಹೋಗಿ ನಡೆದ ಎಲ್ಲಾ ವಿಚಾರವನ್ನೂ ವಿವರಿಸಿ ತಮ್ಮನ್ನು ಕಾಪಾಡಬೇಕೆಂದು ಬೇಡಿಕೊಂಡರು. ಆ ಸತ್ಯವಂತನು ಅವರನ್ನು ಒಂದು ನೆಲಮಾಳಿಗೆಯಲ್ಲಿ ಹಾಕಿ ಭದ್ರಪಡಿಸಿದನು. ಅಷ್ಟು ಹೊತ್ತಿಗೆ ಆ ರಾಕ್ಷಸರು ಮನುಷ್ಯರ ವೇಷವನ್ನು ತಾಳಿ "ನನ್ನ ಮಕ್ಕಳನ್ನು ನೋಡಿದೆಯೇನಪ್ಪಾ, ರಾಜಕುಮಾರರ ಹಾಗೆ ಇದ್ದಾರೆ" ಎಂದು ಆ ಸುಣ್ಣಮಾರುವವನ ಹತ್ತಿರಕ್ಕೆ ಬಂದು ಗೋಳಾಡಿದರು. ಊರಿನ ಮುಂದೆ ಒಂದು ಇಳಿಯುವ ಭಾವಿಯಿತ್ತು. ಸುಣ್ಣ ಮಾರುವವನು ಆ ಮಾಯಾವಿಗಳ ಗುಟ್ಟನ್ನು ಅರಿತುಕೊಂಡು, ಭಾವಿಯ ಕಡೆ ಕೈತೋರಿಸುತ್ತಾ "ಈಗ ಇಬ್ಬರು ಹುಡುಗರು ಆ ಭಾವಿಗೆ ನೀರು ಕುಡಿಯಲು ಹೋದರು" ಎಂದು ಹೇಳಿದ. ಕೂಡಲೆ ಆ ರಾಕ್ಷಸಿಗಳು ಅಲ್ಲಿಗೆ ಹೋಗಿ ಆ ಭಾವಿಯನ್ನೆಲ್ಲಾ ಹುಡುಕಿದರು. ಸುಣ್ಣ ಮಾರುವವನು ಜಾಗ್ರತೆ ತನ್ನ ಸುಣ್ಣವನ್ನೆಲ್ಲಾ ಕತ್ತೆಗಳ ಮೇಲೆ ಹೇರಿಕೊಂಡು ಭಾವಿಯ ಹತ್ತಿರಕ್ಕೆ ಹೋಗಿ ಅದನ್ನೆಲ್ಲಾ ಭಾವಿಯಲ್ಲಿ ಸುರಿದನು. ರಾಕ್ಷಸಿಗಳು ಅಲ್ಲಿಯೇ ಬೆಂದು ಹೋದರು.

ಸುಣ್ಣಮಾರುವವನು ಸಂತೋಷದಿಂದ ಈ ಎಲ್ಲ ಸುದ್ದಿಯನ್ನು ರಾಜಕುಮಾರನಿಗೂ ಕುಮಾರಿಗೂ ತಿಳಿಸಿದನು. ಅವರು ಸಂತೋಷಪಟ್ಟು ತಮ್ಮ ಮೈ ಮೇಲಿದ್ದ ಒಡವೆಗಳನ್ನೆಲ್ಲಾ ಅವನಿಗೆ ಕೊಟ್ಟು ಬಿಟ್ಟರು. ಆ ರಾತ್ರಿ ಅಲ್ಲಿ ತಂಗಿದ್ದು, ಬೆಳಗ್ಗೆ ಸ್ವಲ್ಪ ತಿಂಡಿಯನ್ನು ತಿಂದು ಮುಂದೆ ನಡೆದರು.

ಮುಂದೆ ಹೋಗುತ್ತಿರುವಾಗ ದಾರಿಯಲ್ಲಿ ಒಂದು ಕೈಮರ ಬಂದಿತು. ಅದರಲ್ಲಿ 'ಇಬ್ಬರೂ ಒಂದೇ ಕಡೆಗೆ ಹೋದರೆ ಅಪಾಯ' ಎಂದು ಬರೆದಿತ್ತು. ಅದನ್ನು ಓದಿ ಅವರಿಬ್ಬರೂ ಬಹಳವಾಗಿ ದುಃಖಿಸಿದರು. ಕೊನೆಗೆ ಸಮಾಧಾನ ಹೊಂದಿ, ಅಣ್ಣ ಒಂದು ಕಡೆ, ತಂಗಿ ಒಂದು ಕಡೆ ಹೋಗಬೇಕೆಂದು ನಿರ್ಧರಿಸಿ ಕೊಂಡರು. 'ಒಂದಾನೊಂದು ಕಾಲಕ್ಕಾದರೂ ನಾವು ಬದುಕಿದ್ದರೆ ಮತ್ತೆ ಕಲೆಯಬಹುದು' ಎಂದು ಗುರುತಿಗೋಸ್ಕರ ಹುಣಿಸೆಯ ಬೀಜವನ್ನು ತಂಗಿಯೂ ಜಾಲಿಯ ಬೀಜವನ್ನು ಅಣ್ಣನೂ ತಮ್ಮ ತಮ್ಮ ದಾರಿಯಲ್ಲಿ ನೆಟ್ಟುಕೊಂಡು ಹೊರಟರು. ಅವರು ಹೊರಡುವುದಕ್ಕೆ ಮುಂಚೆ ತನ್ನ ತಮ್ಮ ಹೆಸರುಗಳ ಮುದ್ರೆಯುಂಗುರಗಳನ್ನು ಬದಲಾಯಿಸಿಕೊಂಡರು.

ಸೂಕ್ಷ್ಮಮತಿಯು ತಂದಿದ್ದ ಜಾಲಿಯ ಬೀಜಗಳು ಮುಗಿಯುವ ಹೊತ್ತಿಗೆ ಒಂದು ಪಟ್ಟಣದ ಹೆಬ್ಬಾಗಿಲಿಗೆ ಬಂದು ಸೇರಿದ. ಊರು ನೋಡುವುದಕ್ಕೆ ಬಹಳ ಚೆನ್ನಾಗಿತ್ತು. ಎಲ್ಲಿ ನೋಡಿದರೂ ಜನಗಳು ಉತ್ಸಾಹದಿಂದ ಓಡಾಡುತ್ತಿದ್ದರು.

ಆ ಊರಿನ ರಾಜ ಸತ್ತು ಹೋಗಿದ್ದರಿಂದ ಪಟ್ಟದ ಆನೆಯ ಕೈಗೆ ಹೂ ಮಾಲೆಯನ್ನು ಕೊಟ್ಟು, ಅದು ಯಾರ ಕೊರಳಿಗೆ ಹಾಕುತ್ತದೆಯೋ ಅವರೇ ರಾಜ ಎಂದು ಏರ್ಪಾಟು ಮಾಡಿದ್ದರು. ಅದೇ ಪ್ರಕಾರ ಆನೆಯ ಕೈಗೆ ಮಾಲೆಯನ್ನು ಕೊಟ್ಟು, ಅದು ಯಾರ ಕೊರಳಿಗೆ ಹಾಕುತ್ತದೆಯೋ ಎಂದು ಜನ ಅದನ್ನು ಹಿಂಬಾಲಿಸಿ ಬರುತ್ತಿದ್ದರು. ಆನೆಯು ನೇರವಾಗಿ ಊರು ಬಾಗಿಲಿಗೆ ಬಂದು ಸೂಕ್ಷ್ಮಮತಿಯ ಕೊರಳಿಗೆ ಮಾಲೆಯನ್ನು ಹಾಕಿ, ತನ್ನ ಹೆಗಲಮೇಲೆ ಕೂಡಿಸಿಕೊಂಡು ಅರಮನೆಯ ಕಡೆ ಹೊರಟಿತು. ಅದನ್ನುನೋಡಿ ಎಲ್ಲರೂ ಆಶ್ಚರ್ಯಪಟ್ಟರು. ಕೊನೆಗೆ ಸೂಕ್ಷ್ಮಮತಿಯ ವೃತ್ತಾಂತವೆಲ್ಲಾ ತಿಳಿದ ಮೇಲೆ ಸಂತೋಷಪಟ್ಟರು. ಅವನಿಗೆ ಪಟ್ಟವನ್ನು ಕಟ್ಟಿ ಅಲ್ಲಿನ ರಾಜಕುಮಾರಿಯನ್ನು ಕೊಟ್ಟು ಲಗ್ನ ಮಾಡಿದರು.

ಇತ್ತ ಕಡೆ ನವಿಲುಚಿತ್ರಾಂಗಿ ಬರುತ್ತಿರುವಾಗ ಆಕೆಯ ಹುಣಿಸೆಯ ಬೀಜಗಳು ಒಂದು ವನದ ಹತ್ತಿರಕ್ಕೆ ಬರುವ ವೇಳೆಗೆ ಮುಗಿದುಹೋದುವು. ಅಲ್ಲಿಯೇ ಆಕೆ ಯೋಚನೆ ಮಾಡುತ್ತ ಕುಳಿತಿರಲು ಅಲ್ಲಿಗೆ ಒಬ್ಬ ರಾಜಕುಮಾರನು ತನ್ನ ಸ್ನೇಹಿತರೊಡನೆ ಬೇಟೆಯಾಡುವುದಕ್ಕೆ ಬಂದು, ವನದಲ್ಲಿದ್ದ

ನವಿಲುಚಿತ್ರಾಂಗಿಯನ್ನು ನೋಡಿ ಆಕ್ಷಣವೇ ಆಕೆಯಲ್ಲಿ ಅನುರಕ್ತನಾದ. ತನ್ನ ಪರಿವಾರದವರನ್ನು ಆಕೆಯ ಹತ್ತಿರಕ್ಕೆ ಕಳುಹಿಸಿ, ಆಕೆಯ ಎಲ್ಲ ವಿಚಾರಗಳನ್ನೂ ತಿಳಿದುಕೊಂಡು, ತನ್ನ ತಂದೆಯ ಅಪ್ಪಣೆಯಂತೆ ಕೆಲವೇ ದಿನಗಳಲ್ಲಿ ಆಕೆಯನ್ನು ಲಗ್ನವಾದ. ಹೀಗೆ ಅಣ್ಣತಂಗಿಯರು ಒಬ್ಬೊಬ್ಬರು ಒಂದೊಂದು ಕಡೆ ಸುಖವಾಗಿ ಸೇರಿಕೊಂಡರು.

ನವಿಲುಚಿತ್ರಾಂಗಿಯ ಹೊಟ್ಟೆಯಲ್ಲಿ ರತ್ನಕೀರ್ತಿಯೆಂಬ ಮಗನೂ, ಸೂಕ್ಷ್ಮಮತಿಗೆ ಪದ್ಮಾವತಿಯೆಂಬ ಮಗಳೂ ಜನಿಸಿದರು. ಅವರವರು ಅವರವರ ಯೋಗ್ಯತೆಗೆ ಅನುಸಾರವಾಗಿ ತನ್ನ ಮಕ್ಕಳಿಗೆ ವಿದ್ಯಾಬುದ್ಧಿಯನ್ನು ಕಲಿಸಿದರು. ಇಬ್ಬರೂ ಪ್ರಾಪ್ತವಯಸ್ಕರಾಗಿ ಲಗ್ನಯೋಗ್ಯರಾಗಿದ್ದರು. ಇಷ್ಟು ದಿನಗಳು ಕಳೆದಾಗ್ಯೂ ಅಣ್ಣನ ಸಮಾಚಾರ ತಂಗಿಗೂ, ತಂಗಿಯ ಸಮಾಚಾರ ಅಣ್ಣನಿಗೂ ಗೊತ್ತಾಗಿರಲಿಲ್ಲ.

ಹೀಗಿರಲು, ಯಾವುದೋ ಕಾಯಿಲೆಯಿಂದ ರತ್ನಕೀರ್ತಿಯ ತಂದೆ ತೀರಿಕೊಂಡನು. ಇದರಿಂದ ಊರಿನ ಜನಗಳಿಗೂ, ರಾಣಿಗೂ, ಮಗಳಿಗೂ ವಿಶೇಷವಾಗಿ ದುಃಖವಾಯಿತು. ಕೊನೆಗೆ ಏನುಮಾಡಲೂ ತೋಚದೆ ಸಂಪ್ರದಾಯದ ಪ್ರಕಾರ ರತ್ನಕೀರ್ತಿಯೇ ಪಟ್ಟವನ್ನು ಕಟ್ಟಿಕೊಂಡನು. ಸಿಂಹಾಸನದ ಮೇಲೆ ಕೂಡುವವನು ತನ್ನ ಪತ್ನಿಸಮೇತ ಕೂಡಬೇಕೆಂದು ಆಗಿನ ಕಾಲದಲ್ಲಿ ಒಂದು ಪದ್ಧತಿ ಜಾರಿಯಲ್ಲಿತ್ತು. ಆ ಕಾರಣದಿಂದ ರತ್ನಕೀರ್ತಿ ಲಗ್ನ ಮಾಡಿಕೊಳ್ಳಲೇ ಬೇಕಾಯಿತು. ಇಷ್ಟು ಹೊತ್ತಿಗೆ ನವಿಲುಚಿತ್ರಾಂಗಿ ತನ್ನ ಅಣ್ಣನ ನೆನಪನ್ನು ಮಾಡಿಕೊಂಡು, ತನ್ನ ಹಿಂದಿನ ವೃತ್ತಾಂತವನ್ನೆಲ್ಲಾ ಮಗನಿಗೆ ತಿಳಿಸಿದಳು. ”ಹುಣಿಸೆ ಮರಗಳ ಸಾಲನ್ನು ಹಿಡಿದು ಹೋದರೆ ಮುಂದೆ ಜಾಲಿ ಮರಗಳ ಸಾಲು ಬರುತ್ತದೆ; ಅದರಂತೆಯೇ, ಅದೇ ಮಾರ್ಗವಾಗಿ ಹೋದರೆ ನಿಮ್ಮ ಮಾವನು ಹೋದ ಜಾಗಕ್ಕೆ ಹೋಗುತ್ತೀಯೆ” ಎಂದು ದಾರಿಯನ್ನು ಹೇಳಿ ಕೊಟ್ಟಳು. ಅದೆಲ್ಲವನ್ನೂ ತಿಳಿದುಕೊಂಡು ರತ್ನ ಕೀರ್ತಿ ತನ್ನ ಮಾವನನ್ನು ನೋಡಿಬರಲು ಹೊರಟ. ಅವನು ಹೊರಡುವಾಗ್ಯೆ, ಹಿಂದೆ ತಾವು ಬದಲಾಯಿಸಿಕೊಂಡಿದ್ದ ಮುದ್ರೆಯುಂಗುರವನ್ನು ನೆನಪಿಗಾಗಿ ಕೊಟ್ಟು, ನನ್ನ ಸೊಸೆ ಹುಟ್ಟಿದ್ದರೆ ಅವಳನ್ನು ಜೊತೆಯಲ್ಲಿಯೇ ಕರೆದುಕೊಂಡು ಬಾ ಎಂದು ಹರಸಿದಳು.

ರತ್ನಕೀರ್ತಿ ತನ್ನ ತಾಯಿ ಹೇಳಿದ ಮಾರ್ಗವಾಗಿಯೇ ಹೋಗಿ ತನ್ನ ಮಾವನ ಊರನ್ನು ಸೇರಿದ. ಅದೇ ಊರಿಗೆ ಜಾಲಿಯ ಮರಗಳು ಕೊನೆಯಾಗಿದ್ದುವು. ಅದೇ ತನ್ನ ಮಾವನ ಊರು ಎಂಬುದು ಅವನಿಗೇನು ಗೊತ್ತು? ಹಿಂದೆ ತನ್ನ ಮಾವನು ಕುಳಿತ ಜಾಗದಲ್ಲಿಯೇ ಕುಳಿತುಕೊಂಡನು. ಅವನು

ಕುಳಿತಿದ್ದ ಜಾಗದಲ್ಲಿ ಅಂದರೆ ಊರು ಮುಂದೆ ಒಂದು ಇಳಿಯುವ ಭಾವಿಯಿದ್ದಿತು. ಊರಿಗೆಲ್ಲಾ ಅದೊಂದೇ ಭಾವಿ. ರಾಜನ ಮನೆಯ ದಾಸಿಯರು ಅಲ್ಲಿಗೆ ನೀರಿಗೆ ಬಂದಿದ್ದರು. "ಸಾಕಮ್ಮಾ ಸಾಕು, ಈ ಪದ್ಮಾವತಿಯ ಸ್ನಾನಕ್ಕೆ ನೀರು ಹೊರಲು ಸಾಧ್ಯವೇ ಇಲ್ಲ. ಎಷ್ಟು ಹಂಡೆಗಟ್ಟಲೆ ಕಾಯಿಸಿದರೂ ಸಾಲದು" ಎಂದು ಅವರವರಲ್ಲೇ ಗೊಣಗುತ್ತಿದ್ದರು. ಈ ಪದ್ಮಾವತಿ ಯಾರು? ನನ್ನ ಮಾವನು ಇಲ್ಲಿಯೇ ಇರಬಹುದೆ? ಇವರನ್ನು ವಿಚಾರ ಮಾಡೋಣವೇ?- ಎಂದು ರತ್ನಕೀರ್ತಿ ಯೋಚನೆ ಮಾಡುತ್ತಿದ್ದ. ಅಷ್ಟರಲ್ಲಿ ಅವರಲ್ಲೊಬ್ಬಾಕೆ ಅವನನ್ನು ಕೈಸನ್ನೆ ಮಾಡಿ ಕರೆದಳು. ಏನಿರಬಹುದೆಂದು ರತ್ನಕೀರ್ತಿ ಹತ್ತಿರಕ್ಕೆ ಹೋದ. ಆಕೆ "ಈ ಕೊಡವನ್ನು ಸ್ವಲ್ಪ ಎತ್ತಿಕೊಡಪ್ಪ" ಎಂದಳು. ರತ್ನಕೀರ್ತಿ ಇದೇ ಸಮಯ ಅಂದುಕೊಂಡು "ಯಾರಿಗೆ ಈ ನೀರು?" ಎಂದು ಕೇಳಿದ. "ಈ ಊರಿನ ಮಹಾರಾಜ ಸೂಕ್ಷ್ಮಮತಿ ಇದ್ದಾನಲ್ಲಾ, ಆತನ ಮಗಳು ಪದ್ಮಾವತಿಗೆ. ನನಗಂತೂ ನೀರು ಹೊತ್ತು ಹೊತ್ತು ಸಾಕಾಗಿಹೋಗಿದೆ" ಎಂದು ಹೇಳಿದರು.

ರತ್ನಕೀರ್ತಿಗೆ ಅದನ್ನು ಕೇಳಿ ಬಹಳ ಸಂತೋಷವಾಯಿತು. ಕಾರಣ: ತನ್ನ ಮಾವನನ್ನು ಅವನು ನೋಡಿರಲಿಲ್ಲವಾದರೂ ಆತನ ಹೆಸರನ್ನು ತನ್ನ ತಾಯಿಯಿಂದ ತಿಳಿದುಕೊಂಡಿದ್ದ. ಕೂಡಲೆ ಕೊಡವನ್ನು ಹೊರಿಸಿ, ತನ್ನ ಕೈಲಿದ್ದ ಮುದ್ರೆಯುಂಗುರವನ್ನು ಅದರಲ್ಲಿ ಹಾಕಿದ. ಅದು ಶಬ್ದ ಮಾಡಲು, ಆ ದಾಸಿ "ಏನಪ್ಪಾ, ಕೊಡದಲ್ಲಿ ನೀನು ಕಲ್ಲು ಮಣ್ಣು ಹಾಕಿದ ಹಾಗಾಯಿತಲ್ಲ? ನಮ್ಮ ರಾಜಕುಮಾರಿ ಸುಮ್ಮನೆ ಬಿಡುವುದಿಲ್ಲ. ಏನು ಮಾಡಿದೆ, ಹೇಳು" ಎಂದಳು. "ಏನೂ ಇಲ್ಲ, ನನ್ನ ಕೈಲಿದ್ದ ಉಂಗುರ ಅದಕ್ಕೆ ತಾಕಿತು" ಎಂದು ತನ್ನ ಬೆರಳಿನಲ್ಲಿದ್ದ ಮತ್ತೊಂದು ಉಂಗುರವನ್ನು ತೋರಿಸಿದ.

ದಾಸಿ ಅರಮನೆಗೆ ಹೋಗಿ ನೀರನ್ನು ಹಂಡೆಗೆ ಸುರಿದ ತತ್‌ಕ್ಷಣವೇ ಅದು ಶಬ್ದ ಮಾಡಿತು. "ಏನೆ ಅದು, ಕಲ್ಲು ಮಣ್ಣನ್ನೆಲ್ಲಾ ತಂದು ಹಾಕುತ್ತೀರಾ?" ಎಂದು ಸ್ನಾನಮಾಡಲು ಬಂದಿದ್ದ ರಾಜಕುಮಾರಿ ದಾಸಿಯನ್ನು ಹೊಡೆದಳು. ಹಾಗೆಯೇ ಹಂಡೆಗೆ ಕೈ ಹಾಕಿನೋಡಿದಳು; ಕೈಗೆ ಉಂಗುರ ಸಿಕ್ಕಿತು. ನೋಡುವುದಕ್ಕೆ ಬಹಳ ಚೆನ್ನಾಗಿತ್ತು, ಅದರಲ್ಲಿ ತನ್ನ ತಂದೆಯ ಹೆಸರನ್ನು ನೋಡಿ ಆಶ್ಚರ್ಯಪಟ್ಟಳು. ರಾಜಕುಮಾರಿ ನಡೆದ ಎಲ್ಲಾ ವಿಚಾರವನ್ನೂ ದಾಸಿಯಿಂದ ತಿಳಿದುಕೊಂಡು ತನ್ನ ತಂದೆಗೆ ತಿಳಿಸಿದಳು. "ಯಾರೋ ಊರಿನ ಹೊರಗೆ ಇದ್ದಾನಂತೆ, ನೋಡಲು ರಾಜಕುಮಾರನ ಹಾಗೆ ಕಾಣುತ್ತಾನಂತೆ" ಎಂದು ಎಲ್ಲವನ್ನೂ ತಂದೆಯ ಸಂಗಡ ತಿಳಿಸಿದಳು. ರಾಜನು ಭಟರನ್ನು ಕಳುಹಿಸಿ ಕೂಡಲೆ ಕರೆಸಿದ. ರತ್ನಕೀರ್ತಿಯಿಂದ ಎಲ್ಲ ಸಮಾಚಾರ ತಿಳಿದ ಮೇಲೆ ಸಂತೋಷದಿಂದ ತನ್ನ ಅಳಿಯನನ್ನು ಬಾಚಿ ತಬ್ಬಿಕೊಂಡ. ತನ್ನ ತಂಗಿಯ ಯೋಗಕ್ಷೆಯವನ್ನು ಪುನಃ ಪುನಃ ಕೇಳಿದ. ಹಾಗೆಯೇ

ತನ್ನ ಭಾವಮೈದುನನ ಮೃತ್ಯುವಾರ್ತೆಯನ್ನು ಕೇಳಿ ದುಃಖಪಟ್ಟ. ಮರೆಯಲ್ಲಿಯೇ ನಿಂತುಕೊಂಡು ಪದ್ಮಾವತಿ ಎಲ್ಲವನ್ನೂ ಕೇಳಿದಳು. ಒಂದೆರಡು ಬಾರಿ ಕದ್ದು ರತ್ನಕೀರ್ತಿಯನ್ನು ನೋಡಿದಳು. ಅವನ ಸೌಂದರ್ಯ ಅವಳಲ್ಲಿ ಮೋಹವನ್ನುಂಟುಮಾಡಿತು. ಅವನನ್ನೇ ಲಗ್ನವಾಗಬೇಕೆಂದು ನಿಷ್ಕರ್ಷಿಸಿದ-ಳು.

ಅಳಿಯ ಬಂದಿದ್ದನೆಂದು ವಿಶೇಷ ಭೋಜನಗಳಾದುವು. ಊಟ ಮುಗಿದ ಮೇಲೆ ಸೂಕ್ಷ್ಮಮ-ತಿಯು ಅಳಿಯನನ್ನು ಕುರಿತು "ನಿನ್ನನ್ನು ನೋಡಿ ಬಹಳ ಸಂತೋಷವಾಯಿತು, ಪದ್ಮಾವತಿ ಕೂಡ ನಿನ್ನ ಹಾಗೆ ಬೆಳೆದು ದೊಡ್ಡವಳಾಗಿದ್ದಾಳೆ. ಅವಳನ್ನೂ ಜೊತೆಯಲ್ಲಿಯೇ ಕರೆದುಕೊಂಡು ಹೋಗು, ಲಗ್ನ ಮಾಡಿಕೊಡುತ್ತೇನೆ" ಎಂದು ನುಡಿದ. ಇದರಿಂದ ಸಂತೋಷವೂ, ಪದ್ಮಾವತಿಯನ್ನು ನೋ-ಡುವ ಕುತೂಹಲವೂ ರತ್ನಕೀರ್ತಿಗೆ ಲಭಿಸಿದುವು. ಈ ವಿಷಯ ಪದ್ಮಾವತಿಗೂ ತಿಳಿದು ಆನಂದವಾ-ಯಿತು.

ನಾಚಿಕೆಯಿಂದ ಪದ್ಮಾವತಿ ಮೊದಲಿನ ಹಾಗೆ ಹೊರಗಡೆ ಓಡಾಡುತ್ತಿರಲಿಲ್ಲ. ರತ್ನಕೀರ್ತಿ ಕೂಡ ನಾಚಿಕೆಯಿಂದ ಅಂತಃಪುರಕ್ಕೆ ಹೋಗುವ ಧೈರ್ಯಮಾಡಿರಲಿಲ್ಲ. ಹೀಗೇ ಎಂಟು ದಿನಗಳು ಕಳೆದು-ಹೋದುವು. ಕೊನೆಗೆ ಒಂದು ದಿನ ಪದ್ಮಾವತಿಯನ್ನು ನೋಡಬೇಕೆಂದು ಎಲ್ಲರೂ ಮಲಗಿದ ಮೇಲೆ ರತ್ನಕೀರ್ತಿ ಅಂತಃಪುರದ ಕಡೆಗೆ ಹೊರಟ. ಬಾಗಿಲನ್ನು ಸಮೀಪಿಸುತ್ತಿದ್ದ ಹಾಗೆಯೇ ಒಂದು ನಾ-ಗರ ಹಾವು ಬಂದು ಅವನನ್ನು ಕಚ್ಚಿತು. "ಅಮ್ಮಾ!" ಎಂದು ಕೂಗಿ ಅಲ್ಲಿಯೇ ಬಿದ್ದು ಪ್ರಾಣಬಿಟ್ಟ. ಅವನ ಕೂಗಿನಿಂದ ಎಲ್ಲರೂ ಎಚ್ಚರವಾಗಿ ಅಲ್ಲಿಗೆ ಓಡಿಬಂದರು. ರಾಜನಂತೂ ಬಹಳವಾಗಿ ದುಃ-ಖಪಟ್ಟ. "ನನ್ನನ್ನು ನೋಡಲು ಬಂದಿದ್ದನೆಂದು ಕಾಣುತ್ತದೆ, ಎಂತಹ ಆಪತ್ತು ಬಂದು ಒದಗಿತು? ನಾನು ಒಂದು ಸಲವಾದರೂ ಮುಖವನ್ನು ತೋರಿಸಲಿಲ್ಲ. ಎಂತಹ ಪಾಪಿಷ್ಠೆ" ಎಂದು ಪದ್ಮಾವತಿ ಮರುಗಿದಳು. "ಹೀಗೆ ಯೋಚನೆ ಮಾಡಿದರೆ ಸರಿಯಲ್ಲ, ನಾನು ಈ ಶವವನ್ನು ಅತ್ತೆಯವರ ಹತ್ತಿ-ರಕ್ಕೆ ತೆಗೆದುಕೊಂಡು ಹೋಗುತ್ತೇನೆ. ನನಗೆ ಆಕಾಶದಲ್ಲಿ ಹಾರಬಲ್ಲ ಒಂದು ಮೇನವನ್ನೂ, ನನ್ನ ಶರೀರವೆಲ್ಲಾ ಮುಚ್ಚಿ, ಕಣ್ಣು ಮಾತ್ರ ಕಾಣುವ ಒಂದು ಮರದ ಗೌನನ್ನೂ ಮಾಡಿಸಿಕೊಡಿ" ಎಂದು ಪದ್ಮಾವತಿ ತಂದೆಯನ್ನು ಕೇಳಿದಳು.

ರಾಜನಿಗೇನು ಕಡಮೆ? ಎಲ್ಲವನ್ನೂ ಕ್ಷಣಾರ್ಧದಲ್ಲಿ ಮಾಡಿಸಿಕೊಟ್ಟ. ಪದ್ಮಾವತಿ ತನ್ನ ತಂ-ದೆ ಹೇಳಿದ ಗುರುತಿನಂತೆ, ಶವವನ್ನು ಮೇನದಲ್ಲಿಟ್ಟುಕೊಂಡು ಹೊರಟಳು. ದಾರಿಯಲ್ಲಿ ಪಾರ್ಶ್ವ-

ತೀ ಪರಮೇಶ್ವರರ ಕೃಪೆಯಿಂದ ಗಂಡನನ್ನು ಬದುಕಿಸಿಕೊಂಡಳು. ರತ್ನಕೀರ್ತಿ ಎಲ್ಲ ವಿಷಯವನ್ನೂ ಅವಳಿಂದ ತಿಳಿದುಕೊಂಡ. ಹಾಗೆಯೇ ಕಟ್ಟಿಗೆಯಂತಹ ಮೈಯುಳ್ಳ ತನ್ನ ಸೊಸೆಯನ್ನು ನೋಡಿ ಅಸಹ್ಯಪಟ್ಟ. 'ನೀನು ಖಂಡಿತ ನಮ್ಮ ಮನೆಗೆ ಬರಬೇಡ, ಇದೇ ಮೇನದಲ್ಲಿಯೇ ಹಿಂದಿರುಗು' ಎಂದು ಪದ್ಮಾವತಿಗೆ ಹೇಳಿದ. ಎಷ್ಟು ಹೇಳಿದರೂ ಕೇಳದೆ ಊರ ಮುಂದೆ ಮೇನವನ್ನು ಇಳಿಸಿ, ಅವಳು ರತ್ನಕೀರ್ತಿಯನ್ನು ಹಿಂಬಾಲಿಸಿ ಮನೆಗೆ ಹೋದಳು. ರತ್ನಕೀರ್ತಿ ನಡೆದ ಎಲ್ಲ ವಿಚಾರವನ್ನೂ ತಾಯಿಗೆ ತಿಳಿಸಿದ. ಅತ್ತೆಗೆ ಎಷ್ಟಾದರೂ ಕನಿಕರ. ಏನಾಗಿದ್ದಾಳಪ್ಪ, ಚೆನ್ನಾಗಿಯೇ ಇದ್ದಾಳೆ, ಎಂದು ಸೊಸೆಯನ್ನು ಆದರಿಸಿದಳು. ರತ್ನಕೀರ್ತಿಗಂತೂ ಅವಳನ್ನು ಕಂಡರೆ ಸೇರುತ್ತಿರಲಿಲ್ಲ.

ಹೀಗೆಯೇ ಎಷ್ಟು ದಿನ ಇರಲು ಸಾಧ್ಯ? ರತ್ನ ಕೀರ್ತಿ ನೆರೆಯ ಪಟ್ಟಣದ ರಾಜಕುಮಾರಿಯನ್ನು ಲಗ್ನವಾಗಲು ನಿಶ್ಚಯಿಸಿದ. ಈ ವಿಷಯ ಹೇಗೋ ಮರಗೋಪಿಗೆ (ಪದ್ಮಾವತಿಯನ್ನು ರತ್ನಕೀರ್ತಿ ಈ ಹೆಸರಿನಿಂದ ಕರೆಯುತ್ತಿದ್ದ) ತಿಳಿಯಿತು. "ಈ ಮೂಢ ಮಾವನಿಗೆ ನನ್ನ ಗುಟ್ಟು ತಿಳಿಯದೆ ಇಂತಹ ಕೆಲಸ ಮಾಡುತ್ತಿದ್ದಾನಲ್ಲ" ಎಂದು ಮರುಗಿದಳು. ಮರುದಿನ ಊರ ಹೊರಗೆ ಯಾರಿಗೂ ಕಾಣ-ದಂತೆ ಮರದ ಗೌನನ್ನು ಬಿಚ್ಚಿಟ್ಟು ತುಪ್ಪ ಮಾರುವ ನೆಪದಿಂದ ನೆರೆಯ ಪಟ್ಟಣದ ರಾಜನ ಮನೆ-ಯನ್ನು ಸೇರಿದಳು. ಅವರು ಈಕೆಯ ಕೂದಲನ್ನು ನೋಡಿ, ತುಪ್ಪಕೊಳ್ಳುವ ಸುದ್ದಿಯನ್ನು ಮರೆತರು. "ಅಮ್ಮ, ನಮ್ಮ ಕುಮಾರಿಯನ್ನು ರತ್ನಕೀರ್ತಿಗೆ ಕೊಡಬೇಕೆಂದಿದ್ದೇವೆ. ನಮ್ಮ ಹುಡುಗಿಗೆ ಕೂದಲೇ ಬೆಳೆದಿಲ್ಲ; ಏನು ಮಾಡೋಣ? ನಿನ್ನ ಕೂದಲನ್ನು ಹೇಗೆ ಬೆಳೆಸಿಕೊಂಡೆ ತಿಳಿಸು" ಎಂದರು. ಪದ್ಮಾ-ವತಿ ಇದೇ ಸಮಯ ಎಂದು "ಏನೂ ಇಲ್ಲ; ಮೊದಲು ತಲೆಯನ್ನೆಲ್ಲಾ ಬೋಳಿಸಿಬಿಡಿ, ಆಮೇಲೆ ಕಳ್ಳಿ ಹಾಲು ಬುಡದ ಮಣ್ಣು ತಲೆಗೆ ಕಟ್ಟಿ ಬಿಸಿ ಬಿಸಿ ನೀರು ಹಾಕಿ ಮಲಗಿಸಿ" ಎಂದು ಹೇಳಿ ಹಿಂತಿರುಗಿ ಮರದ ಗೌನನ್ನು ಹಾಕಿಕೊಂಡು ಮನೆ ಸೇರಿದಳು. ಮರುದಿನವೇ ಆ ಹುಡುಗಿ ಸತ್ತು ಹೋದಳೆಂದು ರತ್ನ ಕೀರ್ತಿಗೆ ವರ್ತಮಾನ ಬಂತು. ಮೊದಲನೆ ದಾರಿಯೇ ಹೀಗೆ ಅಪಶಕುನವಾಯಿತಲ್ಲಾ ಎಂದು ರತ್ನಕೀರ್ತಿ ದುಃಖಿಸಿದ. ಆದರೆ ಇದರಿಂದ ಸಂತೋಷಪಟ್ಟವಳು ಮರಗೋಪಿ ಮಾತ್ರ.

ಮತ್ತೊಂದು ತಿಂಗಳನಂತರ ರತ್ನಕೀರ್ತಿ ತಿರುಗಿ ಲಗ್ನದ ಏರ್ಪಾಟು ಮಾಡಿ, ಹನ್ನೆರಡು ಗಾವುದ ದೂರದ ರಾಜನ ಮಗಳನ್ನು ನಿಶ್ಚಯಮಾಡಿಕೊಂಡು ಬಂದ. ಹಿಂದಿನ ಸಾರಿ ಮಾಡಿದಂತೆ ಈ ಸಾ-ರಿ ಮಾಡಲು ಮರಗೋಪಿಗೆ ಅನುಕೂಲವಾಗಲಿಲ್ಲ. ಅಂತೂ ಇಂತೂ ಲಗ್ನವಾಗಿ ಹೊಸ ಹೆಂಡತಿ ಮನೆಗೆ ಬಂದಳು. ಒಂದು ತಿಂಗಳು ಸುಖವಾಗಿ ಕಾಲ ಕಳೆಯಿತು. ಪದ್ಮಾವತಿಯು ತನ್ನ ಮರದ ಕೈಗೆ ಬರೆಯನ್ನು ಹಾಕಿಕೊಳ್ಳುವುದು, ಮರದ ಗೌನಿನ ಮೇಲೆ ಅನ್ನದ ಗಂಜಿಯನ್ನು ಸುರಿದುಕೊ-

ಳ್ಳುವುದು ಹೀಗೆ ಮಾಡುತ್ತಿದ್ದಳು. ಹೊಸದಾಗಿ ಬಂದ ರಾಜಕುಮಾರಿಯನ್ನು ಕುರಿತು, ”ನೋಡು, ನಾನು ಹೀಗೆಲ್ಲಾ ಮಾಡಿಕೊಳ್ಳುತ್ತೇನೆ! ನನಗೇನೂ ಆಗುವುದಿಲ್ಲ. ನೀನೂ ಹೀಗೇ ಮಾಡು” ಎಂದು ಬಲವಂತಮಾಡಿ ಕುದಿಯುವ ಅನ್ನದ ಗಂಜಿಯನ್ನು ಪದ್ಮಾವತಿ ಅವಳ ಮೇಲೆ ಸುರಿದಳು. ಕೂಡಲೆ ಮೈಯೆಲ್ಲಾ ಬೊಬ್ಬೆ ಬಂದು ಅವಳು ಸತ್ತು ಹೋದಳು. ಹೀಗೆ ಮಾಡಿದವಳು ಮರಗೋಪಿಯೆಂದು ಯಾರಿಗೂ ಗೊತ್ತಾಗಲಿಲ್ಲ.

ರತ್ನಕೀರ್ತಿಗೂ ಅವನ ತಾಯಿಗೂ ಹೇಳಲಾರದಷ್ಟು ದುಃಖವಾಯಿತು. ಹೀಗಿರುವಾಗ್ಯೆ ಆ ಊರಿಗೆ ಡೊಂಬರು ಆಡುವುದಕ್ಕೆ ಬಂದರು. ಅವರ ಕೋರಿಕೆಯಂತೆ ರಾಜನು ಮರಗೋಪಿಯನ್ನು ಮಾತ್ರ ಮನೆಯಲ್ಲಿ ಬಿಟ್ಟು ಬೀಗ ಹಾಕಿಕೊಂಡು ತನ್ನ ತಾಯಿಯೊಡನೆ ಆಟ ನೋಡುವುದಕ್ಕೆ ಹೋದನು. ಡೊಂಬರು ತಮ್ಮ ಆಟವನ್ನು ರಾತ್ರಿಯ ಹೊತ್ತು ಏರ್ಪಡಿಸಿದ್ದರು.

ಇದೇ ಸಮಯ ಎಂದು ಪದ್ಮಾವತಿ ತನ್ನ ಉಡುಪನ್ನು ಬಿಚ್ಚಿಟ್ಟು ಸ್ನಾನ ಮಾಡುತ್ತಿದ್ದಳು. ಅರ್ಧ ಆಟವಾದಾಗ ರತ್ನಕೀರ್ತಿ ಮನೆಯ ಕಡೆ ನೋಡಲು ಬಂದಿದ್ದಾಗ, ಮನೆಯಲ್ಲಿ ಶಬ್ದವಾಗುವುದನ್ನು ಕೇಳಿ, ಗವಾಕ್ಷಿಯಲ್ಲಿ ಇಣಿಕಿ ನೋಡಿದ. ಅವಳ ರೂಪನ್ನು ನೋಡಿ ಮೂರ್ಛೆ ಹೋಗುವಂತಾಯಿತು. ಇಂತಹವಳನ್ನು ಮನೆಯಲ್ಲಿಟ್ಟುಕೊಂಡು ಊರೂರು ತಿರುಗಿದೆನಲ್ಲಾ ಎಂದು ಮರುಗಿದ.

ಮರುದಿನ ”ಮರಗೋಪಿಯೇ ಊಟಕ್ಕೆ ನೀಡಬೇಕು. ಅವಳೇ ತಾಂಬೂಲ ತಂದುಕೊಡಬೇಕು” ಎಂದು ತಾಯಿಗೆ ತಿಳಿಸಿದ. ಸೊಸೆಯ ಮೇಲೆ ಈ ದಿನ ಏನೋ ತುಂಬ ಪ್ರೇಮ ಬಂದಿದೆಯಲ್ಲಾ ಎಂದು ತಾಯಿ ಬಹಳ ಸಂತೋಷಪಟ್ಟಳು. ಅದೇ ಪ್ರಕಾರ ನಡೆಯಿತು. ತಾಂಬೂಲವನ್ನು ಕೊಟ್ಟು ಪದ್ಮಾವತಿ ಹಿಂದಿರುಗುತ್ತಿದ್ದಾಗ ರತ್ನಕೀರ್ತಿ ದೊಣ್ಣೆಯಿಂದ ಅವಳನ್ನು ಹೊಡೆದ. ಮರದ ಗೌನು ಒಡೆದುಹೋಗಿ ಪದ್ಮಾವತಿ ಬಯಲಿಗೆ ಬಂದಳು. ನಾಚಿಕೆಯಿಂದ ಒಳಗೆ ಓಡಿಹೋದಳು. ಇದೆಲ್ಲವನ್ನೂ ನೋಡಿ ಸಂತೋಷವೂ ಆಶ್ಚರ್ಯವೂ ತಾಯಿಗೆ ಏಕಕಾಲದಲ್ಲಿ ಉಂಟಾದುವು.

ಮರುದಿನವೇ ಪದ್ಮಾವತಿಗೂ ರತ್ನಕೀರ್ತಿಗೂ ವಿಜೃಂಭಣೆಯಿಂದ ಲಗ್ನವಾಯಿತು. ಆಮೇಲೆ ಎಲ್ಲರೂ ಸುಖವಾಗಿದ್ದರು.

-ಪಿ. ಎಂ. ನಾಗಭೂಷಣಯ್ಯ.

[ಇದು ಚಿತ್ರದುರ್ಗ ಡಿಸ್ಟ್ರಿಕ್ಟಿನ ಅಶೋಕಸಿದ್ದಾಪುರದ ಕಡೆಯದು.]

ಗಾಜಿನ ಕಂಭ

ಒಂದೂರಂತೆ. ಆ ಊರಿಗೆ ಒಬ್ಬ ರಾಜನಂತೆ. ಅವನಿಗೆ ಮಕ್ಕಳೇ ಇರೊಲ್ವಂತೆ. ಅದಕ್ಕೋಸ್ಕರ ಅವನು ದಿನಾ ಕಾಳಿಕಾದೇವೀನ ಪೂಜೆ ಮಾಡ್ತಾ ಇರ್ತಾನೆ. ತುಂಬಾ ದಿವಸವಾದ ಮೇಲೆ, ದೇವಿ ಮೆಚ್ಚಿ, ಪ್ರತ್ಯಕ್ಷಳಾಗಿ, ನಿನ್ಗೇನು ಬೇಕೋ ಕೇಳ್ಕೊ ಅಂದಳಂತೆ. ಅದಕ್ಕೆ ರಾಜ "ನನಗೆ ಮಕ್ಕಳ್ಬೇಕು" ಅಂದ. ದೇವಿ ನಕ್ಕು, ಇಷ್ಟೇನೆ ಅಂತ "ರಾಜ! ರಾಜ! ನಿನ್ನ ಮನೆ ಪಕ್ಕದಲ್ಲಿ ಒಬ್ಬ ರಾಕ್ಷಸ ಇದಾನೆ. ಅವನ ಹಿತ್ತಲಿನಲ್ಲಿ ಒಂದು ದಾಳಿಂಬ್ರೆ ಗಿಡ ಇದೆ. ಅದರಲ್ಲಿ ಒಂದೇ ಒಂದು ಹಣ್ಣು ತಂದು ನನಗೆ ನೈವೇದ್ಯ ಮಾಡಿ ನಿನ್ನ ಹೆಂಡ್ತೀಗೆ ಅರ್ಧ ಕೊಟ್ಟು, ನೀನು ಅರ್ಧ ತಿನ್ನು. ಆಗ ನಿನಗೆ ಮಕ್ಕಳಾಗುತ್ತೆ" ಅಂದು ಮಾಯವಾಗ್ಬಿಟ್ಟಳು. ರಾಜನಿಗೆ ತುಂಬಾ ಸಂತೋಷವಾಗ್ಬಿಡ್ತು. ತಕ್ಷಣ ಆಳುಗಳನ್ನ ಕೂ-ಗಿದ. ಅವರನ್ನ ಕೂಗಿ "ಈ ಪಕ್ಕದ ಮನೆ ರಾಕ್ಷಸನ ಹಿತ್ತಲಿಗೆ ಹೋಗಿ, ಒಂದೇ ಒಂದು ದಾಳಿಂಬ್ರೆ ಹಣ್ಣು ಕಿತ್ಕೊಂಡ್ಬನ್ನಿ" ಅಂತ ಹೇಳಿ ಕಳುಹಿಸಿ ಕೊಟ್ಟ. ಹಾಗೇನೇ ಆಳುಗಳೂ, ಆ ರಾಕ್ಷಸ ಇಲ್ಲದೆ ಇರೋ ಹೊತ್ನಲ್ಲಿ ಅವನ ಹಿತ್ತಲಿಗೆ ಹೋದರು. ಅಲ್ಲಿ ನೋಡ್ತಾರೆ: ದಾಳಿಂಬೆ ಹಣ್ಣುಗಳು ಮರದಲ್ಲಿ ಝುಗಿಝುಗಿ ಅಂತ ಬಿಟ್ಟಿವೆ. ಆಳುಗಳಿಗೆ ತುಂಬಾ ಆಸೆ ಆಯ್ತು. ಮರ ಹತ್ತಿ ಬುಟ್ಟಿಗಟ್ಟಲೆ ಕಿತ್ತು ಕೆಳಕ್ಕಿಳಿದರು. ತಕ್ಷಣ ಬುಟ್ಟಿಗಟ್ಟಲೆ ಕಿತ್ತ ಹಣ್ಣೆಲ್ಲಾ ಒಂದೇ ಒಂದು ಹಣ್ಣಾಯ್ತು. ಹೀಗೇ ಮೂರು ನಾಲ್ಕು ಸಾರೀನೂ ಆಯ್ತು. ಕೊನೇಸಾರಿ ನೋಡೇಬಿಡಬೇಕೂಂತ ಮರಾನ ಹತ್ತಿದರು. ಅಷ್ಟೊತ್ತಿಗೆ ರಾಕ್ಷಸ ಎಲ್ಲೋ ಹೊರಗೋಗಿದ್ದೋನು ಬಂದ. ಬಂದವನು ಸೀದ ಹಿತ್ತಲಿಗೇ ಬಂದ. ಇವರನ್ನ ನೋಡ್ದ. ಕಣ್ಣುಕಣ್ಣು ಬಿಡುತ್ತ "ಯಾರಿಗೆ ಈ ಹಣ್ಣು? ಏನು ಸಮಾಚಾರ? ಹೇಳಿ" ಅಂದ. ಅದಕ್ಕೆ ಆಳುಗಳು ಹೆದರಿ ಎಲ್ಲಾ ಸಮಾಚಾರಾನೂ ಹೇಳಿದರು. ರಾಕ್ಷಸ ಕೇಳಿ, "ಹೋಗ್ಲಿ, ಪರ್ವಾ ಇಲ್ಲ. ಆದರೆ ನಿಮ್ಮ ರಾಜನಿಗೆ ಒಂದು ಮಾತು ಹೇಳಿ: ಅವನಿಗೆ ಹೆಣ್ಣುಮಗು ಆದರೆ ನನಗೆ, ಗಂಡಾದರೆ ಅವನ್ಗೆ. ಮೋಸ ಮಾಡಿದರೆ ನಾನು ಸುಮ್ನಿರೊಲ್ಲ" ಅಂತ ಹೇಳಿ ಕಳಿಸಿದ. ಆಳುಗಳು ಕೆಟ್ಟೋ ಬಿದ್ದೋ ಅಂತ ಒಂದೇ ಉಸಿರಿನಲ್ಲಿ ಆ ಹಣ್ಣನ್ನು ಎತ್ಕೊಂಡು ಅರಮನೆಗೆ ಬಂದು, ನಡೆದ ಸಮಾಚಾರಾನ ರಾಜನಿಗೆ ಹೇಳಿದರು.

ರಾಜನಿಗೆ ಆ ಹಣ್ಣುನೋಡಿದ್ದೇ ಆನಂದವಾಯ್ತು. ರಾಕ್ಷಸನ ಮಾತು ಕಿವೀಗೇ ಬೀಳಲಿಲ್ಲ. ತಕ್ಷಣ ಆ ಹಣ್ಣನ್ನ ದೇವಿಗೆ ನೈವೇದ್ಯ ಮಾಡಿ, ಹೆಂಡ್ತೀಗೆ ಕೊಟ್ಟು, ತಾನೂ ತಿಂದ. ಹೀಗೇ ಕೆಲವು ದಿವಸ-ಗಳಾಯ್ತು. ಹೆಂಡ್ತಿ ಬಸುರಿಯಾದಳು. ಬಳೆ ತೊಡ್ಸಿದ್ದೂ ಆಯ್ತು. ಕೊನೆಗೆ ಹೆಣ್ಣು ಮಗು ಹೆತ್ತಳು. ರಾಜನಿಗೆ ತಿಳೀತು. ಅವನಿಗೆ ಒಂದು ಕಡೆ ಸಂತೋಷ, ಒಂದು ಕಡೆ ದುಃಖ. ಈ ವಿಷಯ ಯಾ-ರಿಗೂ ತಿಳಿಸಬಾರದೂ ಅಂತ ಎಷ್ಟೋ ಏರ್ಪಾಟು ಮಾಡಿದ. ಆದರೂ ಆ ವಿಷಯ ರಾಕ್ಷಸನಿಗೆ ಹೇಗೋ ತಿಳೀತು. ಬಂದ, ಕೇಳಿದ. ಅದಕ್ಕೆ ರಾಜ ”ಮಗುವಿನ ಆಟ ಪಾಟ ನೋಡಿ ಕಳಿಸ್ತೀನಿ” ಅಂದ. ಅದಕ್ಕೆ ರಾಕ್ಷಸ ಒಪ್ಪಿ, ೫-೬ ವರ್ಷ ಬಿಟ್ಟು ಬಂದ. ”ಮಗು ಓಡಾಡೋದು, ಕುಣಿಯೋದು ನೋಡಿ ಕಳಿಸ್ತೀನಿ” ಅಂತ ರಾಜ ಅಂದ. ಅದಕ್ಕೂ ರಾಕ್ಷಸ ಒಪ್ಪಿದ. ಪುನಃ ಬಂದ. ”೧೭-೧೮ ವರ್ಷವಾಗುತ್ಲು ಕಳಿಸ್ತೀವಿ” ಅಂದ ರಾಜ. ಅದಕ್ಕೂ ಒಪ್ಪಿದ ಆ ರಾಕ್ಷಸ. ಆಮೇಲೆ ಬಂದ. ಕೇಳಿದ. ರಾಜ ಕಳ್ಸೊಲ್ಲ ಅಂದ. ಅದಕ್ಕೆ ರಾಕ್ಷಸ ಕಣ್ಣು ಕಣ್ಣು ಬಿಟ್ಟು ಹೆದರಿಸಿ, ಆ ಹುಡುಗೀನ ಹೊತ್ಕೊಂಡು ತನ್ನ ಮನೆಗೆ ಕರ್ಕೊಂಡ್ಹೋದ. ಪಾಪ, ಆ ಹುಡ್ಗೀ ಕಿರ್ರೋ ಮರ್ರೋ ಅಂತ ಕಿರಿಚಿದಳು. ಏನಾಗುತ್ತೆ ರಾಕ್ಷನನ ಮುಂದೆ!- ಅವತ್ತು ರಾತ್ರಿ ಕಳೆದರು.

ಬೆಳಗಾಯಿತು- ರಾಕ್ಷಸ ಆ ಹುಡೀನ ಕರೆದ. ”ದಾಳಿಂಬ್ರೆ, ದಾಳಿಂಬ್ರೆ, ಇಲ್ಲಿ ಬಾ” ಅಂತ ಆ ಹುಡುಗೀನ ಅಡಿಗೆ ಮನೆಗೆ ಕರ್ಕೊಂಡ್ಹೋಗಿ, ಅಲ್ಲಿದ್ದ ದೊಡ್ಡ ಅನ್ನದ ತಪ್ಪಲೆ, ಸಾರಿನ ಕೊಳದಪ್ಪಲೆ ತೋರಿಸಿ, 'ಇದರ ತುಂಬಾ ಅಡಿಗೆ ಮಾಡು' ಅಂತ ಹೇಳಿ ಹೊರಡ್ಹೋದ. ಅದರಂತೇನೆ ಮಾಡಿದ-ಳು. ಮಧ್ಯಾಹ್ನರಾಕ್ಷಸ ಬಂದ, ಒಂದು ಚೂರೂ ಮಿಗದ ಹಾಗೆ ಎಲ್ಲಾ ತಿಂದು ಬಿಟ್ಟ. ಆ ಹುಡುಗೀಗೂ ಮಿಗಲಿಲ್ಲ. 'ಇನ್ನೂ ಸ್ವಲ್ಪ ಹಾಕು' ಅಂದ. ”ಏನೂ ಮಿಗಲಿಲ್ಲ” ಅಂದಳು. 'ಹೋಗ್ಲಿ ಬಿಡು' ಅಂತ ತಾನು ತಂದಿದ್ದ ಮಾಂಸ ತಿಂದು ಬಿಟ್ಟ. ಅವಳ್ನ ಕರೆದು, ಬೀಗದ ಕೈಗೊಂಚಲು ಕೊಟ್ಟು, ”ನಾನಾಚೆಗೆ ಹೋಗ್ಬರ್ತೀನಿ. ಆದರೆ, ಈ ರೂಮುಗಳ ಬಾಗಿಲು ತೆಗೀಬೇಡ. ಬೀದಿ ಬಾಗಿಲು ಹಾಕ್ಕೊಂಡಿರು” ಅಂತ್ಹೇಳಿ ಹೊರಟುಹೋದ.

ಇವಳೂ ಹಾಗೇ ಬಾಗಿಲು ಹಾಕ್ಕೊಂಡು, ಬಂದು, ”ಅದ್ಯಾಕೆ ರೂಮು ಬಾಗಿಲು ತೇಗೀಬ್ಯಾಡ ಅಂದಿದ್ದಾನೆ? ನೋಡೇ ನೋಡ್ಬೇಕು' ಅಂತ ಒಂದೊಂದಾಗಿ ತೆಗೀತಾಳೆ. ಒಂದೊಂದರಲ್ಲೂ ಕೈ, ಕಾಲು, ದೇಹ ಹೀಗೆ ನೇತ್ಹಾಕಿರ್ತಾನೆ. ಕೊನೇ ರೂಂನಲ್ಲಿ ತಲೇ ಬುರುಡೆಗಳು ನೇತ್ಹಾಕಿರ್ತಾನೆ. ಇವಳು ಬಗ್ಗಿ ನೋಡ್ತಾಳೆ. ಆ ತಲೇ ಬುರುಡೆಗಳ ಪೈಕಿ ಒಂದು ಇವಳನ್ನ ನೋಡಿ ನಗುತ್ತೆ. ಇವಳು ಅದನ್ನ ನೋಡಿ ”ಯಾಕೆ ನಗುತೀ?” ಅಂತ ಕೇಳಿದಳು. ಅದಕ್ಕೆ ಅದು ”ಅಮ್ಮಾ, ಇವನು ರಾಕ್ಷಸ. ನಾವೂ

ನಿನ್ನ ಹಾಗೇ ಬಂದೋರು. ನಿನಗೂ ಹೀಗೇ ಮಾಡ್ತಾನೆ. ಆದ್ದರಿಂದ ಒಂದ್ಕೆಲಸ ಮಾಡು. ಈ ಮನೆ ಹಿತ್ತಲಲ್ಲಿ ಒಂದು ಗಾಜಿನ ಕಂಭ ಇದೆ. ಅದರ ಹತ್ತಿರ ಹೋಗಿ ನಿಂತುಕೊಂಡು 'ಒಬ್ಬ ತಾಯಿ ಹೊಟ್ಟೇಲಿ ಹುಟ್ಟಿದ್ದರೆ ಬಾಗಿಲು ತೆಗಿ' ಅನ್ನು. ತೆಗೆಯುತ್ತೆ. ಒಳಗೆ ಹೋಗು. ಎಲ್ಲಾ ಅನುಕೂಲಗಳೂ ಇವೆ. 'ಒಬ್ಬ ತಂದೆ ಹೊಟ್ಟೇಲಿ ಹುಟ್ಟಿದ್ದರೆ ಬಾಗಿಲು ಮುಚ್ಚು' ಅನ್ನು. ಮುಚ್ಚುತ್ತೆ. ಒಳಗೆ ಸುಖವಾಗಿರು" ಅಂತು. ಈ ಹುಡುಗಿ ದಾಳಿಂಬ್ರೆಗೆ ಸಂತೋಷವಾಯ್ತು. ತಕ್ಷಣ ಮನೇ ಬಾಗಿಲುಗಳು ಹಾಕ್ಬಿಟ್ಟು, ಆ ಕಂಭದ ಹತ್ತಿರ ಹೋಗಿ, ಹಾಗೇ ಮಾಡಿ, ಒಳಗೆ ಹೋಗಿ ಸುಖವಾಗಿದ್ದುಬಿಟ್ಟಳು.

ಅಷ್ಟು ಹೊತ್ತಿಗೆ ರಾಕ್ಷಸ ಕೂಕ್ಕೊಂಡು ಬಂದ. ಬಾಗಿಲು ತೆಗೀಲಿಲ್ಲ. ಕೋಪ ಬಂತು. ಬಾಗಿಲು ಸೀಳಿ ಒಳಕ್ಕೆ ಬಂದ. ಯಾರೂ ಇಲ್ಲ. ಕೋಪ ಬಂದು, ಅಲ್ಲಿ ಹುಡುಕುತ್ತಾ ಹಿತ್ತಲಿಗೆ ಬಂದ. ಆ ಗಾಜಿನ ಕಂಭ ನೋಡಿದ. ಒಂದು ಒದ್ದ- ಕಂಭ ಹೋಗಿ ಬೇರೆ ಊರಿನ ರಾಜನ ಮನೆ ಹಿಂದೆ ಬಿತ್ತು. ರಾಕ್ಷಸ ಸಾಕಾಗಿ ಮನೇಗೆ ಹೊರಟ್ಹೋದ.

ಅಲ್ಲಿ ರಾಜನ ಮನೆಯೋರು ಯಾರೂ ಆ ಕಂಭ ನೋಡಿರಲಿಲ್ಲ. ಇವಳು ರಾತ್ರಿಯಾಯ್ತು ಅಂದ್ರೆ, ಕಂಭದಿಂದ ಈಚೆಗೆ ಬಂದು, ಅಲ್ಲಿರೋ ಕೊಳದಲ್ಲಿ ಸ್ನಾನ ಮಾಡಿ, ಹಣ್ಣು ಹಂಪಲುಗಳ ತಿರುಳು ತಿಂದು, ಮೇಲಿನ ಸಿಪ್ಪೆ ಹಾಗೇ ಮರದಲ್ಲಿ ಬಿಟ್ಟು ಬಿಡುತ್ತಿದ್ದಳು. ಹೀಗೇ ಇರುವಾಗ ಒಂದು ದಿನ ರಾಜ ಹಣ್ಣು ತಿನ್ನಬೇಕು ಅಂತ ಹಣ್ಣು ಕೀಳಿಸಿ ತರಿಸಿ ನೋಡಿದರೆ ಒಳಗಿರೋ ತಿರುಳೇ ಇಲ್ಲ. ಇದ್ಯಾರ ಕೆಲಸವಿರಬಹುದು ಅಂತ ಯೋಚಿಸಿ, ಹುಡುಕಲು ಆಳುಗಳಿಗೆ ಹೇಳಿದ. ಅವತ್ತು ರಾತ್ರಿ ಆಳುಗಳು ಕಾವಲಿದ್ದರು. ನಿದ್ರೆ ಬಂತು. ಬೆಳಗ್ಗೆ ಎದ್ದು ಬಂದು, ಸಿಗಲಿಲ್ಲ ಎಂದರು. ಹೀಗೆಯೇ ಮಂತ್ರಿ, ರಾಜನ ದೊಡ್ಡ ಮಗ, ಕೊನೆಗೆ ರಾಜನೇ ಬಂದು ಕಾವಲಿದ್ರೂ ಯಾರಿಗೂ ಗೊತ್ತಾಗಲಿಲ್ಲ. ಕೊನೆಗೆ ರಾಜನ ಕಿರೀಮಗ "ನಾನ್ಹುಡುಕ್ತೀನಿ" ಅಂತಂದು, ಅವತ್ತು ರಾತ್ರಿ ಆ ತೋಟದಲ್ಲಿ ಮಲಗಿಕೊಂಡ. ಮಲಗುವಾಗ ತನ್ನ ಕಿರುಬೆರಳ ತುದಿಯನ್ನು ಕೊಯ್ದು, ಅದಕ್ಕೆ ನಿಂಬೆಹಣ್ಣು ಸಿಕ್ಕಿಸಿಕೊಂಡ. ಅದರಿಂದ ನಿದ್ದೆಯೇ ಬರ್ಲಿಲ್ಲ. ಒಂದು ಹೊತ್ನಲ್ಲಿ ಆ ಕಂಭದಿಂದ ರಾಜಕುಮಾರಿ ಈಚೆಗೆ ಬಂದ ಹಣ್ಣು ತಿಂದು ಹೋಗ್ತಿದ್ದಳು. ಇವನು ನೋಡಿ, ಅವಳನ್ನ ಮಾತಾಡಿಸ್ದ. ವಿಷಯವೆಲ್ಲಾ ತಿಳಿಯಿತು. ಬೆಳಗಾಯ್ತು. ಕಿರೀಮಗನೂ ಸಿಗಲಿಲ್ಲ ಅಂತ ಹೇಳಿ, ಇತ್ತಲಾಗೆ ರಾಜಕುಮಾರಿಗೆ ಬಟ್ಟೆಬರೆ ತಿಂಡಿ ಎಲ್ಲಾ ಸರಬರಾಜು ಮಾಡಿದ.

ಹೀಗಿರೋವಾಗ ಒಂದು ದಿನ, ರಾಜನ ಕಿರೀಮಗ ಅವರಪ್ಪನ ಹತ್ತಿರ ಹೋಗಿ, ಹಿತ್ತಲಲ್ಲಿರೋ

ಗಾಜಿನ ಕಂಭ ಮದುವೆಯಾಗ್ತೀನಿ ಅಂತ ಹಠಹಿಡಿದ. ಬೇಡ ಅಂದರು. ಆದ್ರೂ ಹಠ ಹಿಡಿದ. ಮದುವೆ ಮಾಡಿದರು. ಕೊನೆಗೆ ಮಗೂ ಆಯ್ತು ಅಂದ. ರಾಜನಿಗೆ ಆಶ್ಚರ್ಯವಾಯ್ತು. ಜನಕ್ಕೆಲ್ಲಾ ಊಟವಾಯ್ತು. ಕೊನೆಗೆ ರಾಜನ ಮಗ ಕಂಭದ ಹತ್ತಿರ ಹೋಗಿ ಒಂದು ನಿಂಬೆ ಹಣ್ಣು ಎಸೆದ, ಕಂಭ ಛಟಛಟಾ ಅಂತು. ಎರಡನೇ ನಿಂಬೇ ಹಣ್ಣು ಎಸೆದ, ಬಿರುಕು ಬಿಟ್ಟಿತು. ಮೂರನೇದು ಎಸೆಯೋ ಹೊತ್ಗೆ ಕಂಭ ಒಡೆದು ಒಳಗಿಂದ ಒಬ್ಬ ಸುರಸುಂದರಿ ರಾಜಕುಮಾರಿ ಮಗು ಎತ್ತಿಕೊಂಡು ಬಂದಳು. ಎಲ್ಲರಿಗೂ ಸಂತೋಷ ಆಯ್ತು, ಆಶ್ಚರ್ಯ ಆಯ್ತು.

ಇದನ್ನೆಲ್ಲಾ ನೋಡುತಿದ್ದ ಮಂತ್ರಿಕುಮಾರ, ಅವತ್ತು ರಾತ್ರಿ ತನ್ನ ತಂದೆ ಹತ್ತಿರ ಹೋಗಿ, ಮನೆ ಹಿಂದಿರೋ ಹುಣಸೇಮರ ಮದುವೇ ಮಾಡ್ಕೊತೀನಿ ಅಂದ. ಬೇಡ ಅಂದ್ರೂ ಕೇಳಲಿಲ್ಲ. ಮದು- ವೆಯೂ ಮಾಡಿದರು. ಕೊನೇಗೆ ಮಗು ಆಯ್ತು ಅಂದ. ಜನರೂ ಸೇರಿದರು. ರಾಜನ ಮಗನ ಹಾಗೆ ಇವನೂ ಮರಕ್ಕೆ ನಿಂಬೆ ಹಣ್ಣು ಎಸೆದ. ಎಸೆದದ್ದರ ಮೇಲೆ, ಮರದ ಒಳಗಿಂದ ದೆವ್ವ, ಪೀಡೆ, ಪಿಶಾಚಿಗಳು ಮೊರ, ಗೂಡೆ, ಪೊರಕೆ ಹಿಡಿದು ಎಲ್ಲರನ್ನೂ ಅಟ್ಟಿಸಿಕೊಂಡು ನುಗ್ಗಿದವು. ಜನವೆಲ್ಲಾ ಗಾಬರಿಬಿದ್ದು ಓಡಿಬಿಟ್ಟರು. ಇದರಿಂದ ಮಂತ್ರಿಗೂ ಮಂತ್ರಿ ಕುಮಾರನಿಗೂ ಅವಮಾನವಾಯಿ- ತು. ಮಂತ್ರಿ ಮಗನ್ನ ಕೂಗಿ, 'ರಾಜಕುಮಾರ ತಿಳಿದೂ ತಿಳಿದೂ ಮಾಡಿದ ಅಂತ ನೀನೂ ಮಾಡಿದರೆ ಆಗುತ್ಯೇ?' ಅಂತ ಬುದ್ಧಿವಾದ ಹೇಳಿ, ಒಳ್ಳೆ ಹೆಣ್ಣು ತಂದು ಮದುವೆ ಮಾಡಿದ. ಅವರು ಸುಖವಾ- ಗಿದ್ದರು. ಇಲ್ಲಿ ಆ ರಾಜಕುಮಾರಿ, ರಾಜ ಕುಮಾರ, ತಮ್ಮ ತಾಯಿ ತಂದೆಯ ಮನೆಗೆ ಹೋಗಿ, ಎಲ್ಲಾ ವಿಷಯ ತಿಳಿಸಿ, ಅವರನ್ನೂ ಕರ್ಕೊಂಡುಬಂದು, ಅಷ್ಟರೂ ಒಟ್ಟಿಗೆ ಸುಖವಾಗಿದ್ದರು.

-ಕೆ. ಎನ್. ಶ್ರೀಹರಿರಾವ್.

[ಇದು ಮೈಸೂರಿನ ಕಡೆ ಕೇಳಿದ ಕತೆ.]

ಹೆಸರಿನ ಹಂಬಲು

ಹೆಸರು ಹೆಸರೆಂದು ನೀಂ ಬಸವಳಿವುದೇಕಯ್ಯ?
ಕಸದೊಳಗೆ ಕಸವಾಗಿ ಹೋಹನಲೆ ನೀನು?

ಮುಸುಕಲೀ ಧರೆಯ ಮರವೆನ್ನನ್- ಎನ್ನುತ ಬೇಡು
ಮಿಸುಕದಿರು ಮಣ್ಣಿನಲಿ- ಮಂಕುತಿಮ್ಮ

ಅಕ್ಕಿಯೊಳಗನ್ನವನು ಮೊದಲಾರು ಕಂಡವನು?
ಅಕ್ಕರದ ಬರಹಕ್ಕೆ ಮೊದಲಿಗನದಾರು?
ಲೆಕ್ಕವಿರಿಸಿಲ್ಲ ಜಗ ತನ್ನಾದಿಬಂಧುಗಳ
ದಕ್ಕುವುದೆ ನಿನಗೆ ಜಸ?- ಮಂಕುತಿಮ್ಮ

ಎದ್ದೆದ್ದು ಬೀಳುತಿಹೆ, ಗುದ್ದಾಡಿ ಸೋಲುತಿಹೆ
ಗದ್ದಲವ ತುಂಬಿ ಪ್ರಸಿದ್ಧನಾಗುತಿಹೆ
ಉದ್ಧರಿಸುವೆನು ಜಗವನೆನ್ನುತಿಹ ಸಖನೆ, ನಿ-
ನ್ನುದ್ಧಾರವೆಷ್ಟಾಯ್ತು?- ಮಂಕುತಿಮ್ಮ

ಚಂದ್ರಮತಿ

ರಾಜನಗರಿ ಎಂಬ ಪಟ್ಟಣದಲ್ಲಿ ಒಬ್ಬ ರಾಜನಿದ್ದನಂತೆ. ಅವನಿಗೆ ಮದನ, ಮೋಹನ, ಸುಮತಿ, ಸುಗುಣ, ವಸುಮತಿ, ವಾಸವ, ಚಂದ್ರಮತಿ ಎಂಬ ಸಪ್ತ ಕುಮಾರರಿದ್ದರಂತೆ. ಅವರಿಗೆ ಬೇಕಾದ ವಿದ್ಯೆ, ಕುದುರೆಸವಾರಿ, ರಾಜಕುವರರಿಗೆ ಏನೇನು ಬೇಕೋ ಎಲ್ಲ ಕಲಿಸಿದನಂತೆ. ಅಷ್ಟಾಗಿ ಇಷ್ಟಾಗಿ ಮದುವೆಯ ಪ್ರಾಯಕ್ಕೆ ಬಂದರಂತೆ. ಆಗ ರಾಜ ತನ್ನ ಪ್ರಧಾನಿಯನ್ನು ಕರೆದು, "ಅಯ್ಯಾ, ಮಹಾ-ಮಂತ್ರಿ, ತನಯರೆಲ್ಲರೂ ಪ್ರಾಯಕ್ಕೆ ಬಂದರು. ಅವರಿಗೆ ತಕ್ಕ, ಮತ್ತು ನಮ್ಮ ಕುಮಾರರಂತೆ ಒಂ-ದೇ ತಾಯಿಯ ಗರ್ಭದಲ್ಲಿ ಬಂದು ಒಂದೇ ಹೆಸರಿನವರಾದ ವಧುಗಳನ್ನು ನಿಶ್ಚಯಿಸಿಕೊಂಡು ಬಾ" ಎಂದು ಆಜ್ಞೆಮಾಡಿ ಕಳಿಸಿದನಂತೆ.

ರಾಜಾಜ್ಞೆಯಂತೆ ಮಂತ್ರಿಯು ಪಯಣಕ್ಕೆ ಬೇಕಾದ ಸಲಕರಣೆಗಳನ್ನು ತೆಗೆದುಕೊಂಡು, ಗಂ-ಟೆಗೆ ಅರುವತ್ತು ಮೈಲಿ ಹೋಗುವ ಕುದುರೆಯನ್ನು ಏರಿ ಹೊರಟನಂತೆ. ಹೋಗುತ್ತಾ, ಹೋಗು-ತ್ತಾ, ಒಂದು ಗೊಂಡಾರಣ್ಯಕ್ಕೆ ಬಂದು ಸೇರಿದ. ಇನ್ನೇನು ಹೊತ್ತು ಮುಳುಗುವ ವೇಳೆಯಾಯಿತು. ಎಲ್ಲಿಯಾದರೂ ತಂಗೋಣ ಎಂದು ಸುತ್ತಲೂ ನೋಡಿದ. ಸ್ವಲ್ಪ ದೂರದಲ್ಲಿ ಮರಗಳು ಗುಂಪಾಗಿ ಬೆಳೆದದ್ದು ಕಾಣಿಸಿತು. ಅಲ್ಲಿಗೆ ಬಂದು ನೋಡಲು, ಒಂದು ಬಾವಿ ಇತ್ತು. ಹಸಿವನ್ನು ನೀಗಲು ತಾ-ನು ತಂದ ತಿಂಡಿತೀರ್ಥಗಳನ್ನು ತೆಗೆದುಕೊಂಡು ಕುದುರೆಯನ್ನು ಒಂದು ಮರಕ್ಕೆ ಕಟ್ಟಿ ಬಾವಿಯನ್ನು ಇಳಿಯಲು ಬಂದ. ಅಲ್ಲಿ ಯಾರೋ ಮತ್ತೊಬ್ಬ ಕುಳಿತು ಅನ್ನ ತಿನ್ನುತ್ತಿದ್ದ. ಬಂದವನೆ ಅವನನ್ನು ಕುರಿತು "ಏನಯ್ಯಾ, ನೀನು ಯಾರು? ಯಾವ ಊರು? ಯಾವ ಕಾರ್ಯಾರ್ಥವಾಗಿ ಪಯಣ ಬೆ-ಳಸಿರುವೆ?" ಎಂದು ಕೇಳಿದ. ಆ ಮನುಷ್ಯ "ಅಯ್ಯಾ, ನಾನು ಮಂದಾರಪುರದ ಮಂತ್ರಿ. ರಾಜಾಜ್ಞೆ-ಯಂತೆ ಅವನ ಸಪ್ತ ಕುವರಿಯರಿಗೆ ವರಗಳನ್ನು ನಿಶ್ಚಯಿಸಿಕೊಂಡು ಬರುವ ಪ್ರಯುಕ್ತ ಬಂದಿದ್ದೇನೆ. ತಮ್ಮದು ಯಾವ ಊರು? ತಾವು ಬಂದಿರುವ ಕೆಲಸವದೇನು?" ಎನಲು ರಾಜನಗರಿಯ ಮಂತ್ರಿ-ಯು "ನಾನು ಕೂಡ ನಮ್ಮ ರಾಜನ ಏಳು ಜನ ಸುತರಿಗೆ ಕನ್ಯೆಯರನ್ನು ಹುಡುಕಲು ಹೊರಟಿದ್ದೇನೆ. ನೀನೂ ಅದೇ ಕೆಲಸಕ್ಕೆ ಹೊರಟಿರುವೆ ಎಂದಮೇಲೆ ನಾನಿನ್ನು ಮುಂದೆ ಹೋಗುವುದು ತಪ್ಪಿತು.

ಅವರ ಹೆಸರೇನು? ಅವರ ಚಿತ್ರಪಟಗಳನ್ನು ಕೊಡು" ಎನಲು; ಮಂದಾರಪುರದ ಅಮಾತ್ಯನು ಅವರ ನಾಮಧೇಯಗಳನ್ನರುಹಿ ಭಾವಚಿತ್ರಗಳನ್ನು ಕೊಟ್ಟನು. ರಾಜನಗರಿಯ ಪ್ರಧಾನಿ ಕುವರರ ಚಿತ್ರಗಳೊಂದಿಗೆ ಕುಮಾರಿಯರ ಚಿತ್ರಗಳನ್ನು ಹಿಡಿದು ನೋಡಲು, ರೂಪಿನಲ್ಲಿ ಒಬ್ಬರಿಗೊಬ್ಬರು ಸರಿ-ತೂಗುತ್ತಿದ್ದರು, ಹೆಸರುಗಳೂ ಒಂದೇ ತರಹ ಇದ್ದುವು. ಆ ಮನುಷ್ಯನನ್ನು ಕುರಿತು "ಏನಪ್ಪಾ, ನಮ್ಮ ಪುಣ್ಯದಿಂದ ನಡುದಾರಿಯಲ್ಲಿ ದೇವರು ನಮ್ಮ ಆಶಯವನ್ನು ಕೈಕೂಡಿಸಿದ. ಎಲ್ಲಾ ವಿಧದಲ್ಲಿಯೂ ನಿಮ್ಮ ಕುಮಾರಿಯರು ನಮ್ಮ ಕುಮಾರರನ್ನು ಹೋಲುತ್ತಾರೆ. ಇದೇ ಮಾತು, ಮದುವೆಯ ನಿಶ್ಚಯ ಮಾಡಿಬಿಡೋಣ" ಎಂದು ಚಿತ್ರಪಟಗಳನ್ನು ಅದಲು ಬದಲು ಮಾಡಿಕೊಂಡು "ಊರು ತಲುಪಿದ ತಕ್ಷಣ ಒಪ್ಪಿಗೆಗೆ ಉತ್ತರ ಬರೆಯರಿ, ಮತ್ತು ಕಲ್ಯಾಣದ ದಿನವನ್ನು ನಿರ್ಧರಿಸಿ ತಿಳಿಸಿ" ಎಂದು ಅವ-ನಿಗೆ ನಮಸ್ಕರಿಸಿ, ಅಂದಿನ ರಾತ್ರಿಯನ್ನು ಜೊತೆಯಲ್ಲಿಯೇ ಕಳೆದು ಒಬ್ಬರನ್ನೊಬ್ಬರು ಬೀಳ್ಕೊಂಡರು.

ಸುಮಾರು ಎಂಟು ದಿನಗಳ ಹೊತ್ತಿಗೆ ಮಂದಾರಪುರದಿಂದ ಉತ್ತರ ಬಂದಿತು: "ನಮ್ಮ ಕು-ವರಿಯರು ಒಪ್ಪಿದ್ದಾರೆ. ನಿಮಗೆ ಬೇಕಾದ ದಿವಸ ಬಂದು ಕಲ್ಯಾಣ ಮಾಡಿಕೊಂಡು ಹೋಗಬಹು-ದು" ಎಂದು. ಅವರ ಉತ್ತರಕ್ಕೆ ರಾಜನಗರಿಯ ರಾಜನು "ಇನ್ನು ಹದಿನೈದು ದಿನಗಳಿಗೆ ಪರಿವಾರ ಸಮೇತ ಬರುತ್ತೇವೆ. ಎಲ್ಲಾ ಸಿದ್ಧತೆಗಳನ್ನೂ ಮಾಡಿಕೊಳ್ಳಿ" ಎಂದು ಮಾರುತ್ತರ ಕಳಿಸಿದನು. ಹೊರ-ಡುವ ದಿನವೂ ಬಂದಿತು. ಅಂದು ಪಟ್ಟಣದಲ್ಲೆಲ್ಲಾ ಸಂಭ್ರಮವೋ ಸಂಭ್ರಮ. ನಗರಿಯನ್ನು ತಳಿರು ತೋರಣಗಳಿಂದ ಸಿಂಗರಿಸಿ, ರಾಜಕುಮಾರರಿಗೆ ಗಂಧ ಪುನಗು ಮೊದಲಾದ ಸುಗಂಧ ದ್ರವ್ಯಗಳ-ನ್ನು ಪೂಸಿ, ಮಂಗಳಸ್ನಾನ ಮಾಡಿಸಿ, ಪ್ರಯಾಣಕ್ಕೆ ಸಿದ್ಧರಾದರು. ಎಲ್ಲರಿಗಿಂತಲೂ ಕಿರಿಯವನಾದ ಚಂದ್ರಮತಿಯನ್ನು ರಾಣಿಯೇ ಸ್ವತಃ ಸಿಂಗರಿಸಿ ಹೊರಡಿಸಿದಳು.

ಮೊದಲನೆಯ ದ್ವಾರವನ್ನು ದಾಟುವಾಗ ಮೇಲಿನಿಂದ ಸ್ವಲ್ಪ ಮಣ್ಣು ಉದುರಿಬಿತ್ತು. ಅದರಿಂದ ರಾಣಿಯು ಇದೇನೋ ಅಪಶಕುನವೆಂದು ಮನಸ್ಸಿನಲ್ಲಿಯೆ ಹೆದರಿದಳು. ಎರಡನೆಯ ಬಾಗಿಲು ದಾಟುವಾಗ ಒಂದು ಚೇಳು ಇದಿರಿಗೆ ಬಂತು. ರಾಣಿ ಕುಮಾರನನ್ನು ಕುರಿತು "ಇದೇನೋ ಶಕುನ ಚೆನ್ನಾಗಿಲ್ಲ. ನಾಳೆ ಹೋಗೋಣ"ವೆಂದು ತಡೆದಳು. ಆದರೆ ಚಂದ್ರಮತಿಯು ಅದನ್ನು ಲೆಕ್ಕಿಸದೆ "ಇದೆಲ್ಲಾ ಅಪಶಕುನವಲ್ಲ. ಇಂಥಾ ಅಲ್ಪಪ್ರಾಣಿಗಳಾದಿಯಾಗಿ ನನ್ನ ಮದುವೆಯಲ್ಲಿ ತಿಂದು ತೇ-ಗುತ್ತವೆ ಎಂದು ತೋರುತ್ತದೆ. ಬಾರಮ್ಮ" ಎಂದು ಮುಂದೆ ನಡೆದು ಎಲ್ಲರೊಡನೆ ಸೇರಿ ಪಯಣ ಬೆಳಸಿದನು.

ದಿನವೆಲ್ಲಾ ಪ್ರಯಾಣಮಾಡಿ ಸಂಜೆಯಹೊತ್ತಿಗೆ ಮಂತ್ರಿಯು ವಧುಗಳನ್ನು ನಿಶ್ಚಯಿಸಿಕೊಂಡು ಬಂದಿದ್ದ ಸ್ಥಳವನ್ನು ತಲಪಿದರು. ಅಲ್ಲಿಗೆ ಹೊತ್ತು ಮುಳುಗಿ ಕತ್ತಲಾಯಿತು. ಅಲ್ಲಿಯೇ ಬೀಡು-ಬಿಟ್ಟರು. ಆ ಅಡವಿಯಲ್ಲಿ ಮಲ್ಲಾರಚೌಡಿ, ಗುಳಿಗುಳಿ, ಮಾಯಾವತಿ, ನಾಗಿನಿ, ಐರಾವತಿ ಎಂಬ ಐವರು ಋಷಿಕನ್ಯೆಯರು ವಾಸವಾಗಿದ್ದರು. ಅವರು ಪ್ರತಿದಿನವೂ ಜಲ ಕ್ರೀಡೆಗೆ ಆ ಭಾವಿಗೆ ಬರು-ತ್ತಿದ್ದರು. ಅವರು ಮಾಯೆಮಾಟಗಳಲ್ಲಿ ಅಪ್ರತಿಮರೆನಿಸಿದ್ದರು. ಅಂದು ಆ ಕೂಪಕ್ಕೆ ಬಂದು ತನ್ನ ಕ್ರೀಡೆಯನ್ನು ಮುಗಿಸಿ ಉಡುಪು ಧರಿಸಿ ಹೊರಡುವಾಗ ನಾಲ್ಕನೆಯವಳಾದ ನಾಗಿನಿಯ ದೃಷ್ಟಿ ರಾ-ಜಪರಿವಾರದೆಡೆಗೆ ಹರಿಯಿತು. ಅದೇನೆಂದು ಪರೀಕ್ಷಿಸಲು ಎಲ್ಲರೂ ಅಲ್ಲಿಗೆ ಹೋದರು. ಒಂದು ಕಡೆಯಿಂದ ನೋಡಿಕೊಂಡು, ಚಂದ್ರಮತಿ ಪವಡಿಸಿದ್ದ ಸ್ಥಳಕ್ಕೆ ಬಂದು, ಅವನ ರೂಪಿಗೆ ಮೋಹಿಸಿ, ಅವನನ್ನು ಅಲ್ಲಿಂದ ಅಪಹರಿಸಿ, ಕಾನನದ ಮಧ್ಯದಲ್ಲಿದ್ದ ಕಾಳಿಕಾದೇವಾಲಯಕ್ಕೆ ತಂದರು ಅವನ ತಲೆಯಿಂದ ಎರಡು ಕೂದಲನ್ನು ಕಿತ್ತು, ಅಂಗಾಲಲ್ಲಿ ಏರಿಸಿ ಗಂಟುಹಾಕಿ, ಅವನಿಗೆ ಜ್ಞಾನ ತಪ್ಪಿಸಿ ಹೊರಟುಹೋದರು.

ಬೆಳಗಾಯಿತು. ತಾಯಿಯ ಗೋಳು ಹೇಳತೀರದು! ಭೂತಾಯಿ ಏನಾದರೂ ನುಂಗಿದಳೋ! ವನರಾಣಿಯೇನಾದರೂ ಕದ್ದಳೋ! ರಾಕ್ಷಸಿಗಳೇನಾದರೂ ಕದ್ದೊಯ್ದವೋ! ಎಂಬುದಾಗಿ ಹಲು-ಬತೊಡಗಿದಳು. ಬಿಡಾರದಲ್ಲಿ ಗಲಿಬಿಲಿಯುಂಟಾಯಿತು. ಮುಂದೇನು ಗತಿ? ಮಂದಾರಪುರದ-ರಸಿಗೆ ಏನು ಹೇಳಬೇಕು? ಆರು ಜನ ರಾಜಕುಮಾರರಿದ್ದು, ಕಡೆಯವನು ಏಕೆ ಬರಲಿಲ್ಲವೆಂದ-ರೆ ಹೇಳುವುದೇನು? ಎಂಬ ಅನೇಕ ಸಮಸ್ಯೆಗಳುದಿಸಿದವು. ಆದರೆ ಕುಶಲಮತಿಯಾದ ಮಂತ್ರಿ ಅವರೆಲ್ಲರಿಗೂ ಸಮಾಧಾನ ಹೇಳಿ, ಅವರಿಗೆ ನಾನು ಉತ್ತರ ಕೊಡುತ್ತೇನೆಂದು ಭರವಸೆಯಿತ್ತು, ಮಂದಾರಪುರದಭಿಮುಖವಾಗಿ ಪ್ರಯಾಣಮಾಡಿ ಆ ಪಟ್ಟಣವನ್ನು ತಲಪಿದನು. ಆ ಪುರಿಯ ರಾ-ಜನು ಬಹಳ ವಿಜೃಂಭಣೆಯಿಂದ ಅವನನ್ನು ಇದಿರುಗೊಂಡು ಉಚಿತವಾದ ಬಿಡದಿಗಳಲ್ಲಿರಿಸಿದ-ನು. ಮದುವೆಯ ದಿನ ಒದಗಿ ಬಂತು. ಆಗ ರಾಜನಗರಿಯ ಮುಂತ್ರಿಯು ಅವರಿಗೆ ”ಚಿಕ್ಕ ರಾ-ಜಕುಮಾರನು ಕಾರ್ಯಾರ್ಥವಾಗಿ ನಮ್ಮ ಪಟ್ಟಣದಲ್ಲಿಯೇ ಉಳಿಯಬೇಕಾಗಿ ಬಂತು. ಆದ್ದರಿಂದ ಅವನ ಚಂದ್ರಾಯುಧಕ್ಕೆ ನಿಮ್ಮ ಮಗಳನ್ನು ಧಾರೆಯೆರೆದುಕೊಡಿ” ಎಂದು ಕೇಳಿದನು. ಅದರಂತೆ-ಯೇ ಮದುವೆಯು ವರನಿಲ್ಲದಿದ್ದರೂ ಸಡಗರದಿಂದ ನೆರವೇರಿತು.

ಇತ್ತ ಕಾಳೀದೇವಾಲಯದಲ್ಲಿ ರಾಜಕುಮಾರ ಮೈಮರೆದು ಮಲಗಿದ್ದಾನೆ. ಆ ರಾತ್ರಿ ಋಷಿಕನ್ನಿಕೆ-ಯರು ಬಂದು ಅವನನ್ನು ಎಬ್ಬಿಸಿದರು. ಅವನು ಎದ್ದು ಕುಳಿತು ಸುತ್ತಲೂ ನೋಡಿ ಗಾಬರಿಗೊಂಡು,

"ಅಮ್ಮಾ, ನೀವು ಯಾರು? ನಮ್ಮ ತಾಯಿ ಎಲ್ಲಿ?" ಎಂದು ಕೇಳಲು, ಅವರು ನಸುನಗುತ್ತಾ "ಇನ್ನೆಲ್ಲಿಯ ಅಮ್ಮ? ನಾವು ಋಷಿಪುತ್ರಿಯರು. ನಿನ್ನ ರೂಪಿಗೆ ಸೋತು ಇಲ್ಲಿಗೆ ತಂದಿದ್ದೇವೆ. ನಮ್ಮನ್ನು ಕೂಡಿ ನಮ್ಮನ್ನು ತಣಿಸು ಬಾ" ಎಂದರು. ಅವನು ನಮ್ರತೆಯಿಂದ "ಅಮ್ಮಾ, ನನ್ನನ್ನು ನನ್ನ ತಾಯಿಯ ಹತ್ತಿರ ಬಿಟ್ಟು ಬನ್ನಿ. ಅವಳು ಅದೆಷ್ಟು ನೊಂದುಕೊಳ್ಳುತ್ತಾಳೋ, ದುಃಖಿಸುತ್ತಾಳೋ, ನಿಮಗೆ ಎಂದಿಗೂ ಋಣಿಯಾಗಿರುತ್ತೇನೆ" ಎಂದನು.

ಮೂರನೆಯ ಮಾಯಾವತಿ "ನಿನ್ನನ್ನು ತಂದಿರುವುದು ಬಿಡುವುದಕ್ಕಲ್ಲ, ನಿನ್ನೊಡನೆ ನಲಿದು ಸುಖವನ್ನನುಭವಿಸಲು. ಇನ್ನು ನಿನ್ನ ತಾಯಿ ತಂದೆಗಳ ಚಿಂತೆ ಬಿಟ್ಟು ನಮ್ಮೊಡನೆ ಸಂತೋಷವಾಗಿರು, ಬಾ" ಎಂದು ಕೈ ಹಿಡಿದಳು.

ರಾಜಕುಮಾರನು ಸಿಟ್ಟಿನಿಂದ ಕೈ ಬಿಡಿಸಿಕೊಂಡು, "ಹೂ ನೀಚರೆ! ಪರಪುರುಷರನ್ನು ಅಪಹರಿಸಿ ನಿಮ್ಮ ಕಾಮವನ್ನಡಗಿಸುವಂತೆ ಪೀಡಿಸಲು ನಾಚಿಕೆಯಾಗುವುದಿಲ್ಲವೆ? ಮರ್ಯಾದೆ ಮೀರಿ ಮಾತಾಡದೆ ನನ್ನನ್ನು ಬಿಟ್ಟು ಬಿಡಿ" ಎಂದನು.

ಐದನೆಯ ಐರಾವತಿ "ಪಾಪ! ಎಷ್ಟು ಗುಣಸಂಪನ್ನ ನೀನು! ಬೋಧನೆ ಸಾಕು, ಸಾಕು ನಿನ್ನ ವಾದ. ತುಸು ವಿರಾಮಕೊಡುತ್ತೇವೆ. ಯೋಚಿಸು ದುಡುಕಿದರೆ ಒಳಿತಲ್ಲ" ಎಂದು ಹೇಳಿ, ಅವನನ್ನು ಮೊದಲಿನ ಹಾಗೆ ಮಲಗಿಸಿ, ಹೊರಟುಹೋದರು.

ಮಂದಾರಪುರದಲ್ಲಿ ಎಲ್ಲಾ ಶಾಸ್ತ್ರಗಳನ್ನು ಮುಗಿಸಿಕೊಂಡು ವಧುಗಳನ್ನು ಜೊತೆಯಲ್ಲಿ ಕರೆದುಕೊಂಡು ರಾಜ ನಗರಿಗೆ ಬಂದು ಸೇರಿದರು. ಹೀಗೆಯೇ ಕೆಲವು ದಿನಗಳು ಕಳೆದರೂ ರಾಜಕುಮಾರನ ಸುಳಿವೇ ಇಲ್ಲದಿರಲು, ಚಂದ್ರಮತಿಯು (ರಾಜಕುಮಾರಿ) ತನ್ನ ಅತ್ತೆಯನ್ನು ಕೇಳಿದಳು. ಅವಳು ಅಂಜುತ್ತಾ ನಡೆದ ಸಮಾಚಾರವನ್ನು ಹೇಳಿ, "ನಿನ್ನನ್ನು ವರಿಸಲು ಬಂದು ನನ್ನ ಮಗ ಅಡವಿಪಾಲಾದ. ಎಷ್ಟು ಸುಕೃತವಂತೆಯಮ್ಮಾ ನೀನು!" ಎಂದು ಅವಳನ್ನೇ ಮೂದಲಿಸಿದಳು. ಆ ಮಾತುಗಳನ್ನು ಕೇಳಿ ಅರಸುಕುಮಾರಿಗೆ ಬಹಳ ನೋವಾಯಿತು. "ನನ್ನಿಂದ ನನ್ನ ಪತಿಯು ಗತಿಸಿದನೆ! ನಾನು ಬದುಕಿ ಫಲವೇನು? ಪ್ರಾಣಪ್ರಿಯನೇ ಇಲ್ಲದಮೇಲೆ ನಾನಿದ್ದು ಸಾಧಿಸುವುದೇನು? ಇನ್ನು ಈ ಪ್ರಾಣ ಧರಿಸಿ ಇರಬಾರದೆಂದು ನಿರ್ಧರಿಸಿ, ಆ ರಾತ್ರಿ ತನಗೆ ಬೇಕಾದ ವಸ್ತುಗಳನ್ನು ತೆಗೆದುಕೊಂಡು ಲಾಯಕ್ಕೆ ಹೋಗಿ ಒಂದು ತೇಜಿಯನ್ನೇರಿ ಪಟ್ಟಣವನ್ನು ತೊರೆದು ಮನೋವೇಗದಿಂದ ಮನಹರಿದೆಡೆ ಓಡಿಸಿದಳು. ರಾತ್ರಿಯೆಲ್ಲಾ ದಾರಿ ಸಾಗಿ ಬೆಳಗಾಗುವ ಹೊತ್ತಿಗೆ ದಟ್ಟವಾದ ಅಡವಿಯನ್ನು ಸೇರಿದಳು.

ಅಲ್ಲಿ ಇಳಿದು ಕುದುರೆಯನ್ನು ಒಂದು ಮರಕ್ಕೆ ಬಂಧಿಸಿ, ಅದೇ ಮರವನ್ನು ಹತ್ತಿ ತನ್ನ ಕೇಶಗಳಿಂದ ಉರುಲು ಹಾಕಿಕೊಳ್ಳಲು ಮರದ ಕೊಂಬೆಗೆ ಕಟ್ಟಿ, ದೇವರನ್ನು ಮನದಲ್ಲಿ ಧ್ಯಾನಿಸಿ, "ಮುಂದಿನ ಜನ್ಮದಲ್ಲಿ ನನ್ನ ಪತಿ ನನಗೆ ಲಭಿಸಲಿ" ಎಂದು ಬೇಡಿ ನೇತು ಬೀಳುವಷ್ಟರಲ್ಲಿ "ಅಮ್ಮಾ ಭಿಕ್ಷೆ" ಎಂಬ ಧ್ವನಿಯು ಕೇಳಿಸಿತು. ತಿರುಗಿ ನೋಡುತ್ತಾಳೆ: ಒಬ್ಬ ಗೋಸಾಯಿ ಕೆಳಗೆ ನಿಂತಿದ್ದ. ಅವನನ್ನು ಕುರಿತು "ಅಪ್ಪಾ, ನಾನೀಲೋಕವನ್ನು ತೊರೆದು ಪರಲೋಕದ ಯಾತ್ರೆಯಲ್ಲಿದ್ದೇನೆ. ನಿನಗಾವ ಭಿಕ್ಷೆ ಕೊಡಲಿ? ನನ್ನಲ್ಲಿ ಏನಿದೆ ಹೇಳು?" ಎನಲು "ಅಮ್ಮಾ, ನಾನು ಯಾಚಿಸುವುದು ಯಾವ ವಸ್ತುವನ್ನೂ ಕುರಿತಲ್ಲ. ನಿನ್ನ ಉದ್ಯಮವನ್ನು ಬಿಟ್ಟು ಕೆಳಗೆ ಬಾ. ಹೇಳುತ್ತೇನೆ" ಎಂದನು. ಅವಳು ಕೆಳಗಿಳಿದು ಬರಲು "ಅದೋ ಅಲ್ಲಿ ನೋಡು" ಎಂದು ಕೈತೋರಿ ಮಾಯವಾದನು. ಅವಳು ಕೌತುಕದಿಂದ ಆಕಡೆ ನೋಡಲು, ಮರ ಗಿಡ ಬಳ್ಳಿಗಳು ಒತ್ತಾಗಿ ಬೆಳೆದು ನಿಂತಿವೆ! ಅವುಗಳ ಮಧ್ಯೆ ಒಂದು ಇಕ್ಕಟ್ಟಾದ ದಾರಿ ಇತ್ತು. ಅದನ್ನು ಕಂಡು ಅವಳಿಗೆ ಅಲ್ಲಿ ಹೋಗಿ ನೋಡಬೇಕೆಂಬ ಉತ್ಸುಕತೆಯುಂಟಾಯಿತು.

ಅಲ್ಲಿಂದ ಆ ದಾರಿಯಲ್ಲಿ ನಡೆದು ಒಂದು ವಿಶಾಲವಾದ ಬಯಲನ್ನು ಸೇರಿದಳು. ಅಲ್ಲಿ ಒಂದು ದೇವಾಲಯ, ಅದಕ್ಕೆ ಒಂದು ಬಾಗಿಲು, ಆ ಬಾಗಿಲಿಗೆ ದೊಡ್ಡದೊಂದು ಗುಂಡು ದಬ್ಬಿ ಮುಚ್ಚಿದ್ದಾರೆ. ಹತ್ತಿರ ಹೋಗಿ ಅಲುಗಿಸುತ್ತಾಳೆ – ಅದು ಭದ್ರವಾಗಿದ್ದ ಹಾಗೆ ಕಂಡಿತು. ಕಾಳಿಯನ್ನು ಭಜಿಸಿ, ತನ್ನ ಶಕ್ತಿಯೆಲ್ಲವನ್ನೂ ಬಿಟ್ಟು ನೂಕಿದಳು. ಅದು ಓರೆಯಾಗಿ ಅವಳಿಗೆ ದಾರಿ ಕೊಟ್ಟಿತು. ಒಳಹೊಕ್ಕರೆ ಕಾಳಿಯು ಗರ್ಭಗುಡಿಯಲ್ಲಿ ತನ್ನ ವಿಕೃತಾಕೃತಿಯಿಂದ ಮರೆಯುತ್ತಿದ್ದಾಳೆ. ವಿಗ್ರಹದ ಮುಂದೆ ಒಂದು ನಿರ್ಜೀವ ದೇಹ ಬಿದ್ದಿದೆ. ಹತ್ತಿರ ಹೋಗಿ ಅಲುಗಾಡಿಸುತ್ತಾಳೆ, ಮಾತನಾಡಿಸುತ್ತಾಳೆ ಉತ್ತರವಿಲ್ಲ. ಮುಖ ತಿರುವಿ ನೋಡುತ್ತಾಳೆ- ತನ್ನ ಪತಿ! ದುಃಖ ಉಮ್ಮಳಿಸಿ ಬಂತು. ಆದರೂ ತಡೆದು, ಮೈಯೆಲ್ಲಾ ತಡವಿದಳು. ಅಂಗಾಲಲ್ಲಿ ಏನೋ ಎಡವಿದ ಹಾಗಾಯಿತು. ನೋಡಿದರೆ ಕೂದಲಿನ ಗಂಟುಗಳು ಕಂಡವು. ನಿಧಾನವಾಗಿ ಅವುಗಳನ್ನು ಬಿಚ್ಚಲು, ಅವನು ಎದ್ದು ಕುಳಿತು, "ನೀನು ಯಾರು?" ಎಂದು ಕೇಳಲು, ಅವಳು ನಡೆದ ವಿಷಯವೆಲ್ಲವನ್ನೂ ತಿಳಿಸಿದಳು. ಆಗ ಅವನು ತನ್ನ ದುಃಸ್ಥಿತಿಯನ್ನು ನೆನೆದು ಹಲುಬಿದ, ರೋದನ ಮಾಡಿದ. "ಇಲ್ಲಿಂದ ಪಾರಾಗಿ ಹೋಗಲು ಸಾಧ್ಯವಿಲ್ಲ. ನಾನು ರಾಕ್ಷಸ ನಾರಿಯರ ಕೈಗೆ ಸಿಕ್ಕಿದ್ದೇನೆ" ಎಂದನು. ಅವಳು ತನ್ನ ಪತಿಯನ್ನು ಸಮಾಧಾನಪಡಿಸಿ "ಬಿಡಿಸಿಕೊಳ್ಳಲು ಪ್ರಯತ್ನಿಸುತ್ತೇನೆ" ಎಂದು ಅವನಿಗೆ ಹೇಳಿ ಪಟ್ಟಣಕ್ಕೆ ಹಿಂದಿರುಗಿ ಹೋದಳು.

ರಾತ್ರಿಯಾಯಿತು. ಋಷಿ ಕನ್ನಿಕೆಯರು ಬಂದು, ಯಥಾರೀತಿ ಅವನನ್ನು ಎಬ್ಬಿಸಿ ತಮ್ಮ ಕೋರಿಕೆಯನ್ನು ಈಡೇರಿಸುವಂತೆ ಪೀಡಿಸುತ್ತಾರೆ. ಅವನು ಒಪ್ಪದಿರಲು "ಥೂ ಷಂಡ! ನಾವು ಎಷ್ಟು

ವಿಧವಾಗಿ ಕಾಡಿದರೂ ಬೇಡಿದರೂ, ಒಂದಿಷ್ಟೂ ಕರುಣೆ ಇಲ್ಲದೆ ಹಠ ಮಾಡುತ್ತಿರುವೆಯಾ! ನೋಡು, ನಾಳೆ ಈ ನಿನ್ನ ಹಠವನ್ನು ನಿನ್ನನ್ನು ಉಪ್ಪಿನ ಮಡುವಿನಲ್ಲಿ ತುಳಿಯುವಾಗ ಸಾಧಿಸಿಕೋ" ಎಂದು ಸಿಟ್ಟಾಗಿ ಹೊರಟುಹೋದರು.

ಮಾರನೆಯ ದಿನ ರಾಜಕುಮಾರಿಯು ತನ್ನ ಪತಿಗೋಸ್ಕರವಾಗಿ ನಾನಾ ರೀತಿಯ ತಿಂಡಿ ತೀರ್ಥಗಳನ್ನು ತಯಾರಿಸಿಕೊಂಡು, ಹೊತ್ತಿಗೆ ಮುಂಚೆ ಬಂದು ತನ್ನ ಗಂಡನನ್ನು ಎಬ್ಬಿಸಿ, ಅವುಗಳನ್ನು ತಿನ್ನಿಸಿ ಸಂತೋಷದಿಂದ ಹರಟುತ್ತಿರಲು, ಚಂದ್ರಮತಿಯು "ನೀನು ಏನು ಸಂತೋಷಪಟ್ಟರೂ ಇದೊಂದೇ ದಿನ. ನಾಳೆ ನನ್ನನ್ನು ಉಪ್ಪಿನ ಮಡುವಿಗೆ ಹಾಕಿ ತುಳಿಯುತ್ತಾರಂತೆ" ಎಂದು ಸಂಕಟಪಟ್ಟನು. ಅವಳಿಗೆ ಎಲ್ಲೂ ಇಲ್ಲದ ದುಃಖವುಂಟಾಯಿತು. "ಇಲ್ಲಿಯಾದರೂ ನಮ್ಮ ಕೂಡುವಿಕೆಗೆ ಎಡೆಯಿಲ್ಲದಂತಾಯಿತೆ! ಅಯ್ಯೋ! ಪರಮೇಶ್ವರಾ! ನಾವು ಎಷ್ಟು ಪಾಪಮಾಡಿ ಈ ಜನ್ಮ ತಾಳಿದ್ದೇವೊ? ಮುಂದೆ ದಾರಿಯೇನು?" ಎಂದು ಯೋಚಿಸಿ, ತನ್ನ ಪ್ರಾಣೇಶ್ವರನಿಗೆ "ದೇವರು ಮಾಡಿದಂತಾಗಲಿ. ನಾನು ನಿನಗೆ ಐದು ಮಲ್ಲಿಗೆಯ ಹೂವುಗಳನ್ನು ಕೊಡುತ್ತೇನೆ. ನಾಳೆ ಅವರು ನಿನ್ನನ್ನು ತೆಗೆದುಕೊಂಡು ಹೋಗುವಾಗ ಜ್ಞಾನ ಬರುವಂತೆ ಮಾಡಿ ತೆಗೆದುಕೊಂಡು ಹೋಗುತ್ತಾರೆ. ಆಗ ನೀನು ಒಂದು ಹರಿದಾರಿ ದಾಟಿದ ತಕ್ಷಣ ಒಂದು ಪುಷ್ಪವನ್ನು ಉದುರಿಸು. ಅವುಗಳ ಗುರುತಿನಿಂದ ನಾನು ಅಲ್ಲಿಗೆ ಬರುತ್ತೇನೆ. ದೇವರ ಕೃಪೆ ಇದ್ದರೆ ತಪ್ಪಿಸಿಕೊಂಡು ಹೋಗೋಣ. ಇಲ್ಲವಾದರೆ ಜೊತೆಯಲ್ಲೇ ಪ್ರಾಣ ಬಿಡೋಣ" ಎಂದು ಹೇಳಿ, ಆ ದಿನವನ್ನು ಕಳೆದು, ಖಿನ್ನ ಮುಖದಿಂದ ಹಿಂದಿರುಗಿದಳು.

ಬೆಳಕು ಮರೆಯಾಗಿ ಕತ್ತಲಾಗುತ್ತಲೇ ಋಷಿಕನ್ನೆಯರು ಕಾಳಿಯ ದೇಗುಲಕ್ಕೆ ಬಂದು ರಾಜಕುಮಾರನನ್ನು ತೆಗೆದುಕೊಂಡು ತಮ್ಮ ಮಂತ್ರಶಕ್ತಿಯಿಂದ ಅಂತರಿಕ್ಷಮಾರ್ಗವಾಗಿ ಹಾರಿದರು. ಒಂದು ಹರಿದಾರಿ ಕಳೆಯಿತು. ಅಲ್ಲಿ ಒಂದು ಹೂ ಉದುರಿಸಿದ. ಹೀಗೆಯೇ ಐದು ಹೂಗಳೂ ಮುಗಿದವು. ಅವರ ಸ್ಥಳವೂ ಬಂದಿತು. ಅಲ್ಲಿ ಅವರು ಒಂದು ಮಾಯಾಗೃಹವನ್ನು ನಿರ್ಮಿಸಿ, ಅದರಲ್ಲಿ ಅವನನ್ನಿರಿಸಿ, "ನೋಡು, ಇನ್ನೊಂದು ದಿವಸ ಗಡು ಕೊಟ್ಟಿದ್ದೇವೆ. ಅಷ್ಟರಲ್ಲಿ ಯೋಚಿಸಿ, ನಿನಗೆ ಉಚಿತವಾದುದನ್ನು ಆರಿಸಿಕೊ" ಎಂದು ಎಚ್ಚರಿಸಿ, ಇಬ್ಬರನ್ನು ಆ ನಿಲಯದ ದ್ವಾರಕ್ಕೆ ಕಾವಲಿರಿಸಿ ಹೋದರು.

ರಾಜಕುಮಾರಿ ಬಂದು ದೇವಾಲಯದಲ್ಲಿ ನೋಡುತ್ತಾಳೆ: ರಾಜ ಕುಮಾರನಿಲ್ಲ. ಯಾವ ಕಡೆಗೆ ಒಯ್ದಿದ್ದಾರೋ ಎಂದು ಕಳವಳವುಂಟಾಯಿತು. ದೇವರೇ ಗತಿ ಎಂದು ತನ್ನ ಕುದುರೆ ಓಡಿದ ದಿಕ್ಕಿಗೆ

ಹೊರಟಳು. ಒಂದು ಹರಿದಾರಿ ಕಳೆಯಿತು. ಅಲ್ಲಿ ಒಂದು ಹೂ ಸಿಕ್ಕಿತು. ಅದೇ ಜಾಡನ್ನನುಸರಿಸಿ ಮುಂದೆ ಸಾಗಿದಳು. ಕಡೆಗೆ ಮಾಯಾಗೃಹವನ್ನು ಸೇರಿದಳು. ಅಲ್ಲಿಗೆ ಹೋಗಿ ದ್ವಾರವನ್ನು ಮುಟ್ಟಲು, ಕಾವಲಿರಿಸಿದ್ದ ಮಂತ್ರದ ಮನುಷ್ಯರು ಅವಳನ್ನು ಹಿಡಿದುಕೊಂಡರು. ತತ್‌ಕ್ಷಣವೇ ಚಂದ್ರಾಯುಧ-ದಿಂದ ಅವರನ್ನು ಕತ್ತರಿಸಿ, ಒಳಹೊಕ್ಕು, ಪತಿಯನ್ನೆಬ್ಬಿಸಿ ತಪ್ಪಿಸಿಕೊಂಡುಹೋಗಲು ಕುದುರೆಯ-ನ್ನೇರಿ ಹೊರಟಳು. ಆದರೆ! ಕುದುರೆ ಮುಂದೆ ಒಂದು ಹಜ್ಜೆಯನ್ನೂ ಇಡಲಿಲ್ಲ. ಆ ಮಾಟಗಾತಿಯ-ರು ಕಟ್ಟು ಕಟ್ಟಿದ್ದಾರೆ ಎಂಬುದು ಅವರಿಗೆ ತಿಳಿಯಿತು. ”ಇನ್ನು ಬೇರೆ ಉಪಾಯವಿಲ್ಲ. ಸಾಯುವುದೇ ಶತಸ್ಸಿದ್ಧ” ಎಂದು ಮನವರಿಕೆಯಾಯಿತು. ಆಗ ರಾಜಕುಮಾರನನ್ನು ಮೊದಲಿನ ಸ್ಥಿತಿಯಲ್ಲಿ ಬಿಟ್ಟು, ತಾನು ಕಾಡಿನಲ್ಲಿ ಮರೆಯಾಗಿ, ಮುಂದಿನ ಘೋರ ಮರಣವನ್ನು ನೆನೆದು ಪರಿತಪಿಸಿ ರೋದನಮಾ-ಡಲು ಮೊದಲಿಟ್ಟಳು. ಅದೇ ಕಾಲಕ್ಕೆ ಸರಿಯಾಗಿ ಕೈಲಾಸವಾಸಿ ಪಾರ್ವತೀ ಪರಮೇಶ್ವರರು ಸಂಚಾರ ಹೊರಟಿರಲು, ಈ ಶೋಕವು ಪಾರ್ವತಿಯ ಕಿವಿಗೆ ಮುಟ್ಟಿತು. ತತ್‌ಕ್ಷಣ ಆಕೆ ತನ್ನ ಪತಿಯನ್ನು ಕುರಿತು ”ಯಾರೋ ನಾರಿ ಶೋಕಿಸುತ್ತಿದ್ದಾಳೆ. ಪಾಪ! ಅವಳಿಗೆ ಏನು ಸಂಕಟ ಒದಗಿದೆಯೋ ಹೋಗಿ ವಿಚಾರಿಸೋಣ” ಎಂದು ಬೇಡಿದಳು.

ಮರುಕ್ಷಣದಲ್ಲಿಯೇ ಅವರು ಚಂದ್ರಮತಿಯ ಮುಂದೆ ಮೈಯೊಡೆದು ನಿಂತು, ಅವಳ ದುಃ-ಖಕ್ಕೆ ಕಾರಣ ತಿಳಿದು ”ಅಮ್ಮಾ, ನೀನು ಸಂಕಟಪಡಬೇಡ. ಧೈರ್ಯದಿಂದಿರು. ಅವರು ನಿನ್ನ ಗಂ-ಡನನ್ನು ಇಷ್ಟು ಜಾಗ್ರತೆ ಕೊಲ್ಲುವುದಿಲ್ಲ. ಸುಮ್ಮನೆ ಹೆದರಿಸಿ ತಮ್ಮ ವಶವಡಿಸಿಕೊಳ್ಳಲು ಪ್ರಯತ್ನಿ-ಸುತ್ತಿದ್ದಾರೆ. ಇಲ್ಲಿ ಸ್ವಲ್ಪ ದೂರದಲ್ಲಿ ಅವರ ತಂದೆ ತಪಸ್ಸಿಗೆ ಕುಳಿತಿದ್ದಾನೆ. ಅವನನ್ನು ಮರೆಹೊಗು. ನಿನ್ನನ್ನವನು ಉದ್ಧರಿಸಿ ಕಾಪಾಡುತ್ತಾನೆ” ಎಂದು ಹೇಳಿ ಅಂತರ್ಧಾನವಾದರು.

ಅವರ ಮಾತಿನಂತೆ ರಾಜಕುಮಾರಿ ಅವನನ್ನರಸುತ್ತಾ ಹೊರಟಳು. ಆ ಋಷಿಯು ಕಣ್ಣು ಮುಚ್ಚಿ ಅದೆಷ್ಟು ವರ್ಷಗಳಿಂದ ತಪಸ್ಸನ್ನಾಚರಿಸುತ್ತಾ ಕುಳಿತಿದ್ದನೋ! ಅವನ ಕೂದಲು ಜಡೆಕಟ್ಟಿ ಭೂ-ಮಿಯಲ್ಲಿ ಇಳಿದಿದ್ದುವು. ದೂರದಿಂದ ಅವನನ್ನು ಕಂಡು ರಾಜಕುಮಾರಿಯ ಮನಸ್ಸು ಹಗುರವಾ-ಯಿತು. ಬಂದವಳೆ ಅವನ ಕಾಲಮೇಲೆ ಉದ್ದವಾಗಿ ಬಿದ್ದು, ಪಾದಗಳನ್ನು ಬಿಗಿಯಾಗಿ ಹಿಡಿದು, ಅಳತೊಡಗಿದಳು. ಋಷಿಯು ಕಣ್ಣು ತೆರೆದು ಅವಳ ತಲೆಯನ್ನು ಸವರುತ್ತಾ, ”ನೀನು ಯಾರನ್ನಾ? ಏಕೆ ಅಳುತ್ತಿದ್ದೀಯೆ? ನಿನಗೇನು ಬೇಕು ಹೇಳು” ಎನಲು ”ಸ್ವಾಮಿ, ಮೊದಲು ನನಗೊದಗಿರುವ ಸಂಕಟವನ್ನು ಪರಿಹರಿಸುತ್ತೇನೆಂದು ಅಭಯಕೊಟ್ಟರೆ ಹೇಳುತ್ತೇನೆ, ಇಲ್ಲವಾದರೆ ಇಲ್ಲಿಯೇ ಪ್ರಾಣ ತೊರೆಯುತ್ತೇನೆ” ಎಂದಳು.

ಋಷಿ "ಆಗಲಿ ಏಳಮ್ಮ, ನಿನಗೆ ಒದಗಿರುವ ಕಷ್ಟವೇನು? ಪಾರುಮಾಡುತ್ತೇನೆ" ಎಂದನು. ಚಂದ್ರಮತಿಯೆದ್ದು, ತನಗೆ ಬಂದ ಕಷ್ಟವನ್ನೂ ಅವನ ಮಕ್ಕಳೇ ಅದಕ್ಕೆ ಕಾರಣವೆಂಬುದನ್ನೂ ತಿ-ಳಿಸಿದಳು. ಆಗ ತಪಸ್ವಿಯು "ಅಮ್ಮಾ, ನಾನಿಲ್ಲಿಂದ ಎದ್ದು ಬರುವ ಹಾಗಿಲ್ಲ. ಅವರು ಇಲ್ಲಿಗೆ ಬರು-ವಹಾಗೆ ನಿನಗೆ ಒಂದು ಉಪಾಯ ಹೇಳುತ್ತೇನೆ. ನಾನು ನಾಳೆ ಅವರಿಗೆ ಹೊಟ್ಟೆನೋವು ಕಣ್ಣೀರಿ ಬರುವಂತೆ ಮಾಡುತ್ತೇನೆ. ನೀನು ವೈದ್ಯವೇಷವನ್ನು ಹಾಕಿಕೊಂಡು, ಮದ್ದು ಕೊಡುತ್ತೇನೆ ಎಂದು ಅವರನ್ನು ನಂಬಿಸಿ ನನ್ನಲ್ಲಿಗೆ ಕರೆದುತಾ. ಮುಂದಿನದನ್ನು ನಾನು ನೋಡಿಕೊಳ್ಳುತ್ತೇನೆ" ಎಂದನು. ಅದರಂತೆ ಅವಳು ವೈದ್ಯವೇಷ ತಾಳಿ ಅವರನ್ನು ನಂಬಿಸಿ ಕರೆತಂದಳು. ತತ್ಕ್ಷಣವೇ ಅವರನ್ನು ಆ ಋಷಿಯು "ನಾನು ಮಮತೆಯಿಂದ ನಿಮ್ಮ ಕಲ್ಯಾಣಕ್ಕೋಸ್ಕರ ಎಲ್ಲಾ ವಿದ್ಯೆಗಳನ್ನು ಕಲಿಸಿದರೆ, ನೀ-ವು ಅವುಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸದೆ ಪರರ ಪತಿಯನ್ನು ತಂದು ಆ ಹೆಣ್ಣಿನ ಹೊಟ್ಟೆಯನ್ನುರಿಸಿ ಗೋಳಾಡಿಸಿ, ಕಣ್ಣೀರಿಡಿಸಿ ಮೆರೆಯುವುದೆ!" ಎಂದು ಅವರ ಮುಂದಲೆಯ-ನ್ನು ಜಗ್ಗಿಸಿ, ಹಲ್ಲುಗಳನ್ನು ಕಿತ್ತು, ಮಂತ್ರಭ್ರಷ್ಟರನ್ನಾಗಿ ಮಾಡಿ, "ಅವಳ ಪತಿಯನ್ನು ಅವಳಿಗೊಪ್ಪಿಸಿ" ಎಂದನು.

ಅನಂತರ ಚಂದ್ರಮತಿಯೂ ಅವಳ ಗಂಡನೂ ಆ ಋಷಿವರ್ಯರಿಗೆ ನಮಸ್ಕರಿಸಿ ತಮ್ಮ ಪಟ್ಟ-ಣಕ್ಕೆ ತೆರಳಿದರು. ಆ ವೇಳೆಗೆ ಅವರ ತಂದೆ ತಾಯಿಗಳು ಮಗನ ಕೊರಗಿನಿಂದ ನೆಲಹಿಡಿದಿದ್ದರು. ಮಗನು ಬಂದ ಸುದ್ದಿಯನ್ನು ಕೇಳಿ ಅವರಿಗೆ ಆದ ಆನಂದ ಅಷ್ಟಿಷ್ಟಲ್ಲ. ತನ್ನ ಪತಿಯನ್ನು ಪಡೆ-ದು ಒಂದ ಸೊಸೆಯನ್ನು ಬಾಯಿತುಂಬ ಹೊಗಳಿ "ಆಗ ಮದುವೆ ಮಾಡಿದ್ದಲ್ಲ, ಈಗ ಮದುವೆ!" ಎಂದು ತಿರುಗಿ ಪಟ್ಟಣವನ್ನು ಸಿಂಗರಿಸಿ, ಇಬ್ಬರಿಗೂ ಮದುವೆ ಮಾಡಿದರು. ಅಂದಿನಿಂದ ಅವರು ಸುಖವಾಗಿ ಇದ್ದರು.

-ಬಿ. ಆರ್. ಸಂಜೀವರೆಡ್ಡಿ.

[ಈ ಕತೆ ಚಿತ್ರದುರ್ಗ ಡಿಸ್ಟ್ರಿಕ್ಟಿನ ಬೆಳಗಟ್ಟದ ಕಡೆ ಪ್ರಚಾರದಲ್ಲಿದೆ.]

ಗಳ-ಗಂಟೆ

”ಜೋ ಜೋ ಗಂಟೆ, ಗಳಗಂಟೆ,
ನಾನೆದ್ದು ಬಂದೇನಂದ್ರೇ
ತಾನೇದ್ದು ಬಂದಾನೇ
ಓಡ್ಹೋಗೊ ನನ್ನ ಗಳಗಂಟೇ”

ಬಾಗಿಲ ಮುಂದೆ ನಿಂತುಕೊಂಡು ಇಬ್ಬರು ಜೋಗಿತಿಯರು ಜೋಗುಳ ಹೇಳುತ್ತಿದ್ದರು. ಇನ್ನೂ ಏನೇ-ನೋ ಹೇಳುವುದರಲ್ಲಿದ್ದ ಅವರನ್ನು ರಂಗಣ್ಣ ತಡೆದು ನಿಲ್ಲಿಸಿದ. ಆ ಬಾಗಿಲಲ್ಲೆ ಕುಳಿತು ಎಲೆ ಅಡಿಕೆ ಮೆಲ್ಲುತ್ತಿದ್ದ ಅವ.

”ಅದರ ಅರ್ತ ಒಡೆದು ಯೇಳಿರೇನವ್ವ?” ರಂಗಣ್ಣ ಕೇಳಿದ.

ಅವರ ಅವ್ವ ರಾಮಕ್ಕ ”ಬಿಡೋ ರಂಗ. ಮುಂದಿನ ಮನೆಯಾಗೆ ಕಾಳಾದರೂ ಹಾಕಿಸಿಕೊಂ-ಡಾರು ಹೋಗಿ. ಅವನ್ನ ಸುಮ್ಮೆ ಯಾಕೆ ನಿಲ್ಲಿಸಿಕೊಳ್ತೀಯಾ?” ಎಂದು ಹೇಳಿದಳು. ಹಾಡು ಹೇಳಿ-ದವರಲ್ಲಿ ಒಬ್ಬಳು ”ಅದೆಲ್ಲ ನಾವೇ ಕಟ್ಟಿದ ಪದಗಳ್ ಕಣಪ್ಪ. ಕಾಳು ಹಾಕಲಿ ಅಂತ ಹೇಳೋಕೆ” ಎಂದು ಹೇಳಿ ಮುಂದಿನ ಮನೆಗೆ ಹೋಗುವುದರಲ್ಲಿದ್ದಳು. ಆದರೆ ರಂಗಣ್ಣ ಅವರನ್ನು ಅಷ್ಟಕ್ಕೆ ಬಿಡಲಿಲ್ಲ. ಅವನ ಸ್ವಭಾವವೇ ಹಾಗೆ. ಯಾರಾದರೂ ಒಂದು ಹಾಡು ಹೇಳಿದರೆ, ಅದನ್ನು ಕೇಳಿ ಅರ್ಥಮಾಡಿಕೊಂಡು, ತಾನೇ ಅನೇಕ ಸಾರಿ ಹಾಡಿಕೊಳ್ಳುತ್ತಿದ್ದ. ಅವ್ವನಿಂದ ಬೈಸಿಕೊಂಡು ಅವರಿ-ಗೆ, ತಾನೇ ಮುದ್ದೆ ರಾಗಿ ಕೊಟ್ಟು, ಕೂರಿಸಿಕೊಂಡು, ಅನಂತರ ಪದದ ಅರ್ಥ ಕೇಳಿದ.

”ಅದೊಂದು ಕತ್ಯಾಗಬಿಡುತ್ತೆ ಕಣಪ್ಪಾ, ಯೇಳ್ತಾ ಓದ್ರೆ” ಎಂದಳು ಒಬ್ಬಳು ಜೋಗಿತಿ. ರಂ-ಗಣ್ಣನ ಕುತೂಹಲ ಕೆರಳಿತು. ”ಮುದ್ದೆ ಕೊಟ್ಟವನಿ, ರಾಗಿಕೊಟ್ಟವನಿ, ಇನ್ನೇನಾಗಬೇಕ್ರವ್ವ ನಿಮಗೆ? ವಸಿ ಒತ್ತು ಕೂತಕೊಂಡು, ಅದೇನು ಕತೇ ಹೇಳಿದರೇನು ಮುಣಿಗಿಹೋಗೀತ ಪ್ರಪಂಚ?” ಎಂದ,

ಸ್ವಲ್ಪ ಸಿಡುಕಿನಿಂದ. ಅರೆಮನಸ್ಸಿನಿಂದ ಹೆಂಗಸರು ಕುಳಿತುಕೊಂಡರು. ಅಷ್ಟು ಹೊತ್ತಿಗೆ ಕೆಲವು ಉತ್ಸಾಹಿ ಹೆಂಗಸರು ತಾವೂ ಕಥೆ ಕೇಳಲು ಬಂದು ಕುಳಿತರು. ಮನೆಯ ಹುಡುಗರೆಲ್ಲ ಸುತ್ತುಗಟ್ಟಿ-ದ್ದರು.

"ಕತೇನ ಮೊಟಕುಮಾಡಿ ಹೋಗ್ರೇ ತಾಯಿ, ಮುಂದಿನ ಮನೆಗೆ" ಎಂದಳು ರಾಮಕ್ಕ. ಆದರೆ ಮಗ ರಂಗಣ್ಣ ಬಿಡಲಿಲ್ಲ. "ಸರಿಯಾಗಿ ಏಳ್ರೀ, ಇನ್ನೂ ಒಸಿ ಮುದ್ದೆ ಕೊಟ್ಟೇನಂತೆ" ಎಂದು ಕುಳಿತ.

ಒಬ್ಬಳು ಹಾಡಿನ ಅರ್ಥವನ್ನು ಸ್ವಲ್ಪದರಲ್ಲಿ ಹೇಳಿ ಮುಗಿಸುವ ಮನಸ್ಸಿನಿಂದ "ಇಲ್ಲಪ್ಪ, ಸರಿ-ಯಾಗಿ ಏಳ್ತೀವಿ. ಮತ್ತೆ ಒಬ್ಬ ಅವ್ವ ಅವಳ ಮಗನ್ನ ಜ್ವಾಲೆ(ಜೋಲಿ)ಗೆ ಮಲಗಿಸಿ, ಮಲಗಲಿ ಮಗಾಂತ ಮ್ಯಾಲೆ ಒಂದು ಗಂಟೆ ಕಟ್ಟಿ, ಆ ಗಂಟೆ ಮ್ಯಾಲೇನೆ ಪದಾ ಹೇಳ್ತಾಳೆ. ಮಗ ನಿದ್ದೆ ಓಗ್ತವೆ, ಅಷ್ಟೇ ಈ ಹಾಡಿನ ಅರ್ಥ. ಅದನ್ನೇ ನಾವೇಳಿದ್ದು" ಅಂದಳು.

ರಂಗಣ್ಣನಿಗೆ ಕತೆ ಮೊಟಕಾದ್ದು ಅರ್ಥವಾಗದಿದ್ದರೂ, ಹೆಂಗಸರಿಗೆ ಸವಾಲು ಹಾಕಿ ಕೇಳುತ್ತಾನೆ: "ಅಂಗಾದ್ರೆ ತೊಟ್ಲು ತೂಗ್ತಿದ್ದೋಳು 'ನಾನೆದ್ದು ಬಂದೇನಂದ್ರೇ ತಾನೇದ್ದು ಬಂದಾನೇ, ಓಡ್ಹೋಗೊ ನನ್ನ ಗಳಗಂಟೆ' ಅಂತ ಯಾಕೆ ಹೇಳ್ತಾಳೆ?"

ಆಗ ಹೆಂಗಸರು ವಿಧಿಯಿಲ್ಲದೆ ಕಥೆಯನ್ನು ಪ್ರಾರಂಭಿಸಬೇಕಾಯಿತು. ರಂಗಣ್ಣನ ಹಠವನ್ನು ಕಂಡುಕೊಂಡಿದ್ದ ರಾಮಕ್ಕೆ ಅವರಿಬ್ಬರು ಹೆಂಗಸರಿಗೂ ಊಟಕ್ಕೆ ಬಡಿಸಿದಳು. ಅವರು ಊಟ-ವಾದನಂತರ ಮನೆಯ ಅಂಗಳದಲ್ಲಿ ಕುಳಿತುಕೊಂಡರು. ಹಳ್ಳಿಯಲ್ಲಿ ಸರ್ವರೂ ಊಟ ತೀರಿ-ಸಿಕೊಂಡು ನಿದ್ದೆ ಹೋಗುವ ಸಮಯ. ಆದರೆ ಕತೆಯನ್ನು ಕೇಳಲು ಅಪೇಕ್ಷೆಯುಳ್ಳವರೆಲ್ಲಾ ಅಲ್ಲಿ ನೆರೆದಿದ್ದರು. ತಾಂಬೂಲ ತಿನ್ನುತ್ತಿದ್ದರು. ಕಥೆ ಪ್ರಾರಂಭವಾಯಿತು.

"ಒಂದೂರಿನಲ್ಲಿ ಒಬ್ಬ ಶೆಟ್ಟಿ ಸಾವಕಾರ ಇದ್ದ. ಅವನಿಗೆ ಒಬ್ಬಳೇ ಒಬ್ಬಳು ಎಣ್ಣು ಮಗಳು. ಬಾಳ ಸುಖವಾಗಿ ಬೆಳಸಿದ್ದ ಶೆಟ್ಟಿ. ಶಾನೆ ಮುದ್ದು ಮಾಡಿ ಬೆಳಸಿದ್ದ. ಉಡುಗಿ ತಳತಳಾಂತ ಒಳೀತಿದ್ಲು. ಬಾಳ ಚಂದಾಗಿದ್ಲು. ಗುಣಾನೂ ಒಳ್ಳೇದೇ. ಆ ಊರಾಗೆ ಆ ಶೆಟ್ಟಿ ನೆಂಟ್ರೊಬ್ರಿದ್ದರು. ಅವರೂ ಬಾಳ ದುಡ್ಡಿದ್ದೋರು. ಇಬ್ಬರ ಮನೆಗಳೂ ಇದಿರುಬದಿರಿಗಿದ್ದವು. ಅವರಿಗೆ ಒಬ್ಬನೇ ಒಬ್ಬ ಮಗ ಇದ್ದ. ಉಡುಗ ಒಳೆಯೋ ಚಂದ್ರಪ್ಪ ಇದ್ದಾಗ್ಗೆ ಇದ್ದ. ಉಡುಗನ ಅಪ್ಪ ಅವ್ವ ಎಲ್ಲಾ ಸೇರಿಕಂಡು ಅವಗೆ ಮದ್ವೆ ಮಾಡಾನಾಂತ ನೋಡಿದ್ರು. ಆದ್ರೆ ಉಡುಗ ಒಪ್ಪವಲ್ಲ! ಯಾವ ಎಣ್ಣ್ ತೋರ್ಸಿದರೂ ಒಂದಲ್ಲ

ಒಂದು ಊನಾ ಅಂತ ಏಳೋನು!"

ಅಷ್ಟು ಹೊತ್ತಿಗೆ ಸರಿಯಾಗಿ ರಂಗಣ್ಣನ ಗೆಳೆಯ ಕೆಂಚಪ್ಪ ಆಗ ತಾನೆ ಊಟಮಾಡಿ ಬಂದು "ಏನೋ ರಂಗಾ, ನಂಗ ಏಳ್ಳೆ ಇಲ್ಲವಲ್ಲೋ ಕತೆಸುದ್ದಿ? ಮುಂಚೇನೇ ಬರ್ತಿದ್ದೆ" ಎಂದು ಬೀಡಿ ಸೇ-ದುತ್ತಾ ರಂಗಣ್ಣನ ಪಕ್ಕದಲ್ಲಿ ಕುಳಿತ. ಅವನಿಗೆ ಪುನಃ ಕತೆ ಹೇಳಿಸಿದ್ದಕ್ಕೆ ಕಾರಣ, ಹಾಡು, ಅದರ ಅರ್ಥ, ಎಲ್ಲವನ್ನೂ ಆದ್ಯಂತವಾಗಿ ತಿಳಿಸಿದ ಮೇಲೆ ಕತೆಯನ್ನು ಮುಂದುವರಿಸಲು ಅನುಮತಿ ಇತ್ತ. "ಜೋಗೇರ್ರು ಆಡು ಬಲು ಪಸಂದ್ ಏಳ್ತಾರೆ ಕಣೋ" ಎಂದು ರಂಗನಿಗೆ ಹೇಳಿದ. "ಆಡನೂ ಯೇ-ಳ್ತಾರೆ, ಕತೇನೂ ಅದ್ಕಿಂತ ಪಸಂದಾಗಿ ಏಳ್ತಾರೆ ಕೇಳೋ" ಎಂದು ರಂಗ ಹೇಳಿ ತನ್ನ ಮೆಚ್ಚಿಕೆಯನ್ನು ತೋರಿಸಿದ. ಇವರು ಮಾತನಾಡುತ್ತಿರುವಾಗ ಕತೆ ಹೇಳುತ್ತಿದ್ದವಳು ಸುಮ್ಮನಾಗಿದ್ದಳು. "ಕತೆ ನೆಪ್ಪು ಮಾಡಿಕೋತೀಯೇನವ್ವ?" ಎಂದು ಕೇಳಿದ ಕೆಂಚಣ್ಣ. ಅವಳು ಮಾತೇನನ್ನೂ ಆಡದೆ ಪುನಃ ಕತೆ ಮುಂದುವರಿಸಿದಳು.

"ಇಂಗೇ ಇರೋವಾಗ..."

"ಅಲ್ಲ ಕಣವ್ವಾ. ಆ ಉಡ್ಗಿ ಎಸ್ರೇ ಏಳ್ಲಿಲ್ಲ. ಏನದು? ಉಡುಗನ ಎಸರೇನು? ಇಬ್ಬರು ಶೆಟ್ಟಿ ಸಾವ್ಕಾರ್ರಿಗೂ ಏನು ನೆಂಟಸ್ತನ?" ಎಂದು ಮಧ್ಯೆ ರಂಗಣ್ಣ ಪ್ರಶ್ನೆ ಹಾಕಿದ.

ಅದಕ್ಕವಳು "ಮರ್ತಿದ್ದೆ ಕಣಪ್ಪ. ಅವೆಳ್ಡು ಮನ್ಯೋರಿಗೂ ಆಗ್ತಿರನಿಲ್ಲ. ಒಬ್ರಿಗೊಬ್ರಿಗೆ ದ್ವೇಸ! ದುಡ್ಡಿದ್ದೋರೆಲ್ಲ ಅಂಗೆ ಅಲ್ವಾ? ಅವೆಳ್ಡು ಮನೆಗೂ ಎಣ್ಣು ಕೊಟ್ಟು ಎಣ್ಣು ತಂದಿದ್ದರಂತೆ. ಈಗಲೂ ಆ ಉಡಿಗ್ಗೂ ಈ ಉಡುಗ್ಗೂ ಮದ್ವೆ ಮಾಡಬೋದಿತ್ತು! ಆದ್ರೆ ಜಿದ್ದೊಂದೈತಲ್ಲಾ, ಅಷ್ಟೇ ಮಾಡಿರ್ನಿಲ್ಲ. ...ಇಂಗೇ ಇರೋವಾಗ, ಊರ್ತುಂಬ ಸುದ್ದಿ! ಆ ಗುರಪ್ಪನಿಗೂ, ಸುಂದ್ರವ್ವನಿಗೂ ಗೆಣೆತನ ಬಿದ್ದದೇ ಅಂತ! ಮರ್ತಿದ್ದೆ- ಉಡ್ಗಿ ಎಸ್ರು ಸುಂದರೀಂತ; ಉಡ್ಗನೆಸ್ರು ಗುರಪ್ಪಾಂತ. ಈ ಸುದ್ದಿ ಅವರಪ್ಪ ಅವ್ವ-ಗಳಿಗೂ ಮುಟ್ಟಿತೂ ಅನ್ನು."

"ಕಳ್ಳೇಂಡ್ತಿ..." ಎಂದು ಮಧ್ಯೆ ಬಾಯಿ ಹಾಕಿದ ರಂಗಣ್ಣ.

"ಇಬ್ರು ಸಾವ್ಕಾರ್ರಿಗೂ ಸಿಟ್ಟು ಎಚ್ಚಾಗಿಬಿಡ್ತು. ಗುರಪ್ಪರಪ್ಪ ಉಡ್ಗನ್ನ ಸಿಕ್ಕಾಪಟ್ಟೆ ಬೈದು "ಮನೆ ಬಿಟ್ಟು ಒಳ್ಡು ಸುಮ್ಮಗೆ. ನಿನ್ನನೆಣಾನೆಲ್ಲ ಕಕ್ಕಿಸಿ ಬಿಡ್ತೀನಿ" ಅಂತ ಅಂದುಬಿಟ್ಟ. ಈ ಕಡೆ ಸುಂದ್ರವ್ವನವ್ವ

ಅಪ್ಪ ಇಬ್ರೂ ಸೇರಿ ಅವ್ಳಿಗೆ ಚೆನ್ನಾಗಿ ಬೈದು ಒದ್ದು, 'ಮಾಡಿಮೇಲೇ ಇರು' ಅಂತ ಏಳಿ, ಎಲ್ಲಿ ಓಗ್ಬೇಡ ಅಂತ ಏಳಿದ್ದರು.

ಇದಿರುಬದರಿಗೆ ಮನೆಯ ಕಟ್ಟಿ
ಬರಿಯಮಾತಿಗೆ ಗುರಿಯನಾದೆಲ್ಲೋ-ಐಮಾಲೆರುಡುಗ
ಬರಿಯ ಮಾತಿಗೆ ಗುರಿಯನಾದೆಲ್ಲೋ...
ಆಗುದೋನೆ ಭೋಗುದೋನೆ
ನಾಗರಾವಿನ ಬಣ್ಣದೋನೆ
ಕೋಗುಲಾಗಿ ಕೂಗುತಿದ್ದೆಲ್ಲೋ- ಐಮಾಲೆರುಡುಗ
ಕೋಗುಲಾಗಿ ಕೂಗುತಿದ್ದೆಲ್ಲೋ...

ಇಂಗೇ ಏಳ್ಕೊಂತಾ ಕಾಲ ಕಳೀತಿದ್ಲು. ಅವರಪ್ಪ ಅವ್ವರು 'ಉಡ್ಗಿ ಇಂಗೇ ಬಿಟ್ರೆ ಅತ್ತು ಅತ್ತು ಬತ್ತಿ ಅಂಗಾಗೋಗ್ತಾಳೆ' ಅಂತ ಬೇರೆ ಊರಿನ ಸಾವ್ಕಾರ್ರ ಮನೆಗೆ ಕೊಟ್ಟು ಲಗ್ನ ಮಾಡಿದರು..."

"ಈನಂತ ರುಸ್ತುಮ್ಮಾಗಿದ್ರೆ ಆ ಹುಡ್ಗೀನೇ ಮದ್ವೆ ಆಗ್ತಿದ್ದ. ಅದಬಿಟ್ಟು ಸುಮ್ನೆ ಯಾಕೆ ಬಿಟ್ಬಿಟ್ಟ? ಅದೆಂಗೆ ಗೊತ್ತಾತವ್ವ ಅವರಿಬ್ಬರ ಗೆಣೆತನ ಎಲ್ಲಾರಿಗೂ?" ಎಂದ ಕೆಂಚಣ್ಣ.

"ಎಂಗೋ ಗೊತ್ತಾತು ಅಂದುಕೊಪ್ಪ. ಕತೆ ಏಳ್ಬಿಡ್ತೀನಿ. ಆಮ್ಯಾಲೆ ಅದ್ನೆಲ್ಲಾ ಕೇಳೀವಂತೆ" ಎಂದು ಹೇಳಿ ಕತೆ ಹೇಳುವವಳು ಕತೆಯನ್ನು ಮುಂದುವರಿಸಿದಳು.

"ಆಮ್ಯಾಲೆ ಏನಾತೂಂದ್ರೆ- ವುಡ್ಗ ಸೊಲ್ಪ ಹಠಗಾರ, ಏನೇ ಆಗ್ಲಿ ನನ್ನ ಇಶ್ವಾಸ ಬಿಡಾಕಿಲ್ಲ ಅಂತ ಇದ್ದ."

"ಹಠಮಾಡಿ ಮಠದಯ್ಯ ಕೆಟ್ಟನಂತೆ ಅನ್ನೋ ಗಾದೇ ಹಂಗೇ ಅನ್ನವ್ವ" ಕೆಂಚಣ್ಣ ದನಿಗೂಡಿಸಿದ. "ಮುಂದೇನಾತವ್ವ?" ಎಂದು ಎಲ್ಲರೂ ಕೇಳಿದರು.

"ಆ ವುಡ್ಗಿ ಕೊಟ್ಟ ಊರು ಬಾಳ ಅತ್ತರ ಆಗಿತ್ತು. ಈ ಉಡ್ಗ ದಿನಾಲು ಚೆಂಜೆ ಒತ್ನಾಗೆ ಓಗೋಗಿ ಬರ್ತಿದ್ದ್ನಂತೆ. ಇಂಗೇ ನಡೀತಾ ಇತ್ತು ಅವರಿಬ್ಬರಿಗೂ ಇಶ್ವಾಸ."

”ಗೊತ್ತಾಗಕಿಲ್ವ ಅಂಗೆ ಪರೂರಿಗೋಗಿ ಬಂದ್ರೆ ದಿನಾಗ್ಲೂ?” ಎಂದು ಅಲ್ಲಿದ್ದ ಯುವಕರಲ್ಲೊಬ್ಬ ಕೇಳಿದ.

”ಅವ್ಳು ಬಾಳ ಗಾಟಿ ಎಣ್ಣು! ಒಂದು ಒಳ್ಳೆ ಪಸಂದಾದ ಆಟಾನೇ ಕಟ್ಟಿದ್ಲಂತೆ. ಈ ಉಡಗನಿಗೆ ಅವಳು ಏಳಿಕೊಟ್ಟಿದ್ಲಂತೆ, ’ನೀನು ಜಿನಾ ಬರೋವಾಗ ಒಂದು ಎತ್ತಿಗೆ ಕಟ್ಟೋ ಗಂಟೆನಾ ಇಡು-ಕೊಂಡು ಬಂದು ನಮ್ಮನೆ ಸೂರಿನ ಗಳ ಅಲಗಾಡಿಸಿ ಗಂಟೆ ದನಿಮಾಡು. ಅಂದರೆ ದನ ಬಂದು ಸೂರು ಉಜ್ಜಿದರೆ ಯಂಗ ಸಬ್ದಾಗುತ್ತೊ ಅಂಗಮಾಡು’ ಅಂತ ಹೇಳ್ಕೊಟ್ಟಿದ್ಲಂತೆ...”

”ಊ ಊ ಆ ಮಾಕೇನಾಯಿತು?” ಎಂದು ಎಲ್ಲರೂ ಉತ್ಸಾಹದಿಂದ ಕೇಳಿದರು.

”ಜಿನಾಲು ಇವ ಚಂಜಿನಾಗ ಬರೋದು. ಗಂಟೆ ಸಬ್ದ ಮಾಡಿ ಎತ್ತು ಉಜ್ಜಿದಾಂಗೆ ಮನೆಸೂರು ಉಜ್ಜಿತಿದ್ದ. ಆವಾಗ ಅವಳು ತನ್ನ ಗಂಡನಿಗೆ ’ಯಾವುದೋ ದನಾ ಬಂದಂಗೈತೆ. ಓಗಿ ಓಡಿಸಿ ಬತ್ತೀ-ನಿ’ ಅಂತ ಏಳಿ, ವರಾಕೆ ಬಂದು, ಈ ಉಡ್ಗನತ್ರ ಮಾತಾಡಿ ಓಗ್ತಿದ್ಲು. ಇಂಗೇ ಬಾಳ ದಿನ ನಡೀತಾ ಇತ್ತು. ಗಾದೇಲಿ ಕಳ್ಳನೇಂಡ್ತೀನ ಅನ್ನವಂಗೆ ಇದೂ ಕೂಡಾ ಗೊತ್ತಾಗಬೋದು ಅಂತ ಅವರು ಏಚ್ನೇ-ನೇ ಮಾಡ್ಲಿಲ್ಲ.”

”ಅಲ್ಲವ್ವೊ, ಅವನಿಗೆ ಅವ್ಳ ಗಂಡಗೆ ಗೊತ್ತಾಗ್ಲೆ ಇಲ್ವ? ವಸಿನೂ ಅನಮಾನಾನೇ ಬರಾಲ್ವ? ಅವ-ನೆಂತನವ್ವ ಅವನು?” ಎಂದು ಕೇಳಿದ ರಂಗಣ್ಣ. ಸ್ವಲ್ಪ ಬಿರುಸಾಗಿತ್ತು ಅವನ ವಾಣಿ. ಮನಸ್ಸು ಜು-ಗುಪ್ಸೆಯಾಗಿತ್ತು, ಈ ಹೊಲಸು ಸುದ್ದಿ ಕೇಳಿ. ಆದರೂ ಕತೆ ಮುಂದುವರಿಯಲೆಂದು ಸುಮ್ಮನಾದ.

”ಬರಾಕಿಲ್ವ ರಂಗಪ್ಪ? ಎಂತರಿಗೂ ಅನಮಾನ ಬರಾ ಮಾತೇ, ಬಿಡಪ್ಪ. ’ದಿನಾನು ದನ ಬರೋ-ದಂದ್ರೇನು? ದಿನಾಲು ಗಂಟೆ ಸದ್ದಾಗದಂದ್ರೇನು? ಇವ್ಳು ಅದ ಬಡಿಯಾಕೆ ಯಾಕೆ ಓಗ್ಬೇಕು? ಅದೂನೂ ಇದೇ ಒತ್ಗೆ?’ ಅಂತ ಅವನಿಗೂ ಅಪೂಟಾ ಅನುಮಾನಾಗಿಬಿಡ್ತು. ಒಂದಿನ ಗಂಟೆ ಶಬ್ದಾಗ್ತಿಲೂ ಏನ್ಮಾಡ್ದಾಂತೀಯಾ? ಏಂಡ್ತಿ ವರಕ ಓಗಬರ್ತೀನೀಂತ ಏಳ್ಕೆಂತ ಓಗ್ಬೇಕು- ಅಷ್ಟೊತ್ತಿಗಿ-ವನೇ ಎದ್ದು ’ಲೇ, ಇವತ್ತು ನಾನೇ ಕಾಲ್ಮುರೀವಗೆ ವಡ್ದು ಬರ್ತೀನಿ ಕಣೇ ಈ ದನಾನ! ಏನಿದು ದಿನಾಲು ಬಂದು ಸೂರು ಉಜ್ಜುತದೆ!” ಎಂತ ಹೇಳಿ ಹೊರಡುವುದರಲ್ಲಿದ್ದ. ಸರ್ರಂತ ಇವ್ಳು ಒಂದುಪಾಯ ಮಾಡಿದ್ಲು. ಏನಂತಿಯಾ- ಸರಕ್ ಅಂತ ತೊಟ್ಲುತಾಕೋಗಿ- ಮಗ- ಮನಿಕ್ಕಂಡಿತ್ತು ಅಂಗಾದ್ರೂ ಸುಮ್‌ಸುಮ್ಮೆ ತೂಗಿದ್ಲು; ತೂಗಬೇಕಾದರೆ ಒಂದಾಡೇಳಿದ್ಲು!

ಜೋ ಜೋ ಗಂಟೆ, ಗಳಗಂಟೆ,
ನಾನೆದ್ದು ಬಂದೇನಂದ್ರೇ
ತಾನೇದ್ದು ಬಂದಾನೇ
ಓಡ್ಹೋಗೊ ನನ್ನ ಗಳಗಂಟೆ

ಅಂತ ಅವ್ವ ಇಶ್ವಾಸದ ಗಳ-ಗಂಟೆಗೆ ಎಚ್ಚರಕೊಟ್ಟು, ಜೋ ಜೋ ಕಂದಾ ಅಂತ ಮನಗಿದ್ದ ಮಗೀನ ತೂಗ್ತಾ ಇದ್ಲು. ಇಷ್ಟಾಗಿ, ಹೊರಗಡೆ ನಿಂತಿದ್ದ ಗುರಪ್ಪನಿಗೆ ಈ ಆಡು ಕೇಳಿಸ್ತು. ಒಂದ್ಸಾರಿ, ಎಳ್ಡಾವರ್ತಿ ಕೇಳಿ ಪದದ ಅರ್ಥಮಾಡಿಕೊಂಡ. 'ಓಡ್ಹೋಗೋ ನನ್ನ ಗಳ-ಗಂಟೆ' ಅಂತ ಕೇಳಿದೇಟಿಗೇ ಕಿತ್ತ ಓಟ ತನ್ನೂರು ಕಾಣುವರಿಗೂ. ಗಂಡ ನೋಡಿದರೆ ಅಲ್ಲೇನು ಇರ್ಲಿಲ್ಲ. ಗಂಡ ಪೆದ್ನಂಗೆ ಸುಮ್ಕೆ ಬಂದ ಮನೆ ವಳಾಕೆ."

"ಎಂಗ್ಸರ ಬುದ್ದಿ ಇಂಗೇ ಅಂತ ಏಳಾಕೇ ಏಳ್ನೂರ್ ದೇವರ ಕೈಲೂ ಆಗಲ್ಲ ಅಂತಾರವ್ವೊ, ಅದೇ ಇರಬೇಕು" ಎಂದು ರಂಗಣ್ಣ ಸೇರಿಸಿದ. "ಈಗ ಇಚಾರ ಗೊತ್ತಾತೇನಪ್ಪಾ ಆ ಪದೀನರ್ಥ ಏನೂಂತ?" ಎಂದು ಜೋಗಿತಿ ಕೇಳಿದಳು. ಅದಕ್ಕೆ ಅವನು ಅರ್ಥವಾಯಿತೆಂದು ತಲೆದೂಗಿದ. "ಇಂತವನ್ನ ಅರ್ತಮಾಡಿಕಣಕಿಂತ ಎಲಡ್ಕೆ ಜಗಿಯಾದು ಏಟೋ ವಾಸಿ" ಅಂತ ಹೇಳಿದ.

ಅಷ್ಟು ಹೊತ್ತಿಗೆ ಎಲ್ಲರಿಗೂ ನಿದ್ರೆ. ಜೋಗಿತಿ ಹೆಂಗಸರು ದೇವಸ್ಥಾನದಲ್ಲಿ ಮಲಗಲು ಹೊರಟ-ರು, ಉಳಿದವರು ಅವರವರ ಮನೆಗೆ ಹೊರಟರು.

-ಎಂ. ಚಂದ್ರಶೇಖರಯ್ಯ.

[ಇದು ಹೊಳಲ್ಕೆರೆ ತಾಲ್ಲೂಕು, ಸಿರಾಪನಹಳ್ಳಿಯಲ್ಲಿ ಕೇಳಿದ್ದು.]

ಅಳು-ನಗು

ಅಳುವೇನು? ನಗುವೇನು? ಹೃತ್ಕಪಾಟೋದ್ಘಾಟ!
ಶಿಲೆಯೆ ನೀಂ ಕರಗದಿರಲ್? ಅರಳದಿರೆ ಮರಳೇಂ?

ಒಳಜಗವ ಹೊರವಡಿಪ, ಹೊರಜಗವನೊಳಕೊಳುವ

ಸುಳುದಾರಿಯಳುನಗುವು- ಮಂಕುತಿಮ್ಮ

ತಕ್ಕಣ್ಣನ ಮಗ

ತಲಕಾಡು ತಕ್ಕಣ್ಣ ಹೆಸರುವಾಸಿಯಾದ ಭಾರಿ ಕಳ್ಳ. ಕಳ್ಳತನ ಅವನ ಮನೆತನದ ಕಸುಬು. ಕುಲಕಸುಬನ್ನು ಚಾಚು ತಪ್ಪದೆ ನಡೆಸುತ್ತಿದ್ದ. ಆ ಪ್ರಾಂತ್ಯದ ಎಲ್ಲಾ ಪೊಲೀಸ್ ಅಧಿಕಾರಿಗಳ ಗುರ್ತೂ ಅವನಿಗುಂಟು. ಪೊಲೀಸಿನವರು ಅವನನ್ನು ವಾರಕ್ಕೆ ಎರಡು ಮೂರು ಬಾರಿಯಾದರೂ ಭೇಟಿ ಮಾಡುವರು; ಆ ಸುತ್ತಿನಲ್ಲಿ ಎಲ್ಲಿ ಕಳ್ಳತನ, ದರೋಡೆಗಳಾದರೂ ಪೊಲೀಸಿನವರು ಬಂದು ಅವನನ್ನು ವಿಚಾರಿಸಿಕೊಂಡು ಹೋಗುವ ಒಂದು ಸಂಪ್ರದಾಯ ಬಹಳ ಕಾಲದಿಂದ ಬಂದಿತ್ತು. ಆ ಸಮಯದಲ್ಲಿ ಅವನು ಎಲ್ಲಿದ್ದ, ಏನು ಮಾಡುತ್ತಿದ್ದ ಎಂಬುದನ್ನು ಗ್ರಾಮಸ್ಥರಿಂದ ತನಿಖೆ ಮಾಡಿ ತಿಳಿದುಕೊಳ್ಳುತ್ತಿದ್ದರು. ಈ ಗ್ರಾಮಸ್ಥರಿಗೆ ತಕ್ಕಣ್ಣ ಮನೆಯಲ್ಲಿ ಇದ್ದಂತೆ ತೋರಿದರೂ ರಾತ್ರಿ ಎಲ್ಲರೂ ಗಾಢವಾಗಿ ನಿದ್ರಿಸುವ ವೇಳೆಯಲ್ಲಿ ತನ್ನ ಕಾರ್ಯವನ್ನು ಪ್ರಾರಂಭಿಸಿ, ಬೆಳಗಾಗುವ ಮೊದಲೇ ಮನೆ ಸೇರಿ, ನಿದ್ರೆ ಹೊಡೆದು ಏನೂ ತಿಳಿಯದವನಂತೆ ಇರುತ್ತಿದ್ದ. ಇದರಿಂದ ಗ್ರಾಮಸ್ಥರಿಗೆ ಅವನ ಚಲನವಲನಗಳನ್ನರಿಯುವುದು ಕಷ್ಟವಾಗಿತ್ತು.

ರಂಗ ಇವನ ಒಬ್ಬನೇ ಮಗ. ಚಿಕ್ಕಂದಿನಿಂದ ತುಂಬಾ ಮುದ್ದಿನಿಂದ ಸಾಕಿದ್ದ. ಇವನನ್ನು ತಕ್ಕಣ್ಣ ಅಕ್ಕ ಪಕ್ಕದ ಸಂತೆಗೆ ಕರೆದುಕೊಂಡು ಹೋಗುತ್ತಿದ್ದ. ಸಂತೆಯಲ್ಲಿ ಹಣ್ಣು ತರಕಾರಿ ಮಾರುವವರಿಂದ ತರಕಾರಿ ಹಣ್ಣು ಕದಿಯುವುದು ರಂಗನಿಗೆ ತನಗೆ ತಾನೆ ಬಂದ ವಿದ್ಯೆಯಾಗಿತ್ತು. ಒಂದು ದಿನ ರಂಗ ಅಪ್ಪನ ಹೆಗಲ ಮೇಲೆ ಕೂತು ಹೋಗುವಾಗ ಪಕ್ಕದಲ್ಲಿ ಹಾಯ್ದು ಹೋಗುವವನ ಬುಟ್ಟಿಯಿಂದ ಬಟ್ಟೆಯ ಗಂಟೊಂದನ್ನು ಕದ್ದು ಮನೆಯಲ್ಲಿ ಅಪ್ಪನಿಗೆ ತೋರಿಸಿದ. ತಕ್ಕಣ್ಣ ಅವನ ಬುದ್ಧಿಕೌಶಲಕ್ಕೆ ಬೆರಗಾಗಿ ರಂಗನನ್ನು ಕೊಂಡಾಡಿದ. ತನ್ನ ಮನೆತನದ ಕಸುಬು ತನಗೇ ಕೊನೆಗೊಳ್ಳದೆ ಮುಂದಕ್ಕೂ ಬೆಳೆಯುವ ಚಿಹ್ನೆಯನ್ನು ಕಂಡು ಸಂತೋಷಪಟ್ಟ.

ರಂಗ ಬೆಳೆಬೆಳೆದಂತೆಲ್ಲಾ ತಕ್ಕಣ್ಣ ತನಗೆ ಗೊತ್ತಿದ್ದ ಕಳ್ಳತನದ ಎಲ್ಲಾ ವಿದ್ಯೆಗಳನ್ನೂ ಮಗನಿಗೆ ಕಲಿಸಿದ. ತನ್ನ ಗ್ರಾಮದಲ್ಲಿ ಎಲ್ಲರೂ ರಾತ್ರಿ ವೇಳೆ ಮಲಗಿದ ಮೇಲೆ, ರಂಗನ ಕಾಲಿಗೆ ಗೆಜ್ಜೆ ಕಟ್ಟಿಸಿ, ತನ್ನ ಹೆಂಚಿನ ಮನೆಯ ಮೇಲೆ ಒಂದು ಚೂರೂ ಶಬ್ದವಾಗದಂತೆ ನಡೆಯುವುದನ್ನು ಹೇಳಿಕೊಡುತ್ತಿದ್ದ.

ಬಹಳ ಶ್ರಮದ ಫಲವಾಗಿ ರಂಗ ಈ ವಿದ್ಯೆಯಲ್ಲಿ ಪಾರಂಗತನಾದ.

ರಂಗನಿಗೆ ಇಪ್ಪತ್ತು ವರ್ಷವಾಗುತ್ತಾ ಬಂತು. ಅಪ್ಪನನ್ನು ಮೀರಿಸಿದ ಭಾರಿ ಕಳ್ಳನಾದ. ಪೊಲೀಸಿ-ನವರ ರೆಜಿಸ್ಟರಿಗೆ ಅಪ್ಪ ಮಕ್ಕಳಿಬ್ಬರೂ ದಾಖಲಾದರು. ತಕ್ಕಣ್ಣನಿಗೆ ಮಗನ ಮದುವೆಯ ಯೋಚನೆ ಬಲವಾಯಿತು. "ಕಳ್ಳನ ಹೆಂಡತಿ ಎಂದಿದ್ದರೂ..." ಎಂಬುದನ್ನು ಅವನು ತಿಳಿದಿದ್ದರೂ, ತನಗೆ ಸರಿ-ಸಮಾನರಲ್ಲಿ ಹೆಣ್ಣು ತರುವ ಹಂಬಲ ಹಿಡಿಯಿತು.

ಆ ಪ್ರಾಂತ್ಯದ ಸುತ್ತ ಯಾರೂ ತಕ್ಕಣ್ಣನಷ್ಟು ಭಾರಿ ಕಳ್ಳರಿರಲಿಲ್ಲ. ಆದರೆ ಮಾಲಂಗಿ ಚಿಕ್ಕಣ್ಣ ಕೆಲ-ವು ವಿಷಯಗಳಲ್ಲಿ ತಕ್ಕಣ್ಣನಿಗೆ ಸರಿಸಮಾನನಾಗಿದ್ದ. ಚಿಕ್ಕಣ್ಣನ ಪರಿಚಯ ತಕ್ಕಣ್ಣನಿಗೆ ಸ್ವಲ್ಪ ಮಟ್ಟಿಗಿ-ತ್ತು. ಇಬ್ಬರೂ ಒಂದೇ ಕಡೆ ಜೈಲಿನಲ್ಲಿ ಕೆಲವು ದಿವಸವಿದ್ದರು. ಚಿಕ್ಕಣ್ಣ ತನ್ನ ಮನೆಯ ವಾರ್ತೆಯನ್ನು, ತನಗೆ ಇದ್ದ ಒಬ್ಬಳೇ ಮಗಳು ಚೆನ್ನಿಯ ವಿಚಾರವನ್ನು ತಕ್ಕಣ್ಣನಿಗೆ ತಿಳಿಸಿದ್ದ. ತಕ್ಕಣ್ಣ ಅದೆಲ್ಲವನ್ನು ಯೋಚಿಸಿ, ಕೊನೆಗೆ ಚಿಕ್ಕಣ್ಣನನ್ನು ನೋಡಲು ಮಾಲಂಗಿಗೆ ಹೊರಟ. ಚಿಕ್ಕಣ್ಣ, ತಕ್ಕಣ್ಣನನ್ನು ಬಹು ಆದರದಿಂದ ಬರಮಾಡಿಕೊಂಡು, ಬಂದ ಸಮಾಚಾರವನ್ನು ವಿಚಾರಿಸಿ, ಎಲ್ಲವನ್ನೂ ತಿಳಿದ. ಚಿಕ್ಕಣ್ಣ ತಕ್ಕಣ್ಣನನ್ನು ಅವನ ವಿದ್ಯೆಗೆ ಮೆಚ್ಚಿದ್ದ. ಆದರೆ ಅಪ್ಪನಂತೆ ಮಗನೂ ಇರಬಲ್ಲನೆಂದು ತಿಳಿದಿರಲಿಲ್ಲ. ತನ್ನ ಮಗಳನ್ನು ತನಗಿಂತ ಭಾರಿ ನಿಸ್ಸೀಮ ಕಳ್ಳನಿಗೆ ಕೊಡಬೇಕೆಂಬ ಆಸೆ ಬಹುದಿವಸಗಳಿಂದಲೂ ಮನಸ್ಸಿನಲ್ಲಿ ಬೇರೂರಿತ್ತು. ತಮ್ಮಣ್ಣನೊಡನೆ ಸಂಬಂಧ ಬೆಳೆಸಲು ಆಸೆಯಾದರೂ ಅವನ ಮಗನ ಯೋಗ್ಯತೆಯ ವಿಚಾರದಲ್ಲಿ ಸ್ವಲ್ಪ ಅನುಮಾನಗೊಂಡಿದ್ದ. ಕೊನೆಗೆ "ಗಂಡನ್ನು ನೋಡಬೇಕು, ನನ್ನ ಮನೆಗೆ ಕಳಿಸಿಕೊಡಿ" ಎಂದು ಚಿಕ್ಕಣ್ಣ ತಿಳಿಸಿ ತಕ್ಕಣ್ಣನನ್ನು ಊರಿಗೆ ಕಳಿಸಿಕೊಟ್ಟ.

ರಂಗ ಮಾರನೆಯ ದಿನ ಚಿಕ್ಕಣ್ಣನ ಮನೆಯಲ್ಲಿ ಹಾಜರಾದ. "ಹುಡುಗನೇನೋ ದೃಢವಾಗವ-ನೆ, ಗಟ್ಟಿಮುಟ್ಟಾಗವನೆ" ಎಂದು ಚಿಕ್ಕಣ್ಣ ಮನಸ್ಸಿನಲ್ಲಿ ಅಂದುಕೊಂಡ. ತಾನು ಹಿಂದೆ ಕದ್ದು ತಂದ ವಡವೆ ವಸ್ತುಗಳನ್ನು ಕರಗಿಸಿ ಒಂದು ದೊಡ್ಡ ಬೆಳ್ಳಿ ತಟ್ಟೆ ಮಾಡಿಸಿದ್ದ. ಆ ತಟ್ಟೆಯನ್ನು ಯಾವಾಗಲೂ ಹೊರಗೆ ತೆಗೆದಿರಲಿಲ್ಲ. ಅಂದು ಭಾವೀ ಅಳಿಯನ ಉಪಚಾರಕ್ಕೆ ಹೊರ ತೆಗೆದ. ಅದರಲ್ಲಿಯೇ ಅಳಿಯನಿಗೆ ಚೊಕ್ಕ ಭೋಜನ ಮಾಡಿಸಿದ. ರಂಗ ಅಷ್ಟು ದೊಡ್ಡ ತಟ್ಟೆಯನ್ನು ಎಂದೂ ಎಲ್ಲಿಯೂ ನೋಡಿರಲಿಲ್ಲ. ರಂಗನಿಗೆ ಊಟಕ್ಕಿಂತ ತಟ್ಟೆಯ ಮೇಲೆ ಹೆಚ್ಚಿಗೆ ಗಮನ ಬಿತ್ತು. "ಕೊನೆಗೆ ಏನಾ-ದರೂ ಮಾಡಿ ಇದನ್ನು ಹೊಡೆದುಬಿಡಬೇಕು" ಎಂದು ಮನಸ್ಸಿನಲ್ಲಿಯೇ ಗುಣಾಕಾರ ಹಾಕಿದ. ತಟ್ಟೆ ಇಡುವ ಸ್ಥಳವನ್ನು ಬಹು ಸೂಕ್ಷ್ಮವಾಗಿ ಕೂತ ಕಡೆಯಿಂದಲೇ ಪರೀಕ್ಷಿಸುತ್ತಿದ್ದ. 'ಕಳ್ಳರ ಗುಟ್ಟು ಕಳ್ಳ-

ರಿಗೇ ಗೊತ್ತು' ಎಂಬಂತೆ ಚಿಕ್ಕಣ್ಣ ಇವನ ಸೂಕ್ಷ್ಮತೆಯ ಮರ್ಮವನ್ನರಿತ. ರಂಗ ಬೆಳ್ಳಿ ತಟ್ಟೆಯನ್ನು ಕದಿಯಲು ಇಷ್ಟು ಹೊಂಚು ಹಾಕುತ್ತಿದ್ದಾನೆಂಬುದು ಚಿಕ್ಕಣ್ಣನಿಗೆ ಮನದಟ್ಟಾಯಿತು. ರಂಗ ಮಲ-ಗಿದ ಮೇಲೆ ಚಿಕ್ಕಣ್ಣ ತಟ್ಟೆಯನ್ನು ತನ್ನ ಮಗಳಿಂದ ತರಿಸಿ, ಅದರ ತುಂಬಾ ನೀರು ತುಂಬಿಸಿ, ತಾನು ಮಲಗಿಕೊಳ್ಳುವ ಸ್ಥಳದ ಮೇಲೆ ಚಾವಣಿಗೆ ತೂಗುಹಾಕಿದ. ಯಾರಾದರೂ ತಟ್ಟೆಯನ್ನು ಕದಿಯಲು ಬಂದಾಗ, ಅದರಲ್ಲಿನ ನೀರು ತನ್ನ ಮೇಲೆ ಚೆಲ್ಲಿ ಎಚ್ಚರಗೊಳ್ಳಬಹುದೆಂಬುದೇ ಅವನ ಉಪಾಯ.

ಸುಮಾರು ರಾತ್ರಿ ಎರಡು ಗಂಟೆ ಇರಬಹುದು. ಎಲ್ಲರೂ ಗಾಢ ನಿದ್ರೆಯಲ್ಲಿದ್ದಾರೆ. ರಂಗ ಎದ್ದ-ವನೇ ಸದ್ದಿಲ್ಲದೆ ಒಳಹೊಕ್ಕು ತಟ್ಟೆಗಾಗಿ ಹುಡುಕಾಡಿದ. ತಟ್ಟೆಯು ಕಣ್ಣಿಗೆ ಬೀಳದೆ ನಿರಾಸೆಗೊಂದು ಹಿಂತಿರುಗುವಾಗ ಹಠಾತ್ತನೆ ಮೇಲಕ್ಕೆ ಕತ್ತೆತ್ತಿ ನೋಡಿದ. ತಟ್ಟೆ ಚಿಕ್ಕಣ್ಣನ ಮೇಲೆ ನೇರವಾಗಿ ನೇತು-ಹಾಕಿತ್ತು. ಅದರಲ್ಲಿ ತುಂಬಾ ನೀರಿದ್ದದ್ದು ರಂಗನಿಗೆ ಕಂಡುಬಂತು. ಕೈಯಿಂದ ತೆಗೆಯಲು ಹೋದ-ರೆ ನೀರು ಕೆಳಕ್ಕೆ ಚೆಲ್ಲಿ ಚಿಕ್ಕಣ್ಣ ಎಚ್ಚರಗೊಳ್ಳಬಹುದೆಂದು ಯೋಚಿಸುತ್ತಿರುವಾಗಲೇ ತಕ್ಷಣ ಒಂದು ಉಪಾಯ ಹೊಳೆದು, ಹೊರಗೆ ಹೊರಟ. ಹೊರಗಡೆ ಮೇಲೆ ಕಟ್ಟಿದ್ದ ಸ್ಥಳದಲ್ಲಿ, ಹರಳುಕಡ್ಡಿಯ ಕೊಳವೆಗಳು ತುಂಬಾ ಬಿದ್ದಿದ್ದುವು. ಮೇಕೆ ಎಲೆಯನ್ನು ತಿಂದು ಕೊಳವೆಗಳನ್ನು ಹಾಗೆಯೇ ಬಿಟ್ಟಿತ್ತು. ಅವುಗಳಲ್ಲಿ ಚೆನ್ನಾಗಿರುವುದನ್ನು ಹುಡುಕಿ ತಂದು ತಟ್ಟೆಯಲ್ಲಿದ್ದ ನೀರನ್ನೆಲ್ಲಾ ಒಂದು ತೊಟ್ಟೂ ಕೆಳಕ್ಕೆ ಬೀಳದಂತೆ ಹೀರಿ ಕುಡಿದ. ಅನಂತರ ತಟ್ಟೆಯನ್ನು ಕೆಳಕ್ಕೆ ತೆಗೆದುಕೊಂಡ. ಅದನ್ನು ಎಲ್ಲಿ ಬಚ್ಚಿಡ-ಬೇಕೆಂಬುದು ಅವನಿಗೆ ಕೂಡಲೆ ಹೊಳೆಯಲಿಲ್ಲ. 'ಊರಿಗೆ ಈಗಲೇ ಹಿಂದಿರುಗಿದರೆ ಕಳ್ಳತನವ-ನ್ನು ತನ್ನ ಮೇಲೆ ಹೊರಿಸುವರು' ಎಂದು ಭಾವಿಸಿ, ಅದನ್ನು ಅಲ್ಲಿಯೇ ಎಲ್ಲಿಯಾದರೂ ಬಚ್ಚಿಡಲು ಮನಸ್ಸು ಮಾಡಿದ. ತತ್‌ಕ್ಷಣ ಒಂದು ಉಪಾಯ ಹೊಳೆದು, ತಟ್ಟೆಯನ್ನು ಕೈಲಿ ಹಿಡಿದು ಹೊಳೆಯ ಕಡೆಗೆ ಧಾವಿಸಿದ. ಹೊಳೆಯಲ್ಲಿ ನಡುವಿನವರೆಗೂ ಇಳಿದು, ತಟ್ಟೆಯನ್ನು ತಳದ ಬದಿಯಲ್ಲಿ ಬಚ್ಚಿಟ್ಟು, ಮನೆಗೆ ವಾಪಸ್ ಬಂದು ನಿದ್ರೆಹೋದ.

ಚಿಕ್ಕಣ್ಣನಿಗೆ ಇದಾದ ಸ್ವಲ್ಪ ಹೊತ್ತಿನ ಮೇಲೆ ಎಚ್ಚರವಾಗಿ ಮೇಲೆ ನೋಡಿದ. ತಟ್ಟೆಯು ಕಾಣ-ಲಿಲ್ಲ. ರಂಗ ಮಲಗಿರುವ ಕಡೆ ನೋಡಿದ. ರಂಗ ಗೊರಕೆ ಹೊಡೆಯುತ್ತಾ ನಿದ್ರಿಸುತ್ತಿದ್ದ. ಚಿಕ್ಕಣ್ಣ ಮೊದಮೊದಲು ಗಾಬರಿ ಪಟ್ಟರೂ ಈ ಕೆಲಸ ರಂಗನಿಂದಲೇ ನಡೆದಿರಬೇಕೆಂದು ಬಗೆದ. ತನ್ನ ಮನೆಯಲ್ಲಿ ಎಲ್ಲೂ ತಟ್ಟೆ ಬಚ್ಚಿಟ್ಟಿಲ್ಲವೆಂದು ತನ್ನ ಕಳ್ಳತನದ ಅನುಭವದ ಮೇಲೆ ಯೋಚಿಸಿದ. ಬೇರೆ ಎಲ್ಲಿಯಾದರೂ ಬಚ್ಚಿಟ್ಟಿದ್ದಾನೆಯೆ ಎಂಬುದಕ್ಕೆ ಆ ಊರು ರಂಗನಿಗೆ ಹೊಸ ಸ್ಥಳವಾಗಿತ್ತು. ಎಷ್ಟು ಯೋಚಿಸಿದರೂ ಇದು ಚಿಕ್ಕಣ್ಣನ ಅನುಭವಕ್ಕೆ ನಿಲುಕದುದಾಗಿತ್ತು. ಕೊನೆಗೆ ರಂಗನ ಸಮೀಪಕ್ಕೆ

ಬಂದು ಪರೀಕ್ಷಿಸಲಾಗಿ, ಆತನ ಪಂಚೆಯು ಒಂದು ಕಡೆ ಒದ್ದೆಯಾಗಿತ್ತು. 'ತಟ್ಟೆಯನ್ನು ಹೊಳೆಯಲ್ಲಿ ಬಚ್ಚಿಟ್ಟಿರಬೇಕು' ಎಂದು ಯೋಚಿಸಿದ. ಆದರೆ ಎಲ್ಲಿ ಯಾವ ಕಡೆ ಇಟ್ಟಿದ್ದಾನೆಂಬುದು ತಿಳಿಯಲಿಲ್ಲ. ಕೊನೆಗೆ ಕಾಲಿನಿಂದ ತಲೆಯವರೆಗೂ ರಂಗನ ಶರೀರವನ್ನು ಮುಟ್ಟಿಕೊಂಡು ಬಂದ. ನಡುವಿನ ತನಕ ದೇಹ ಹೆಚ್ಚು ತಣ್ಣಗಿದ್ದುದು ಕಂಡುಬಂತು. ಅದರ ಮರ್ಮವೆಲ್ಲಾ ಚಿಕ್ಕಣ್ಣನಿಗೆ ಮನದಟ್ಟಾಯಿತು. ತತ್‌ಕ್ಷಣ ಹೊಳೆಗೆ ಹೋಗಿ ನಡುವಿನ ಉದ್ದದ ನೀರಿನಲ್ಲಿ ಕೆಸರನ್ನು ಕೆದಕಿದಾಗ ಬೆಳ್ಳಿ ತಟ್ಟೆಯು ಪತ್ತೆಯಾಯಿತು. ತಟ್ಟೆಯನ್ನು ಮನೆಗೆ ತಂದು ಪೆಟ್ಟಿಗೆಯಲ್ಲಿಟ್ಟು ಪುನಃ ನಿದ್ರಿಸಿದ.

ಬೆಳಗ್ಗೆ ಎಲ್ಲರೂ ಏಳುವುದಕ್ಕೆ ಮೊದಲೇ ರಂಗ ಹೊಳೆಯ ಕಡೆ ಹೊರಟು, ತನ್ನ ಎಲ್ಲಾ ಕೆಲಸ ಕಾರ್ಯಗಳನ್ನು ತೀರಿಸಿಕೊಂಡು ವಾಪಸ್ಸು ಮನೆಗೆ ಬಂದ. ರಂಗ ಒಳಕ್ಕೆ ಬಂದ ಮೇಲೆ ತಿಂಡಿಗೆ ಆಹ್ವಾನಿಸಿದರು. ತನ್ನ ಮುಂದೆ ಇಟ್ಟಿದ್ದ ಬೆಳ್ಳಿ ತಟ್ಟೆಯನ್ನು ನೋಡಿ ರಂಗ ತನ್ನ ಕಣ್ಣನ್ನು ತಾನೇ ನಂಬದಾದ. ಮುಖ ಬೆಳ್ಳಗಾಯಿತು. ಆದರೆ ಇದಾವುದನ್ನು ಹೊರಕ್ಕೆ ತೋರದೆ ತಿಂಡಿ ತಿಂದು ಮುಗಿಸಿದ. ಚಿಕ್ಕಣ್ಣನಿಗೆ ರಂಗನ ಸ್ಥಿತಿ ನೋಡಿ ನಗು ಬಂತು. ಆದರೆ ನಗದೆ, ಹೊಳೆಗೆ ಹೋಗಿ ತಟ್ಟೆ ತಂದ ವಿಚಾರವನ್ನು ಕೂಲಂಕಷವಾಗಿ ರಂಗನಿಗೆ ತಿಳಿಸಿದ. ರಂಗ ತಟ್ಟೆ ಕದಿಯಲು ತಾನು ಮಾಡಿದ ಉಪಾಯವನ್ನು ತಿಳಿಸಿದ. ಚಿಕ್ಕಣ್ಣ ಭಾವೀ ಅಳಿಯನ ಚಾಕಚಕ್ಯತೆಗೆ ಮೆಚ್ಚಿ, ರಂಗನೇ ತನ್ನ ಮಗಳಿಗೆ ಅನುರೂಪನಾದ ವರ ಎಂದು ಬಗೆದು ತನ್ನ ಮಗಳನ್ನು ರಂಗನಿಗೆ ಮದುವೆಮಾಡಿ, ಬೆಳ್ಳಿ ತಟ್ಟೆಯನ್ನು ಉಡುಗೊರೆಯಾಗಿ ಅವರಿಗೆ ಕೊಟ್ಟನು.

-ಪಿ. ಜಿ. ಚಿಕ್ಕವೀರೇಗೌಡ.

[ಇದು ನಾಗಮಂಗಲದ ಕಡೆ ಕೇಳಿದ್ದು.]

ಜಗದ ಅಶ್ವತ್ಥ

ತಲೆಯ ಮೇಗಡೆ ಬೇರು, ಕೆಳಗೆ ಕೊಂಬೆಲೆ ಚಿಗುರು
ಬಿಳಲೂರೆಗಳ ಲೆಕ್ಕಕಿಲ್ಲ ಮೊದಲು ಕೊನೆ
ಬೆಳೆವುದೀಪರಿಯರಳಿಮರದಂತೆ ನರಕೋಟಿ

ನಲಿವನದರಲಿ ಬೊಮ್ಮ- ಮಂಕುತಿಮ್ಮ

ಒಂದು ಕೊಂಬೆಯು ಬಾಡಲಿನ್ನೊಂದು ಚಿಗುರುವುದು
ಸಂದಿಹುದು ಚಿರನವತೆಯಶ್ವತ್ಥಮರಕೆ
ಎಂದೆಂದುಮಂತಿರುವುದೀ ವಿಶ್ವವೃಕ್ಷವದ-
ರೊಂದು ರಂಬೆಯೊ ನೀನು- ಮಂಕುತಿಮ್ಮ

ಅಂದಂದಿಗಾದನಿತು ಬುಡಕಟ್ಟಿ ಕಳೆ ತೆಗೆದು
ಚೆಂದಳಿರು ದಿನದಿನಮುಮೊಗೆಯೆ ನೀರೆರೆದು
ಸಂದ ಬಲದಿಂದ ಜಗದಶ್ವತ್ಥ ಸೇವೆಯಲಿ
ನಿಂದಿರುವುದಲೆ ಧರ್ಮ- ಮಂಕುತಿಮ್ಮ

ಬೀರಣ್ಣ

ನಮ್ಮೂರಿನಲ್ಲಿ ಎರಡು ವರ್ಷಗಳಿಂದಲೂ ಕ್ಷಾಮ. ಮಳೆಗಾಲದಲ್ಲಿ ಬೇಸಾಯಗಾರರನ್ನು ನಗಿಸಿ, ಬೇಸಗೆಯಲ್ಲಿ ಪ್ರಯಾಣಿಕರನ್ನು ಸಂತೈಸುವ ಚಿತ್ರಾವತಿ ನದಿಯ ಅಂಗಳ ಈಗ ಬಿಸಿಲಿಗೆ ಬಿರುಕುಬಿಟ್ಟಿದೆ. ನಾಲ್ಕಾರು ಮೈಲಿ ಹರಡಿಕೊಂಡಿರುವ ಹಸುರು ಹತ್ತಾರು ಹಳ್ಳಿಗಳ ದನಕರುಗಳನ್ನು ರಕ್ಷಿಸುತ್ತಿತ್ತು. ಸೂರ್ಯನು ನಡುನೆತ್ತಿಯವರೆಗೆ ಬರುವ ತನಕ ಮೇದು, ತೊರೆಯ ತಂಪಾದ ನೀರನ್ನು ಕುಡಿದು, ನೇರಳೆ ತೋಪಿನ ವಿಸ್ತಾರವಾದ ನೆರಳಿನಲ್ಲಿ ಮೆಲಕು ಹಾಕುತ್ತಿದ್ದ ಆಕಳು ಇಂದು ಮೂಳೆಚಕ್ಕಳಗಳಾಗಿ, ಬಿದ್ದ ಕಡೆಯಿಂದ ಏಳಲಾರದೆ, ಬಿಸಿಲಿನ ಬೇಗೆಗೆ ಜೊಲ್ಲು ಸುರಿಸುತ್ತ ಬಿದ್ದಿರುವುವು. ಕೆಲವು ಒಂದರ ಪಕ್ಕದಲ್ಲೊಂದು ಮಲಗಿದ್ದವು ಜೊತೆಯಲ್ಲೇ ಅಂತಕನಪುರವನ್ನು ಸೇರಿದ್ದುವು. ಬಿಡಿಯಾಗಿಯೂ ಕೆಲವು ಶವಗಳಾಗಿದ್ದುವು. ಕುಪ್ಪಳಿಸಲಾರದೆ ತೊಳಲಾಡುತ್ತಾ ಸುತ್ತಲೂ ಓಲಾಡುತ್ತಾ ಸತ್ತ ತಾಯಿಯನ್ನು ನೆಕ್ಕುತ್ತಿರುವ ಕರುಗಳನ್ನು ನೋಡಿದರೆ ಎಂಥ ಕಲ್ಲೆದೆಯವನಿಗೂ ಹೃದಯ ಕರಗಿ ನೀರಾಗುತ್ತಿತ್ತು. ಪ್ರಕೃತಿ ಸೌಂದರ್ಯವು ಸ್ವಶಾನ ಸದೃಶವಾಗಿತ್ತು. ಜನರ ಹಾಹಾಕಾರ ಹೇಳತೀರದು. ಗೆಲುವಿಗೆ ಬದಲು ಅಂಧಕಾರ, ಸೊಕ್ಕಿಗೆ ಬದಲು ಸುಕ್ಕು ಅವರ ಮುಖದ ಚಿಹ್ನೆಗಳಾಗಿದ್ದುವು.

ಹೀಗೆ ವರ್ಣಿಸಿದರೇ ದುಃಖವಾಗುವ ಪ್ರಕೃತಿಯಲ್ಲಿ ನನಗೆ ಆಚೆ ಹೋಗಲೇ ಮನಸ್ಸಾಗುತ್ತಿರಲಿಲ್ಲ. ಜನರ ಗೋಳಾದ ಬಾಳನ್ನು, ಕಳೆಯಿಲ್ಲದ ಹೊರವಲಯವನ್ನು ನೋಡುವುದಕ್ಕಿಂತ ನನ್ನ ಕೋಣೆಯೇ ನನಗೆ ಒಪ್ಪಿತ್ತು.

ಒಂದು ದಿನ ಬಹಳ ಬೇಜಾರಾಯಿತು. ಹತ್ತಿರವಿದ್ದ ಪುಸ್ತಕಗಳನ್ನು ತಿರುವಿಹಾಕಿಯಾಗಿತ್ತು. ಬೇರೆ ಪುಸ್ತಕ ಸಿಕ್ಕುವುದು ದುರ್ಲಭ, ಮಲಗಲು ಮನಸ್ಸಾಗದು. ಕೂತಿರಲು ಬೇಜಾರು. ಹೀಗಿದ್ದಾಗ ನನ್ನ ತಮ್ಮ ಬಂದ. ಅವನಿಗೆ ಕಥೆ ಕೇಳುವುದೆಂದರೆ ಬಹಳ ಆಸೆ. ನನ್ನನ್ನು ಕೇಳಿದ. ಹೂಬತ್ತಿ ಹೊಸೆಯುತ್ತಿದ್ದ ಅಜ್ಜಿಯನ್ನು ತೋರಿಸಿದೆ. ಅಜ್ಜಿಯನ್ನು ಕಥೆ ಹೇಳಲೊಪ್ಪಿಸುವುದಕ್ಕೆ ನನ್ನ ತಮ್ಮನಿಗೆ ಪ್ರಯಾಸವೇ ಆಯಿತು. ಅಂತೂ ಒಪ್ಪಿದಳು. ಎಲ್ಲರ ಜೊತೆಗೆ ನಾನೂ ಕಿವಿಯಗಲಿಸಿ ಕೇಳತೊಡಗಿದೆ.

"ಏನ್ಹೇಳ್ಲೋ ಮಗೂ?" ಅಜ್ಜಿ ಕೇಳಿದಳು.

"ಏನಾದ್ರೂ ಹೇಳಜ್ಜಿ, ಕಾಗೆ ಗುಬ್ಬಚ್ಚಿ ಕಥೆ ಬೇಡ. ಇನ್ಯಾವದಾದ್ರೂ ಹೇಳು" ಎಂದ ನನ್ನ ತಮ್ಮ.

"ಯಾವ್ದೂ ಜ್ಞಾಪಕಕ್ಕೆ ಬರೊಲ್ವೇ, ಏನ್ಮಾಡೋದು?"

"ಜ್ಞಾಪಿಸ್ಕೋ ಅಜ್ಜಿ."

"ಆ! ಆ ಮೇಲ್ಗಡೆ ಬೀದೀಲಿ ಕೊನೇ ಮನೆ..."

"ಮನೆಯೆಲ್ಲಿದೆ ಅಜ್ಜಿ? ಎಲ್ಲಾ ಹಾಳುಗೋಡೆ. ಬಿದ್ದು ಹೋಗಿರೋದು..."

"ಅದೇ, ಅದೇ... ಆ ಮನೇಲಿ ಬೀರ ಅಂತ ಒಬ್ಬನಿದ್ನಂತೆ..."

"ಯಾವಾಗಜ್ಜೀ... ಊ... ಇದ್ದಾ ಅಂತ ಇಟ್ಕೊಳ್ಳೋಣ."

"ಅಲ್ಲಾ ಮಗೂ, ನಿಜವಾಗ಼್ೂ ಇದ್ನಂತಪ್ಪ. ನನ್ನ ಮಾವ್ನೋರ್ಹತ್ರ ಭೂಮೀನ ಗೇಣಿಗ್ಮಾಡ್ತಿದ್ನಂತೆ. ನಾನೀ ಮನೇಗ್ಬರೋ ಹೊತ್ಗೆ ಅವನೇ ಹೋಗ್ಬಿಟ್ಟಿದ್ದಾನ್ನು."

"ಊ... ಆಮೇಲೆ?"

"ಅವನು ವಿಪ್ರೀತ ಬಡವ್ನಂತೆ. ಮದ್ವ್ಯಾದ ಹೊಸ್ದು. ಹೊಲಾ ಗೇಯ್ತಿದ್ದಾಗ ಜನಕಮಹಾರಾಜ-ಶ್ರೀರಾಮಚಂದ್ರಮೂರ್ತಿಗೆ ಮಾವನಾದೋನು- ಅವನಿಗೆ ನೆಲ್ದಲ್ಲಿ ಸೀತಾ ಮಹಾತಾಯಿ ಸಿಕ್ಕಿದ್ದು ನೆನಸ್ಕೊಂಡ್ನಂತೆ. ಇವ್ನಿಗೂ ಅನ್ನಿಸ್ತಂತೆ... ಏನೂ ಅಂತ?" ಎಂದು ಪ್ರಶ್ನೆ ಹಾಕಿದಳು.

"ಇನ್ನೇನು? ಒಂದ್ಮಗೂ ಸಿಕ್ಲೀ ಅಂತ ಇರಬಹುದು" ಅಂದೆ ನಾನು.

"ಅವ್ರಿಗೆ ಮಕ್ಕಳ್ಗೇನು ಬರ? ಅದ್ರಲ್ಲೂ ಅವೆಲ್ಲಾ ಮಕ್ಕಳ್ಗೆ ದೇವರ್ನ ಕೇಳೊಲ್ಲ, ಅಣ್ಣಾ, ಮಕ್ಳಾಗುಲ್ಲ ಅಂದ್ರೆ ಬೇರೆ ಮದ್ವೆ ಮಾಡ್ಕೊಳ್ತಾರೆ ಅಷ್ಟೆ. ಹಣ ಇರ್ಬೋದಜ್ಜೀ."

"ನೀನ್ಹಾಣ. ಅವ್ನು ಆಗ಼್ೇ ನೇಗ಼್ು ನಿಲ್ಸಿ ಊರ ಮುಂದಿನ ಹನ್ಮಂತ ರಾಯ್ನಿಗೆ ಹರಕೆ ಹೊತ್ಕೊಂಡ್ನಂತೆ. 'ನನ್ನೊಡ್ಯಾ ಮಾಸ್ವಾಮಿ, ಹೀಗೇ ಉಳ್ತಿದ್ದಾಗ ಒಂದು ಕೊಪ್ಪರ್ಗೆ ನಾಣ್ಯ ಸಿಕ್ಬುಟ್ರೆ ನಿನ್ನ ಪಾದ-

ಕ್ಕೊಂದು ಕಾಯೊಡಸ್ತೀನಿ. ನಮ್ಮಪ್ಪ- ತಲೇ ಮೇಲಿರೋ ಸೂರ್ನಾರಾಯಣನೇ ಸಾಕ್ಷಿ. ನೊಗ ವೊತ್ತಿರೋ ನನ್ನಬಸವ್ನೇ ಸಾಕ್ಷಿ' ಅಂತ ಹೇಳಿ, ಸೂರ್ಯದೇವನ್ಗೆ ಮುಗಿದು, ಎದೆ ಮೇಲೆ ಕೈಯಿಟ್ಟು, ಕಣ್ಮುಚ್ಚಿ... ಕಣ್ಬಿಟ್ಟು ನೋಡಿದ್ರೆ- ಹೆಂಡ್ತಿ-ಹೊಸ್ಹೆಂಡ್ತಿ ಬುತ್ತಿ ತಂದಿದ್ಲಂತೆ. 'ಏನು ಅದು, ಅರ್ಕೆ ಆಕ್ತಿದ್ರಲ್ಲಾ?' ಅಂತ ಕೇಳಿದ್ದಕ್ಕೆ- ಇದ್ದ ವಿಷ್ಯ ಎಲ್ಲಾ ಹೇಳಿದ್ನಂತೆ. 'ನೋಡು- ಸಿಕ್ಬುಟ್ರೆ- ಅಯ್ನೋರ ಬೂಮೀ ಬಿಟ್ಬಿಡೋಣ. ಅನ್ಮಂತ್ರಾಯ ನಮ್ಮ ಕಾಯೋನಿಗೆ ಒಂದ್ಕಾಯಿ ಒಡೆಸ್ಬಿಡೋಣ. ಆಮೇಲೆ ಒಂದ್ಗದ್ದೆ, ಒಂದೊಲ, ಊರ್ಮುಂದಿನ ತೋಟ ಸ್ವಂತೀಕೆ ತಕ್ಕೊಂಡು... ನಿನ್ಗೆ ಒಂದ್ಕಾಸಿನ್ಸರ... ಚೈನೂ ಮಾಡಿಸ್ತೇನೆ. ಆಗ ನಾನು ಗೌಡ... ನೀನು ಗೌಡಿತಿ' ಅಂತ ಹೇಳಿ 'ಕಂದಾನ ಕಾಯೋ ಅನುಮಂತರಾಯಾ' ಅಂತ ಹಾಡಿದ್ನಂತೆ."

"ಆಮೇಲೆ ಸಿಕ್ಕಾ ಅಜ್ಜಿ ಹಣ?" 'ಇಲ್ಲ' ಎಂಬ ಉತ್ತರವನ್ನಾಶಿಸಿ ಕೇಳಿದೆ.

"ಕೇಳು ಮಗೂ, ಅವನ್ಗೆ ರಾತ್ರಿ ಕನ್ಸೂ ಆಯ್ತಂತೆ, ದೇವ್ರೇ ಬಂದು 'ಮೆಚ್ಚಿದ್ನೋ ನನ್ ಮಗ್ನೇ, ನಿನ್ಬಕ್ತೀಗೆ. ವರಾ ಕೊಟ್ಟಿವ್ನಿ' ಅಂತ ಹೇಳಿ ಮಾಯ್ವಾಗಿ ಹೋದ್ನಂತೆ. ನೋಡ್ಮಗೂ, ಅವನ್ಗೆ ದೇವ್ರು ಅಂದ್ರೆ ಬಹಳ ಭಕ್ತಿ ಅಂತೆ. ಒಳ್ಳೇವ್ನೂ ಆಗಿದ್ನಂತೆ, ಯಾರ್ಗಾದ್ರೂ ಕಷ್ಟ ಬಂದ್ರೆ ಕೈಕಟ್ಕೊಂಡು ಸಹಾಯ ಮಾಡೋವ್ನಂತೆ, ಸತ್ಯವಂತ ಅಂತ ಅನ್ಸ್ಕೊಂಡಿದ್ನಂತೆ. ಆದ್ರೆ ಜಿಪುಣಾ ಅಂದ್ರೆ ಜಿಪುಣ. ಊಟ ಮಾಡಿದ ಕೈಲಿ ಕಾಗೆ ಕೂಡ ಓಡಿಸ್ತಾ ಇರ್ಲಿಲ್ಲವಂತೆ ನೋಡು, ಆ ಜಿಪುಣಾಗ್ರೇಸರ ಚಕ್ರವರ್ತಿ."

"ಅಂತೂ ಒಂದ್ಕೆಟ್ಗುಣ ಇದ್ದೇ ಇರ್ಬೇಕು. ಊ... ಮುಂದೆ?"

"ವಿಪರೀತ ಬಲಶಾಲಿಯಂತೆ. ಒಂದು ಸಲ ತೊರೆ ಹೆಚ್ಚಿ ಬಂದು ದಾಟಕ್ಕಾಗ್ತಿರ್ಲಿಲ್ವಂತೆ. ನಿಮ್ತಾತ- ಆಗ್ಗೆ ಅವರ್ಗೆ ೧೮ ವರ್ಷ ಅಂತೆ- ಅವರ್ನೂ ಎತ್ಕೊಂಡು ಇಳ್ದೇಬಿಟ್ನಂತೆ- ನಡವುದ್ದ ನೀರ್ನಲ್ಲಿ. ಎಲ್ಲೂ ಬಾಯಲ್ಲಿ ಅಕ್ಕಿ ಕಾಳ್ಹಾಕ್ಕೊಂಡ್ನೋಡ್ತಾ ಇದ್ರಂತೆ. ನಮ್ಮಾವ್ನೋರು ಕೂಕ್ಕೊಳ್ತಾ ಇದ್ರಂತೆ. ಸೇರೇ ಬಿಟ್ನಂತೆ ಆಚೆ ದಡಾನ. ತಿರುಗಿ ಬಂದು ಮಾವ್ನೋರ್ನೆ ಎತ್ಕೊಳ್ಳೋಕ್ಕೆ ಹೋದ್ನಂತೆ. ಅವರ್ಬೇಡ ಅಂದ್ರೂ ಬಿಟ್ರೆ ತಾನೇ...?"

"ಅಜ್ಜೀ, ನಮ್ತಾತ ಹೇಗಿದ್ದಾ ಅಜ್ಜೀ?" ನನ್ನ ತಮ್ಮ ಕೇಳಿದ.

"ಹುಡ್ಗಾಟ ನಿನ್ಗೆ... ಕಥೆ ಬೇಡಾ ಅಂದ್ರೆ ಹೇಳ್ತೀನಪ್ಪಾ."

"ಕಥೇನೇ ಹೇಳಜ್ಜೀ."

"ಆಮೇಲೆ... ಏನ್ಹೇಳ್ತಿದ್ದೆ?" ಪಾಪ! ಅಜ್ಜಿಗೆ ತಾತನ ನೆನಪಾಯ್ತೋ ಏನೋ!

"ಎತ್ತುಗ್ಳು ಅಂದ್ರೆ ಪ್ರಾಣಾನೇ ಕೊಡ್ತಿದ್ನಂತೆ. ಗಂಟೆ ಶಬ್ದ ಕೇಳಿದ ತಕ್ಷಣ ಎಲ್ಲಿಗೂ 'ಬೀರಪ್ಪನೆ-ತ್ತುಗ್ಳು ಬಂದ್ವು' ಅಂತ ಗೊತ್ತಾಗ್ಬಿಡ್ತಿತ್ತಂತೆ. ಗೆಜ್ಜೆಮಣಿಗಳ ಪಟ್ಟಿ ಕೊರಳ್ಗೆ, ಕೊಂಬಿಗೆ ಚಿನ್ನದ ಹಾಗೆ ಹೊಳ್ಯೋ ಕುಪ್ಪಿಗ್ಳು. ಅವನ್ನ ಮೇಯಿಸ್ತಿದ್ದದ್ದೂ ಹಾಗೇ ಅಂತೆ. ಎತ್ತಿನ ಮೈಮೇಲೆ ನೊಣ ಕೂತ್ರೆ ಜಾರಿ ಕೆಳ್ಗೆ ಬೀಳ್ತಿದ್ವಂತೆ. ಅಷ್ಟು ಚೆನ್ನಾಗಿ ಮೇಯಿಸ್ತಿದ್ದದ್ದಕ್ಕೆ ನಂದೀ ಜಾತ್ರೆಲೊಂದ್ಸಲ ಬಹುಮಾನ ಕೂಡ ಬಂದಿತ್ತಂತೆ."

"ಅಜ್ಜೀ, ಹಣಾ ಸಿಕ್ತೋ ಇಲ್ವೋ ಅವನ್ಗೆ?" ತಡೆಯಲಾರದೆ ಕೇಳಿದೆ.

"ಹೇಳ್ತೇನೆ ಮಗೂ... ಹೇಳ್ತೇನೆ. ಮಾರನೇ ದಿನವೇ ಹೊಲ ಉಳೋಕ್ಹೋದ್ನಂತೆ. ಒಂದ್ಸಾಲು ಉತ್ತಾಕಿದ್ನಂತೆ. ಒಂದ್ಮೂಲೇಲಿ ತಿರುಗಿಸೊಕ್ಹೋದ್ರೆ ಎತ್ತು ಎಳೀಲಾರ್ದೆ ಹೋಯ್ತಂತೆ. ಏನೂ ಅಂತ ನೋಡಿದ್ರೆ..."

"ಹಣ!"

"ಅಲ್ಲ ಮಗೂ, ದೊಡ್ಡ ಕಲ್ಲು." ಎಲ್ಲರೂ ನಕ್ಕೆವು. ಕಥೆ ಮುಂದುವರಿಯಿತು. "ಹಾಗೇ ಕೋ-ಲ್ನಿಂದ ಕಲ್ಲನ್ಕಿತ್ತಾಕಿದ್ನಂತೆ. ಕೆಳಗೆ ಒಂದ್ಪೆಟ್ಗೆ ಇತ್ತಂತೆ. ಬೀರಣ್ಣನಿಗೆ ಭಾರಿ ಸಂತೋಷ ಆಯ್ತಂತೆ. ತೆ-ಗೆದ್ನಂತೆ. ಬೀಗ ಇದ್ದಿಲ್ಲವಂತೆ. ಬರೀ ನಾಣ್ಯಗ್ಳು. ಎತ್ತನ್ನ ಅಲ್ಲೇ ಮೇಯೋಕ್ಬಿಟ್ಟು ಓಡಿದ್ನಂತೆ ಮನೇಗೆ. 'ಏನ್ಮಾಡೋದು?' ಅಂತ ಹೆಂಡ್ತೀನ ಕೇಳಿದ್ನಂತೆ. "ಅಯ್ನೋರ್ತಾವ ಮಡ್ಗಿರೋಣ, ನಮ್ಗುಡಿಸಲಾಗೇ ಇದ್ರೆ ಯಾರಾದ್ರೂ ಎತ್ತಾಕ್ಬಿಡ್ತಾರೆ' ಅಂತ ಹೇಳಿದ್ಳಂತೆ. 'ಎಲ್ಲೂ ಬೇಡ. ಅಯ್ನೋರ್ದೇ ಒಲ. ಅವ್ರೀಗೆ ತೋರ್ಸಿದ್ರೆ ನಮ್ಮೊಲ್ದಾಗಿಂದು ನಮ್ದೇ ಅಂತಾರೆ ಅವ್ರು. ಒಬ್ಬರ್ಗೂ ತಿಳೀಬಾರ್ದು ಈ ವಿಷ್ಯ. ಬಾಯ್ಬಿಟ್ಟೀ-ಯಾ ಜೋಕೆ. ತತ್ತಾ ಆರೇನ' ಅಂತ ಹೇಳಿ, ಒಂದ್ಗುಂಡಿ ತೋಡಿ, ಅದರಲ್ಹಾಕಿ ಹೂತಿಟ್ನಂತೆ. ಮೇಲೆ ಸಗಣಿ ಸಾರಿಸ್ಬಿಟ್ರಂತೆ."

"ದೇವ್ರನ್ನ ಮರೆತುಹೋಗ್ಬಿಟ್ನಾ? ಕಾಯಿ ಒಡೆಸ್ಲಿಲ್ವಾ?"

"ಕೇಳ್ಮಗೂ. ಆಮೇಲ್ನಮ್ಮಾವ್ನೋರ್ವತ್ರ ಬಂದು, ಒಂದಾಣೆ ಕೇಳಿದ್ನಂತೆ. -ಸಾಲ. ಅವ್ರು ಯಾತಕ್ಕೇ ಅಂತ ಕೊಟ್ರಂತೆ. ತಕ್ಕೊಂಡು ಸಂತೇಗ್ಹೋದ್ನಂತೆ, ಕಾಯಿ ತರೋಕೆ. ಅಲ್ಲಿ ಆಣೇಗೊಂದ್ಕಾಯಿ ಮಾರ್ತಿದ್ರಂತೆ. ಅವನು 'ಸಂತೇಲಿ ಒಂದಾಣೆ; ಪೇಟೇಗೋದ್ರೆ ಇನ್ನೂ ಕಮ್ಮಿ ಸಿಕ್ಬಹುದು' ಅಂತ ಯೋಚ್ನೆ ಮಾಡಿ ಪೇಟೆಗೇ ಹೋದ್ನಂತೆ. ಅಲ್ಲಿ ಒಂಬತ್ಕಾಸ್ಗೊಂದು ಕೊಡ್ತಿದ್ರಂತೆ. ಬೆಂಗಳೂರಲ್ಲಿ ಧಾರಣೆ ಕಡಮೆ ಆಗಿದೆ ಅಂತ ಯಾರೊ ಹೇಳಿದ್ರಂತೆ. ಅಲ್ಲೇ ಹೋಗೋಣಾ ಅಂತ ಹೊರ್ಟು ಬೆಂಗಳೂರನ್ನು ಸೇರಿದ್ನಂತೆ. ಅಲ್ಲಿ ಇಲ್ಲಿ ತಿರ್ಗಿನೋಡೋ ಹೊತ್ಗೆ ಆರ್ಕಾಸಿಗೊಂದ್ಕಾಯಿ ಕೊಡ್ತಿದ್ದ ಅಂಗಡಿಗೆ ಬಂದ್ನಂತೆ. 'ಹೆಂಗಯ್ಯಾ ಕಾಯಿ?' ಅಂದ್ರಂತೆ. 'ನೋಡಯ್ಯ, ತಿಪ್ಟೂರ್ ಕಾಯಿ ಇವೊತ್ತು ತಾನೇ ಬಂದಿದೆ. ಬಹಳ ಚೆನ್ನಾಗಿದೆ. ಆರ್ಕಾಸ್ಗೊಂದು' ಅಂದ್ನಂತೆ. 'ಮೂರ್ಕಾಸ್ಗೊಂದು ಕೊಡ್ತೀಯಾ?' ಅಂತ ಇವ್ನು ಕೇಳಿದ್ನಂತೆ. 'ತಿಪಟೂರಿಗ್ಹೋಗಯ್ಯ, ಕೊಡ್ತಾರೆ. ಯಾವೂರ್ನಿಂದೂ?' ಅಂತ ಅಂದ್ನಂತೆ. ಅಲ್ಲಿಂದಲೇ ದಾರಿ ಕೇಳ್ಕೊಂಡು ತಿಪಟೂರ್ಗೇ ಹೊರಟ್ನಂತೆ. ಸೇರಿದ್ದೂ ಆಯಿತು. ಪೇಟೆಗ್ಹೋಗಿ ಕೇಳಿದ. ಮೂರ್ಕಾಸ್ಗೊಂದು ತೆಂಗಿನ್ಕಾಯಿ ರಾಶಿರಾಶಿ ಸುರಿದಿದ್ರಂತೆ. ಆಗ ಅವ್ನಿಗೊಂದು ಯೋಚ್ನೆ ಬಂತಂತೆ. 'ಇಷ್ಟು ಕಾಯ್ಬೆಳ್ಯೋ ಪುಣ್ಯಾತ್ಮರು ಒಂದ್ಕಾಯಿ ಕೇಳಿದ್ರೆ ಕೊಡ್ದೆ ಹೋಗ್ತಾರೆಯೆ? ಯಾರಾದ್ರೂ ಒಂದ್ಕಾಯಿ ಕೊಟ್ರೆ ಸಾಕು- ಅಯ್ಯೋರ ಸಾಲ ಅವರ್ಗೇ ವಾಪಸುಕೊಟ್ಟು, ದೇವ್ರಸೇವೇನೂ ತೀರಿಸ್ಬಿಡ್ಬಹುದು' ಅಂದ್ಕೊಂಡು ಪೇಟೇ ಬಿಟ್ಟು, ಒಂದು ತೋಟ ಹುಡಿಕ್ಕೊಂಡು ಹೋದ್ನಂತೆ. ತೋಟದಲ್ಲಿ ಮರಗ್ಳು ಕಾಯ್ತುಂಬಿ ಜೋಲಾಡ್ತಾ ಇದ್ದವಂತೆ. ಹೋಗಿ ತೋಟದೋನ್ಕೇಳಿದ್ರೆ- ಪಾಪ! ಅವ್ನೂ ಒಳ್ಳೇವ್ನಂತೆ- 'ಒಂದು ಕಿತ್ಗೋ ಹೋಗಯ್ಯಾ- ಮರ ಹತ್ತೋರಿಲ್ಲ' ಎಂದ್ನಂತೆ. ಬೀರಣ್ಣಮೊದ್ಲೇ ಬಲಶಾಲಿ, ಹತ್ತೇ ಬಿಟ್ಟ ಒಳ್ಳೆದೊಂದು ಮರಾನ. ಮರ್ದಲ್ಲಿದ್ದ ಕಾಯ್ನೋಡ್ತಿದ್ದ ಹಾಗೇ ನೀರೂರ್ತಿತ್ತಂತೆ- ಅವ್ನ ಬಾಯಲ್ಲಿ. ಮರಾನೂ ಹತ್ತಿದ. ಅಷ್ಟೊಂದು ಕಾಯಿ ನೋಡಿದ್ಮೇಲೆ ಅವ್ನಿಗಿನ್ನೊಂದು ಯೋಚ್ನೆ ಹುಟ್ತಂತೆ: 'ಈ ಕಾಯ್ನೆಲ್ಲಾ ತೆಕ್ಕೊಂಡು, ಅವ್ನು ನೋಡ್ದೇ ಇದ್ದಾಗೆ ಹೊರಟ್ಹೋಗ್ಬಿಟ್ರೆ- ಈ ಹೊಟ್ನಿಂದ ಬಸವನ್ಗೆ ಹಗ್ಗ ಹೊಸೀಬಹ್ದು. ಅದ್ರ ದುಡ್ಡೂ ಉಳೀತದೆ. ಈ ಕಾಯ್ನೆಲ್ಲಾ ಮಾರ್ಬಿಟ್ರೆ -ಇಷ್ಟು ಹಣಾನೂ ಬರುತ್ತೆ. ಈಗಿರೋ ಹಣಕ್ಕೆ ಇನ್ನಿಷ್ಟು ಹಣ ಸೇರಿದ್ರೆ ಇಷ್ಟು ಹಣ ಆಗುತ್ತೆ' ಅಂತ ಕೈನಲ್ಲಿ ಅಷ್ಟು ಹಣ ಅಂತ ನೋಡಿಕೊಳ್ಳೋಕ್ಹೋಗಿ ಕೈಬಿಟ್ನಂತೆ, ಕೆಳಗೆ ಬಿದ್ನಂತೆ." ಎನ್ನುವಾಗ ಅಜ್ಜಿಯ ಕೈಗಳು ಪ್ರಮಾಣವನ್ನು ಸೂಚಿಸುವಂತೆ ಹಿಗ್ಗುತ್ತಿದ್ದುವು. ನಮ್ಮ ಬಾಯಿಗಳೂ ಹಿಗ್ಗಿದುವು.

"ಆಮೇಲೆ...?" ಎಂದ ನನ್ನ ತಮ್ಮ, ನಕ್ಕು ಮುಗಿಸಲಾರದೆ.

"ಆಮೇಲೆ ಕೆಳಗೆ ಬಿದ್ದ. ಯಮನ ಪಟ್ಣ ಸೇರಿದ... ಅದನ್ನು ಕೇಳಿ ಅವನ ಹೆಂಡ್ತಿ ಎದೆ ಎದೆ

ಹೊಡ್ಕೊಂಡು ಬಡ್ಕೊಂಡಳು. ನಡೆದ ವಿಷ್ಯ ಕೇಳಿ ಹಣದ ಪೆಟ್ಗೆ ಹೂತಿಟ್ಟ ಸ್ಥಳದಲ್ಲಿ ನೋಡಿದ್ರೆ... ದೇವರ ಮಾಯೆ ನೋಡು. ...ಅದೂ ಅಲ್ಲಿರ್ಲಿಲ್ಲವಂತೆ. ಅವ್ಳು ನಾನ್ಬಂದ್ಮೇಲೂ ಎಷ್ಟೋ ದಿನ ಬತ್ತ ಕುಟ್ಟೋದಕ್ಕೆ ಬರ್ತಿದ್ದಳು." ಎಂದು ಅಜ್ಜಿ ಕಥೆಯನ್ನು ಮುಗಿಸಿದಳು.

-ಬಿ. ಟಿ. ಅಶ್ವತ್ಥನಾರಾಯಣರಾವ್.

[ಇದರೊಳಗಿನ ಅಜ್ಜಿ ಕಥೆ ಚಿಕ್ಕಬಳ್ಳಾಪುರದ ಕಡೆಯದು.]

ದಿನದಿನದ ಗರಡಿ

ಎನಿತು ನೀಂ ಗೆಲಿದೆಯೆಂದೆನರು ಬಲ್ಲವರೆಂದು-
ಮೆನಿತು ನೀಂ ಪೋರ್ದೆಯೆನಿತು ಪೊತ್ತೆಯೆನುವರ್
ಗಣನೆ ಸಲುವುದು ತೋರ್ದ ಪೌರುಷಕೆ, ಜಯಕಲ್ಲ
ದಿನದಿನದ ಗರಡಿಯಿದು- ಮಂಕುತಿಮ್ಮ

ಜಟ್ಟಿ ಕಾಳಗದಿ ಗೆಲ್ಲದೊಡೆ ಗರಡಿಯ ಸಾಮು
ಪಟ್ಟು ವರಿಸೆಗಳೆಲ್ಲ ವಿಫಲವೆನ್ನುವೆಯೇಂ?
ಮುಟ್ಟಿ ನೋಡವನ ಮೈಕಟ್ಟು ಕಬ್ಬಿಣ ಗಟ್ಟಿ
ಗಟ್ಟಿತನ ಗರಡಿಫಲ- ಮಂಕುತಿಮ್ಮ

ಚಂದ್ರಕುಮಾರಿ

ಆದಿನ ಹಿಡಿದ ಮಳೆ ಬಿಟ್ಟಿರಲಿಲ್ಲ. ಹೊರಗೆ ಹೋಗುವಂತೆಯೆ ಇರಲಿಲ್ಲ. ಆದರೆ ಒಳಗೆ ಕುಳಿತು ಮಾಡುವುದೇನು? ಬಹಳ ಬೇಸರಕ್ಕಿಟ್ಟುಕೊಂಡಿತು. ಅಮ್ಮನ ಬಳಿ ಹೋಗಿ ಏನಾದರೂ ತಿನ್ನಲು ಕೊಡೆಂದು ಕಾಡತೊಡಗಿದೆವು. ಅಮ್ಮ ಎಲ್ಲರಿಗೂ ಚೂರು ಚೂರು ಬೆಲ್ಲ ಕೊಟ್ಟು, "ಅಜ್ಜಮ್ಮನ್ನ ಕತೆ ಏಳು ಅನ್ನಿ, ಓಗ್ರಿ" ಎಂದಳು. ಸಮಯ ಕಳೆಯಲು ಬಹಳ ಒಳ್ಳೆಯ ಉಪಾಯ ಹುಡುಕಿಕೊಟ್ಟ-ಳು ಅಮ್ಮ. ಅಜ್ಜಿ ಅಂಗಳದಲ್ಲಿ ಕುಳಿತು ಸೊಪ್ಪು ಸೋಸುತ್ತಿದ್ದಳು. ಆಕೆಯನ್ನು ನಾವೆಲ್ಲರೂ ಮುತ್ತಿ ಕಾಡತೊಡಗಿದೆವು. ಅಜ್ಜಿ ಸಿಟ್ಟಾಗಿ "ಓಗ್ರಾ, ನಿಮಿಗೆ ಕತೆ ಬ್ಯಾರೆ ದಂಡಕೆ" ಎಂದು ಗದರಿಸಿದಳು. ಆದರೆ ನಾವು ಬಿಟ್ಟೇವೆ ಘಟಿಂಗರು! ಒಂದೇ ಸಮನೆ ಕಾಡಿದೆವು. ಸ್ವಲ್ಪ ಹೊತ್ತಿನ ಮೇಲೆ ಆಕೆ ಒಪ್ಪಿ "ಹಂಗಾರೆ, ನಾ ಹೇಳ್ದಂಗ ಕೇಳೀರಾ? ಆತು, ನಡಿವಿ ಯಾರೂ ಬಾಯ್ಹಾಕದಂಗ ಸುಮ್ಮಗ ಕುಂತರಾ ನಾ ಹೇಳೋದು" ಎಂದಳು. ನಾವೆಲ್ಲ ಸಂತೋಷದಿಂದ ಒಪ್ಪಿ 'ಹೂಂ' ಎಂದೆವು.

ಅಜ್ಜಿ ಗಂಟಲು ಸರಿಮಾಡಿಕೊಂಡು, "ಹುಂ, ಮತ್ತೆ, ಬೆಂಗಳೂರಂತ ಒಂದು ದೊಡ್ಡ ಪಟ್ಣಂತೇ. ಅಲ್ಲಿ ಒಬ್ಬ ದೊರೆ, ಒಬ್ಬ ಪರದಾನಿ ಇದ್ರಂತೇ. ದೊರೀಗೆ ಸತ್ಯವಂತ, ದೇವಕೊಮಾರ ಅಂತ ಇಬ್ರು ಗಂಡುಮಕ್ಕಳುನೂವೇ, ಪರದಾನಿಗೆ ದುರ್ಬುದ್ದಿ ಅಂತಾ ಒಬ್ಬೇ ಒಬ್ಬ ಮಗನೂವೇ ಇದ್ರಂತೆ..."

"ದೊರೆ, ಪ್ರದಾನಿ ಎಸರು ಏನಜ್ಜಿ?" ತಮ್ಮ ಕೃಷ್ಣ ಬಾಯಿ ಹಾಕಿದ.

"ಹೋಗ್ಲಾ, ಹಂಗ ನಡುವಿ ಬಾಯಿ ಹಾಕಿದ್ರಂದ್ರ ನಾ ಹೇಳಾಕಿಲ್ಲಾ."

"ಇಲ್ಲಾ ಕಣಜ್ಜಿ. ಇನ್ನ ಬಾಯಿ ಬಿಟ್ರೆ ನಿನ್ನಾಣೆ" ಅಂದ್ರು ಎಲ್ಲರೂ.

"ಹೂಂ, ಸಂಪಿಗಿರಾಯನ ಪಟ್ಣಾ, ಸಂಪಿಗಿರಾಯನ ಪಟ್ಣಾ ಅಂತ ಇನ್ನೊಂದು ದೇಸ ಇತ್ತಂತೆ. ಅಲ್ಲಿಯ ರಾಜಗೆ ಮಕ್ಳೇ ಇರಲಿಲ್ಲಂತೆ. ಒಮ್ಮೆ ಯಾರೋ ಸನ್ಯಾಸಪ್ಪ 'ರಾತ್ರಿ ಒತ್ನಾಗೆ, ರಾಜ ರಾಣಿ ಇಬ್ಬರೂ ಓಗಿ ಈಸ್ವರಗೆ ಪೂಜೆ ಮಾಡಿದರೆ, ಅದ್ನೈದು ದಿನದಾಗೆ ದೇವರು ಪಲ ಕೊಡ್ತಾನೆ' ಅಂತ

ಏಳಿದ್ನಂತೆ. ಅದಕ್ಕೆ ಆ ರಾಜರಾಣಿ ಅಂಗೇ ಮಾಡಿದ್ರಂತೆ. ಒಂದೀಸ ದೇವರು ಪ್ರತ್ಯಕ್ಸಾಗಿ 'ರಾಜಾ, ನೀನು ಬಾಳಾ ದೊಡ್ಡ ಬಕ್ತ. ನಿಂಗೆ ಒಂದು ಯೆಣ್ಣು ಪಲ ಕೊಟ್ಟಿದೀನಿ, ಓಗಿ ಸುಕವಾಗಿ ಇರು' ಅಂತ ವರ ಕೊಟ್ನಂತೆ. ಅಂಗೇ ಅವರಿಗೆ ಒಂದು ಎಣ್ಣು ಕೂಸು ಉಟ್ಟಿತಂತೆ.

ಇತ್ಲಾಗೆ ಬೆಂಗಳೂರಿನಂತ ಪಟ್ಣ ಇತ್ತಲ್ಲ, -ಮಲ್ಲಿಗರಾಯನ ಪಟ್ಣ- ಅಲ್ಲಿ ರಾಜಕೊಮಾರರೂ ಮಂತ್ರಿಕೊಮಾರನೂ ಇದ್ಯಾಬುದ್ದಿ ಕಲ್ತು ಪ್ರಬುದ್ದಮಾನಕ್ಕೆ ಬಂದ್ರು. ಇಲ್ಲಿ ರಾಜಕೊಮಾರಿ ಶಂದ್ರಕೊಮಾರೀನೂವೇ ಓದು ಬರಾ ಎಲ್ಲಾ ಕಲ್ತು ಪ್ರಬುದ್ದಮಾನಕ್ಕೆ ಬಂದ್ಲು.

ಸಂಪಿಗಿರಾಯನ ಪಟ್ಣದ ಅರಸ 'ಒಬ್ಳೇ ಮಗಳು, ಆಕೀಗೆ ಯಾರು ಪ್ರೀತಿ ಆಗ್ತಾರೋ ಅವರ್ನೇ ಮದ್ವಿ ಆಗಲಿ' ಅಂತ, ಐವತ್ತಾರು ದೇಸದ ರಾಜಕೊಮಾರರ್ನೂ ಕರಸಿ ಸಯಂರ ಮಾಡಿಸಿದನಂತೆ. ಮಲ್ಲಿಗರಾಯನ ಪಟ್ಣದ ರಾಜಕೊಮಾರರೂ ಬಂದಿದ್ರಂತೆ, ಜೊತೇಲಿ ಮಂತ್ರಿಕೊಮಾರನೂವೇ ಬಂದಿದ್ದ. ಸಯಂರದಾಗೆ ರಾಜಕೊಮಾರಿ ಮಾಲಿ ಕೈಯಾಗೆ ಇಡಕಂಡು ಬಂದ್ಲಂತೆ; ಬಂದಿದ್ದೇ ಎಲ್ಲಾರ್ನೂ ಬಿಟ್ಟು ಸತ್ಯವಂತನ ಕೊಳ್ಳಿಗೆ ಆಕಿಬಿಟ್ಟಳಂತೆ. ಆಕೀನ ನೋಡಿದ ಲಾಗಾಯ್ತು ದುರ್ಬುದ್ದಿ ಬಾಯಾಗೆ ನೀರೂರ್ತಿರೋವಂತೆ.

ಇನ್ನೇನು ಶಂದ್ರಕೊಮಾರಿಗೂ ಸತ್ಯವಂತಗೂ ಬಾಳಾ ವೈಬೋಗದಿಂದ ಲಗ್ನ ಮಾಡಿದ್ರು. ದುರ್ಬುದ್ದಿ ಒಟ್ಟೊಟ್ಟೆ ಉರುಕಂಬ್ತಿದ್ದನಂತೆ, 'ಎಲಾ ಇವನಾ! ಎಂತಾ ಚಲೋದ ಎಣ್ಣು ಇವಂಗೆ ಸಿಕ್ಕೋಯಿತಲ್ಲಾ' ಅಂತ.

ಶಂದ್ರಕೊಮಾರಿ ಗಂಡನ ಮನೀಗೆ ಬಂದ್ಲು. ನಾಕು ದಿನ ಎಲ್ಲೂ ಸುಕ್ವಾಗಿದ್ರು. ಇಂಗೇ ಇರ್ತಾ ಶಂದ್ರಕೊಮಾರಿ ಗರ್ಬಿಣಿ ಆದ್ಲು, ಅದೇ ಸಮಯದಾಗೆ ಒಂದು ಕೀಲುಕುದುರೆ ಮಾರಾಕೆ ಬಂತು. ಮನುಸಾ ಅದರ ಮ್ಯಾಲೆ ಕುಂತು, ಅದರ ಸೂತ್ರಾ ತಿರುವಿದಾಂದರೆ ಇಮಾನದಂಗೆ ಆಕಾಸದಾಗೆ ಆರೋ ಕುದ್ರೆ ಅದು, ಕಬ್ಬಿಣದ್ದು. ಅದನ್ನ ಒಂದು ಸಾವಿರ ವರಾ ಕೊಟ್ಟು ಸತ್ಯವಂತ ಕೊಂಡುಕಂಡು ಇಟ್ಟಕಂಡ. ಆಮ್ಯಾಲೆ, ಹೆರಿಗೇಗಂತ ಶಂದ್ರಕೊಮಾರೀನ ತೌರುಮನೀಗೆ ಕರಕಂಡು ಓದ್ರು. ಅಲ್ಲಿ ಶಂದ್ರಕೊಮಾರಿಗೆ ಗಂಡು ಮಗ ಜನನಾದ್ನಂತೆ. ಆಮ್ಯಾಲೆ ಆಕೀನ ಗಂಡನ ಮನೀಗೆ ಕರಕಂಡು ಬರಬೇಕಲ್ಲಾ, ಸತ್ಯವಂತಗೇನೋ ಬಲು ಕೆಲಸಾ ಇತ್ತಂತೆ- ಅದಕಾಗಿ, ದುರ್ಬುದ್ದಿ ಕೂಟೆ ದಂಡು ದಳ ಕಳಿಶಿ, ಶಂದ್ರಕೊಮಾರೀನ ಆಕಿ ಮಗನ್ನ ಕರಕಂಡು ಬಾ ಅಂತ ಏಳಿದ್ನಂತೆ.

ಮಂತ್ರಿಕೊಮಾರ ಓಗಿ, ಅವರ್ನ ಕರಕಂಡು, ರಾಜ ಕೊಟ್ಟ ಉಡಗೊರಿನೆಲ್ಲಾ ತಗಂಡು, ಒಳ್ಳೋ ವ್ಯಾಳೀಗೆ ಮದ್ಯಾನ ಆತಂತೆ. ಮದ್ಯಾನ್ನದಾಗೆ ಶಂದ್ರಕೊಮಾರೀನ, ಆಕಿ ಮಗನ್ನ, ಇಬ್ಬರು ಗೌಡೀರ್ನ, ಪಟ್ಣದ ಆನೆಮ್ಯಾಲೆ ಕುಂಡರಿಸಿಕೊಂಡು ಒಂಟ್ನಂತೆ. ಆನೆ ಮುಂದೆ ಮುಂದೆ, ದಂಡು ದಳ ಇಂದೆ ಇಂದೆ. ಸಂಜಿ ಆಗ್ತಾ ಆಗ್ತಾ, ಆನೇನ ಜೋರಾಗಿ ಬಿಡಾಕ ಹತ್ತಿದ್ನಂತೆ. ಶಂದ್ರಕೊಮಾರಿ ಬಲು ವಿಧವಾಗಿ ಬ್ಯಾಡಿದಳಂತೆ: 'ಮಂತ್ರಿ, ಬ್ಯಾಡ ಕಣಪ್ಪ, ನಿದಾನಿಸು. ನನ್ನ ದಂಡು ದಳ ಎಲ್ಲಾ ಇಂದೆ ಬಿದ್ದೋತು. ಯಾಕ ಹೀಂಗೆ ಓಡಿಸ್ತೀ?' ಅಂತ. ಅವನು ಕೇಳ್ಯಾನೇ? ಇನ್ನಾ ಜೋರಾಗಿ ಬಿಟ್ಟನಂತೆ. ಆಮ್ಯಾಲೆ ಇನ್ನೇನೂ, ಚನ್ನಾಗಿ ಕತ್ತಲಾತು. ದಂಡು ದಳ ಎಲ್ಲಾ ಬಲು ಇಂದೆ ಬಿದ್ದೋತು. ಆವಾಗಾ ಅಲ್ಲೊಂದು ಬಾವಿ ಕಾಣಿಸ್ತಂತೇ, ದಾರಿ ಮಗ್ಗುಲಾಗೆ. ಅದಕ್ಕೆ ತುಸು ದೂರದಾಗೇನೇ ಒಂದು ಸಣ್ಣ ಗುಡ್ಡ ಇತ್ತಂತೆ. ದುರ್ಬುದ್ದಿ ಆನೀನ ಅದರ ಮ್ಯಾಕೆ ಅತ್ತಿಸಿಬಿಟ್ನಂತೆ. ಅಲ್ಲಿ ಸಣ್ಣದೊಂದು ಬನ್ನಿ ಮಂಕಾಳಮ್ಮನ ಗುಡಿ ಇತ್ತಂತೆ. ಅಲ್ಲಿ ಎಲ್ಲಾರ್ನೂ ಇಳಿಶಿ, 'ಶಂದ್ರಕೊಮಾರಿ, ಇನ್ನ ನೀನು ನಿನ್ನ ಗಂಡನ ಆಸಿ ಬಿಟ್ಬಿಡು. ನಾನೇ ನಿನ್ನ ಗಂಡಾ ಅಂತಂದು ತಿಳ್ಕೋ' ಅಂತ ಏಳಿದನಂತೆ. ಅದಕ್ಕೆ ಆಕಿ, 'ಮಂತ್ರಿ, ನನ್ನ ಗಂಡನ ಮನ್ಯಾಗೆ ನಿನ್ನ ನೋಡಿದಾಗಿನಿಂದ ನಿನ್ನ ಜತೆ ಮಾಡ್ಕಾಬೇಕು ಅಂಬ್ಕಂತ ಬಾಳಾ ಆಸಿ ಇತ್ತು. ನನ್ನ ಆಸಿ ಪೂರೈಸೋ ಯಾಳ್ಯಾವು ಇವತ್ತು ಬಂತು. ಸರಿ, ನಮ್ಮ ರಾಜ್ಯಕ್ಕೆ ಓಗಾನ ನಡಿ, ಅಲ್ಲೇ ಯಾರ್ಗೂ ಕಾಣ್ದಂಗ ಜತೀ ಮಾಡ್ಕಂಡು ಇರಾನಾ' ಅಂದ್ಲಂತೆ. ಆಕೀ, ಏನಾರೆ ಮಾಡಿ ರಾಜ್ಯ ಸೇರಬೇಕು ಅಂದ್ಕಂಡು ಇಂಗೆ ಉಪಾಯವಾಗಿ ಹೇಳಿದ್ಲು. ಅದಕವನು 'ಇಲ್ಲಾ, ನಾವಿಬ್ಬರೇ ಬ್ಯಾರೇ ರಾಜ್ಯಕ್ಕೆ ಓಗಿ ಅಲ್ಲಿ ಸುಕವಾಗಿ ಇರಾನಾ. ಆತು, ನೀವಿಲ್ಲೇ ಇರ್ರಿ, ನಾ ನೀರು ತರ್ತೇನಿ, ಪಲಾರ ಮಾಡೋನಂತೆ' ಅಂತ ಅಂದು, ನೀರು ತರಾಕೇ ಅಂತ ಗುಡ್ಡ ಇಳ್ದು ಓದ್ನಂತೆ. ಅವನು ಅತ್ಲಾಗೆ ಓಗತ್ಲು, ಶಂದ್ರಕೊಮಾರಿ ಕುಂತಿದ್ದೋಳು ಸರಲ್ ಅಂತ ಎದ್ದಿದ್ದೆ, ಗುಡೀ ಒಳೀಕೆ ಓಗಿ, ದೇವಿಪಾದದ ಮ್ಯಾಲೆ ಬಿದ್ದು, 'ತಾಯಿ, ನೀನೇ ನನ್ನ ಮಾನ ಕಾಪಾಡಮ್ಮ' ಅಂತ ಬೇಡಿಕೊಂಡಳಂತೆ. ಆಕೀ ಅಂಗ ಅಂದದ್ದೆ ತಡ, ಬಾಗಿಲು 'ಧಡಾರ್' ಅಂತ ಮುಂದಕ್ಕೆ ಬಿದ್ಬಿಟ್ಟಿತಂತೆ. ಆ ಎಳೇ ಮಗಾನೂ ಗೌಡೀರೂ ಒರಗೇ ಇದ್ರಂತೆ.

ದುರ್ಬುದ್ದಿ ನೀರು ತಗಂಡು ಸರಸರ ಬಂದ. ಬಂದೋನೆ ಆಕಿ ಇಲ್ಲದ ಕಂಡು 'ಆಕಿ ಎಲ್ಲಿ?' ಅಂತ ಗೌಡೀರ್ನ ಕೇಳಿದ. ಅವರು ನಡೆದದ್ದನ್ನ ಏಳಿದ್ರು. ಆ ಬಾಗಿಲು ದಬ್ಬಬೇಕು ಅಂತಂದು ಏನೇನೋ ಮಾಡಿನೋಡ್ದ, ಆಗ್ಲಿಲ್ಲ. ದೇವಿ ಆಕಿರೋ ಬಾಗ್ಲು ತಗ್ಯಾಕೆ ಇವನಿಂದಾದಾತಾ? ಕೊನೆಗೆ ಅವನು, ಆಕೀನ ಕೂಗದ, ಗದರಿಸಿದ, ಬೈದ. ಏನು ಮಾಡಿದರೂ ಆಕಿ ಮಾತಾಡ್ಲಿಲ್ಲ. ಅವನಿಗೆ ಸಿಟ್ಟು

ಅತ್ತಿ 'ನಿನ್ನ ಗೌಡೀರ್ನ ಸಾಯಿಸ್ತೀನಿ' ಅಂತ ಕತ್ತಿ ತಕೆಂಡು ಅವರ್ನ ಕಡಿದ. ಆಕಿ ಮಾತಾಡಲಿಲ್ಲ. "ನಿನ್ನ ಮಗನ್ನ ಸಾಯಿಸ್ತೀನಿ" ಅಂದ. ಆಕಿ ಮಾತಾಡ್ಲಿಲ್ಲ. ಆ ಎಳೆ ಕೂಸ್ನ ಕಡಿದು ತುಂಡುತುಂಡು ಮಾಡಿ ಕಂಡಿಇಂದ ಆಕಿ ಮುಂದಕ್ಕೆ ಎಸೆದ. ಆಕಿ ಮಿಸುಗಲಿಲ್ಲ. ಇನ್ನೇನು ಮಾಡ್ತಾನೆ ಅವನು? ಆನಿಮ್ಯಾಲೆ ಅತ್ಕಂಡು, ದೇಸದ ಮೇಲೆ ಒಂಟ್ಬಿಟ್ಟ.

ಇತ್ಲಾಗೆ ದೇವಿಪಾದದ ಮ್ಯಾಲೆ ಬಿದ್ದೇಟಿಗೆ ಆಕೆ ಪ್ರಗ್ನಿ ತಪ್ಪೋಗಿತ್ತು. ಪ್ರಗ್ನಿ ಬಂದ ಮ್ಯಾಲೆ ಎದ್ದು ನೋಡ್ತಾಳೆ: ಮಗ ಚೂರು ಚೂರು ತುಂಡಾಗಿ ಪಕ್ಕದಾಗೆ ಬಿದ್ದಾನೆ. ಆಕಿ ಗೊಳೋ ಅಂತ ಬಾಳಾ ಹೊತ್ತು ಅತ್ಲು. ಕೊನೀಗೆ ದೇವಿ ಪ್ರತ್ಯಕ್ಸಾಗಿ, 'ಅಮ್ಮ, ನೀನು ಸುಮ್ಮಕ ಯಾಕಳ್ತೀ? ಈಗ ನಿನಗೆ ಸನಿಕಾಟ. ಇನ್ನೂ ಅನ್ನೆರಡು ವರ್ಸ ಇದು ನಿಲ್ಲಲ್ಲ. ಅಲ್ಲಿವರೆಗೆ ದೇಸದ ಮ್ಯಾಲೆ ತಿರುಗಿಕಂಡಿರು. ಕಸ್ಟ ಬಂದಾಗ ನನ್ನ ನೆನಸು. ಆಮ್ಯಾಲೆ ನಿನ್ನ ಗಂಡ, ಮಗ ಎಲ್ಲಾ ನಿಂಗೆ ಸಿಕ್ತಾರೆ. ಓಗು' ಅಂತ ಏಳಿದ್ದೆ ಮಾಯ ಆದಳು.

ಇತ್ಲಾಗೆ ದಂಡು ದಳ ಎಲ್ಲ ತಿರಗದಿನ ರಾಜ್ಯಕ್ಕೆ ಓಯಿತು. ಮಂತ್ರೀನೂ ಇಲ್ಲ, ರಾಜಕೊಮಾ-ರೀನೂ ಇಲ್ಲ. 'ಎಲ್ಲಿ?' ಅಂತ ಎಲ್ರೂ ಕೇಳಿದ್ರು. 'ಅವರಾಗ್ಲೆ ರಾತ್ರೇನೇ ಆನೀಮ್ಯಾಲ ಬಂದ್ರಲ್ಲಾ?' ಅಂತ ಏಳಿದ್ರು. 'ರಾಜಕೊಮಾರೀನ ಕರಕಂಡು ಮಂತ್ರಿ ಮಗ ಓಡೋದ' ಅಂತ ಎಲ್ರೂ ಗೋಳಾ-ಡಿದ್ರು. ಮಂತ್ರಿ ಮ್ಯಾಲೆ ಸಿಟ್ಟಿಗೆದ್ದರು. ಸತ್ಯವಂತ, "ನಾನವನ್ನ ಉಡುಕಿ, ಸಿಗುದು ತ್ವಾರಣ ಕಟ್ತೀನಿ" ಅಂದಿದ್ದೆ ಹೊಂಟ್ಬಿಟ್ಟ.

ಇತ್ಲಾಗೆ ಶಂದ್ರಕೊಮಾರಿ, ಮನಸು ಎತ್ಲಾಗೆ ಎಳದ್ರೆ ಅತ್ತಾಗೆ ಓಗಕ್ಕ ಹತ್ತಿದಲು. ಇಂಗೇ ಕಾ-ಡುಮೇಡು, ಎಲ್ಲಂದರಲ್ಲಿ ಅಲಿಯೂದು, ಅಣ್ಣು ಅಂಪಲು ಏನು ಸಿಕ್ಕಿದ್ರೆ ಅದು ತಿನ್ನೋದು, ರಾತ್ರಿ ಆದಮ್ಯಾಲೆ ಮರದ ಕೆಳಗೆ ಓಗಿ ಮಲಗೋದು, ಇಂಗೇ ದಿನ ಕಳೀತಾಇದ್ಲು.

ಇಂಗೆ ಇರ್ತಾ, ಒಂದಿನ ಆಕಿ ಅಂಗೇ ಓಗ್ತಾ ಇರ್ವಾಗ ದಾರ್‍ಯಾಗೆ ನಾಕು ಜನ ಕಳ್ಳರು ಸಿಕ್ಕಿದರು. ಆಕಿ ಒಬ್ಬಂಟಿಗಳಾಗಿ ಓಗ್ತಿರೋದು ಕಂಡು, ಅವರು ಯಾರು ಏನು ಅಂತ ಇಚಾರಿಸಿದ್ರೆ, 'ನಾನು ಪರ-ದೇಸಿ, ನಂಗೆ ಯಾರೂ ಗತಿ ಇಲ್ಲ' ಅಂತ ಆಕಿ ಏಳಿದ್ಲು. ಆಕೀನ ತಮ್ಮ ಗುಡ್ಲಿಗೆ ಕರಕಂಡು ಒಯ್ದರು. ಅವ್ರ ಗುಡ್ಲುಗಳು ಒಂದು ವನಾಂತರದ ನಡುವೆ ಇದ್ವು. ಅಲ್ಲಿಗೆ ಓದಮ್ಯಾಲೆ ಆಕಿ 'ಒಳ್ಳೇದು, ನಿಮ್ಮಲ್ಲಿ ಯಾರನಾರೇ ಒಬ್ಬನ್ನ ಮದ್ವೆಆಗಿ ಇಲ್ಲೇ ಇರ್ತೀನಿ. ನಾ ಬೆಳಗಿಂದ ಉಪಾಸಾ, ನಂಗೀಗ ಬೆಳ್ಳೂರು ಅಕ್ಕಿ ತಂದುಕೊಟ್ರೆ, ನಾ ಅಡಿಗಿ ಮಾಡಿಕಂಡು ಉಣ್ಣತೀನಿ' ಅಂತ ಅಂದ್ಲು. ಅವರು ನಾಲ್ವೋರು,

ನೀ ಓಗು ಅಂತ ಒಬ್ಬ, ನೀನೇ ಓಗು ಅಂತ ಇನ್ನೊಬ್ಬ, ಇಂಗೇ ಜಗಳಾ. ಕೊನೀಗೆ ಎಲ್ರೂನೂವೆ ಒಂದೊಂದು ದಿಕ್ಕಿಗೆ ಒಂಟ್ರು. ಅವರೆಲ್ಲಾರೂ ಅತ್ಲಾಗೆ ಓಗುತ್ಲು, ಇತ್ಲಾಗೆ ಈಕಿ ಅಲ್ಲಿಂದ ಕಾಡು ಒಕ್ಕು ಬ್ಯಾಗಬ್ಯಾಗನೆ ಮುಂದಮುಂದಕೆ ಓಗಿಬುಟ್ಲು.

ಇಂಗೇ ಮುಂದಕ್ಕೆ ಓಗ್ತಾ ಇರುವಾಗ ಒಂದು ದಿನ ಒಬ್ಬ ಸಿಪಾಯಿ ಕುದಿರೆಮ್ಯಾಲೆ ಕುಂತ್ಕಂಡು ಇದ್ರಿಗೆ ಬಂದ. ಆಕಿ ಒಬ್ಳೇ ಓಗೋದು ಕಂಡು, ಯಾರು ಎತ್ತ ಅಂತಂದು ಇಚಾರಣಿ ಮಾಡಿದ. ಆಕಿ ಪರದೇಸಿ ಅಂತಂದು ತಿಳಿಯುತ್ಲು 'ನನ್ನ ಕೂಟ ಬಾ, ಇಬ್ರೂನೂವೆ ಮದ್ವ್ಯಾಗಿ ಸುಕ್ವಾಗಿ ಇರೂಣಂತ' ಅಂತ ಅಂದು ಆಕೀನ ಕುದ್ರೀಮ್ಯಾಲೆ ಕುಂಡ್ರಿಸಿಕೆಂಡು ಒಂಟ್ನಂತೇ. ಆಕೀಗೆ ಈವಾಗ ಯಂಗೆ ಪಾರಾಗಬೇಕು ಅಂಬೂದೇ ತಿಳೀಲಿಲ್ಲಂತೆ. ಕೊನೀಗೆ ಒಂದುಪಾಯ ಮಾಡಿದ್ಲಂತೆ. ಎಸ್ಟೇ ಆಗಲಿ, ಇದ್ಯಾಬುದ್ದಿ ಕಲ್ತ ಎಣ್ಣು. ಕಾಡಲ್ಲ ಏನಲ್ಲ. ಇನ್ನೇನೂ, ಕುದ್ರೀಮ್ಯಾಲಿಂದ ಕೆಳಗಿಳದು, ಅಲ್ಲೇ ಹೊಳ್ಳಾಡಿಕಂಡು 'ಲಬ ಲಬ' ಅಂತ ಹೊಯ್ಕಂಬಾಕ ಸುರುಮಾಡಿದಲಂತೆ. 'ಇದ್ಯಾಕ ಹಿಂಗೆ ಮಾಡ್ತಿ? ಏನಾತು?' ಅಂತ ಸಿಪಾಯಿ ಕೇಳಿದ್ದಕೇ, 'ಅಯ್ಯೋ, ಒಟ್ಟೆಸೂಲಿ ಎದ್ದದೆ. ಮೂರು ತಿಂಗ್ಳಿಗೆ ಒಂದು ಪಟ್ಟು ನಂಗೆ ಬತ್ತದೆ. ಈಗ ಬ್ಯಾಗನೆ ಓಗಿ ಎಲ್ಲಾರೆ ಒಂದಿಸ್ಟು ಕೋತೀ ನರಕ ತರ್ರಿ. ಇಲ್ದಿದ್ರೆ ನಾ ಉಳಿಯಾಕಿಲ್ಲ' ಅಂತ ಅಂದ್ಲು. ಆ ಸಿಪಾಯಿ ಆಕೀನ ಅಲ್ಲೇ ಒಂದು ಮರದ ಕೆಳಗೆ ಮಲಗಿಸಿದ, ಕುದ್ದೀನ ಒಂದು ಬುಡಕ್ಕೆ ಕಟ್ಟಿ, ಬಟ್ಟೇನೆಲ್ಲಾ ಕಳಚಿ ಗಂಟುಕಟ್ಟಿ ಅಲ್ಲೇ ಆಕಿ ಪಕ್ಕದಾಗ ಇಟ್ಟು, ಒಂಟೋದ ಕೋತೀನರಕ ತರಾಕೆ. ಅವನತ್ಲಾಗೆ ಓಗೂತ್ಲು ಈಕಿ ಎದ್ದು, ಅವನ ಬಟ್ಟೇನೆಲ್ಲಾ ತೊಟ್ಕಂಡು, ಕುದ್ರಿ ಮ್ಯಾಲೆ ಕುಂತು, ಒಂದೇ ಓಟ ಕಿತ್ತಿಬಿಟ್ಲು.

ಓಗ್ತಾ ಓಗ್ತಾ ಓಗ್ತಾ ಒಂದು ದೊಡ್ಡ ವನಾಂತರಕ್ಕೆ ಓದ್ಲು. ಅಲ್ಲಿ ನಡೂ ನಡುವೆ ಒಂದು ದೊಡ್ಡ ಆಲದ ಮರ ಇತ್ತಂತೆ. ಅದ್ರಾಗೆ ಒಂದು ಮನಸಾ ಕುಂತು ಮನಗೋಸ್ಟು ದೊಡ್ಡ ಪೊಟರೆ ಇತ್ತಂತೆ. ಅಲ್ಲೇ ಅರ್ದಮ್ಮೈಲು ದೂರದಾಗೆ ಒಂದು ಸಣ್ಣ ನದಿ ಇತ್ತಂತೆ. ಆ ಕಾಡಿನಾಗೆ ಬೇಕಾದಂಗೆ ಅಣ್ಣು ಅಂಪಲು ಸಿಕ್ಕೋವಂತೆ. ಆಕಿ ಏನು ಮಾಡಿದ್ಲು: ಆ ಕುದ್ರೀನ ಬಿಟ್ಟು ಅತ್ಲಾಗೆ ಓಡ್ಸಿ, ಅಲ್ಲೇ ಇರಾಕಹತ್ತಿದಲಂತೆ. ಅಲ್ಲೇ ಇರ್ತಾ ಎಷ್ಟೋದಿನ ಕಳೆದೋದುವಂತೆ.

ಇತ್ಲಾಗೆ ಚಿಕ್ಕರಾಜಕೊಮಾರ ದೇವಕೊಮಾರ ಇದ್ನಲ್ಲ, ಅವ್ನು, ತಂದೆ ಕೂಟೆ 'ಅಪ್ಪ, ಅಣ್ಣ ಓಗಿ ಬಾಳ ದಿನಾತು. ಅವ್ರೂ ಬರ್ಲಿಲ್ಲ, ಅತ್ಗೆ ಪತ್ತೇನೂ ಆಗ್ಲಿಲ್ಲ. ಆ ಕೀಲುಕುದುರೀನ ಕೊಡು, ನಾನು ಓಗಿ, ಅವರೆಲ್ಲಿದ್ರೂನೂ ಪತ್ತೆಮಾಡಿ ತರತೇನೆ' ಅಂತ ಅಂದು, ಕೀಲುಕುದುರೀನ ತಗಂದು ಒಂಟ್ನಂತೆ.

ಓಗ್ತಾ ಓಗ್ತಾ, ಶನ್ನಿಗರಾಯನಪಟ್ನಾ ಶನ್ನಿಗರಾಯನಪಟ್ನಾ ಅಂತ ಒಂದು ದೇಸ, ಅಲ್ಲಿಗೆ ಓದ್ನಂತೆ. ಒಂದಿನ ಆ ಪಟ್ಣದ ಮ್ಯಾಲೆ ಕೀಲುಕುದುರಿ ಆಕ್ಕಂಡು ಓಗ್ತಾ ಇರುವಾಗ, ಆ ದೇಸದ ರಾಜಕೊಮಾರಿ ಕಾಮಾಕ್ಸಿ, ಮಾಳಿಗೆಮ್ಯಾಲೆ ಕುಂತಿದ್ದೋಳು ಇವನ್ನ ನೋಡಿ, 'ಯಾರೋ ಅಂಗೆ ಆಕಾಸದಾಗ ಆರ್ತಾ ಅವರೇ' ಅಂತ ಕೈಆಕಿ ಅವನ್ನ ಕರದ್ಲಂತೆ. ದೇವಕೊಮಾರ ಸರ್ ಅಂತ ಅಲ್ಲಿ ಇಳ್ದುಬಿಟ್ಟ. ಅವನ ರೂಪ ನೋಡಿ ಆಕಿ ಮರುಳಾಗಿಬಿಟ್ಟು, ಆಮೇಲೆ ಅವನ ಇಸಾರ ಎಲ್ಲಾ ತಿಳಕೆಂಡು, ಅವನ್ನ 'ದಿ-ನಾ ರಾತ್ರಿನಾಗೆ ಇಲ್ಲಿಗೆ ಬಾ' ಅಂತ ಏಳಿಕಳಿಸಿದಳಂತೆ. ಇಂಗೇ ಅವ್ರಿಬ್ರೂ ಇರ್ತಾ ಆಕಿ ಬಸರಾದ್ಲು. ಆಮ್ಯಾಗೆ ಒಂದಿನ ಅವನ್ತಾವ "ನೋಡು, ನಾ ಬಸರಾಗಿರೋದು ನಮ್ಮ ಅಪ್ಪಗ ತಿಳಿದ್ರೆ, ನಂಗೂ ನಿಂಗೂ ಇಬ್ರಿಗೂ ಒಳ್ಳೇದಲ್ಲ. ನಡೀ, ಎತ್ಲಾಗಾನಾ ಬ್ಯಾರೆ ದೇಸಕೆ ಓಗಾನಾ" ಅಂತ ಏಳಿ, ತನ್ನ ಒಡ್ವೆ ವಸ್ತ ಎಲ್ಲಾ ಗಂಟು ಕಟ್ಟಿಕಂಡು, ಅವನ ಜತೆ ಕುದ್ರಿಮ್ಯಾಲೆ ಕುಂತ್ಕಂಡು ಒಂಟುಬಿಟ್ಲಂತೆ. ಇಂಗೇ ಬಾಳಾದೂರಾ ಓದ್ರಂತೆ. ಓಗ್ತಾ ಓಗ್ತಾ ಆಕಿ "ನಂಗೆ ಬಲು ಬಾಯಾರಿಸ್ತದ. ಇಲ್ಲೇ ಕುದ್ರಿ ಇಳ್ಸು, ನೀರು ಕುಡ್ದು ಮುಂದಕ್ಕೆ ಓಗಾನ" ಅಂದ್ಲಂತೆ.

ಇಬ್ರೂ ಇಳುದ್ರು. ಅವನು ಹೆಂಡ್ತೀನ ಅಲ್ಲೇ ಕುಂಡ್ರಿಸಿ, ನೀರು ತರ್ತೀನಿ ಅಂತ ಅಂದು ಓಡಿ, ಓದಾ ಓದಾ. ಎಸ್ಟು ದೂರ ಓದ್ರೂ ನೀರು ಸಿಕ್ಲಿಲ್ಲ. ದಾರೀನೇ ಮುಂದಕ್ಕೆ ತಿಳಿಯದಂಗೆ ಆತು. 'ನೀ-ರಿಲ್ಲದಿದ್ದರೆ ಅಸ್ಟೇ ಓಯ್ತು. ಆಕಿ ಕುಂತಿದ್ದ ತಾವಕೆ ಓಗಾನಾ' ಅಂತ ಒಂಟರೆ, ಎಸ್ಟು ಉಡಿಕಿದರೂ ದಾರಿ ತಿಳೀದೋಯ್ತು. ಉಡಿಕೀ ಉಡಿಕೀ ಸಾಕಾತು. ಅಸ್ಟೊತ್ತಿಗೆ ಕತ್ತಲಾಗಿ ಓಯ್ತು. ಇನ್ನೇನು ಮಾ-ಡ್ತಾನೆ ಅವನು? 'ಅಯ್ಯೋ ಪಾಪ, ಒಬ್ಬೋಳು. ಇಂತಾ ಕಾಡಿನಾಗೆ ಎಷ್ಟು ಬೆದರಿದಳೋ ಏನೋ?' ಅಂತಂದು ಸುಮ್ಮಕ ಒಂದು ಮರದ ಬುಡದಾಗೆ ಬಿದ್ಕಂಡ.

ಇತ್ಲಾಗೆ ರಾಜಕೊಮಾರಿ 'ಈಗ ಬತ್ತಾನೆ, ಆಗ ಬತ್ತಾನೆ' ಅಂತ ಕಾದು ಕುಂತ್ಲು. ಕತ್ತಲಾದ್ರೂ ಬರ್ಲೇ ಇಲ್ಲ. ಇನ್ನೇನು, ಆಕಿ ಅತ್ಕೊಂಡು ಅವತ್ತು ರಾತ್ರಿ ಎಲ್ಲಾ ಅಲ್ಲೇ ಕುಂತಿದ್ಲು. ತಿರಿಗಿ ಬೆಳಗಾಗ ಎದ್ದು, 'ಎಲ್ಲೋದ್ನೋ ಏನೋ, ಬರ್ಲೇ ಇಲ್ಲ' ಅಂತಂದು, ಆ ಕೀಲು ಕುದುರಿ ಮ್ಯಾಲೆ ಅತ್ತಿಕಂಡು ಒಂಟುಬಿಟ್ಲು.

ಓಗ್ತಾ ಇರ್ವಾಗ, ಕಾಡಿನಾಗೆ ಯಾರೋ ಕೈಆಕಿ ಕರದಂಗೆ ಆಯ್ತು. ಕರದೋರು ಇನ್ಯಾರೂ ಅಲ್ಲ, ಶಂದ್ರಕೊಮಾರಿ. ಆಕೀಗೆ ಗೊತ್ತಾತು: 'ಈ ಕುದ್ರಿ ನಮ್ಮದು. ಇದರ ಮ್ಯಾಲೆ, ನನ್ನ ಗಂಡನೋ, ಇಲ್ಲ ಮೈದನೋ ಓಗ್ತಾ ಅವರೆ' ಅಂತ. ಅದ್ಕೇ ಕೈಬೀಸಿ ಕರೆದದ್ದು. ಇಳಿದ ಮ್ಯಾಲೆ ನೋಡ್ತಾಳೆ- ಎಣ್ಣು

ಎಂಗಸು! ಯಾರು, ಎತ್ತಾ ಅಂತ ಇಚಾರಿಸಿದ್ಲು. ಆಕಿ ಎಲ್ಲಾನೂವೆ ಮೊದ್ಲಿಂದ ಏಳಿದ್ಲು. ಶಂದ್ರಕೊಮಾರಿಗೆ ಎಲ್ಲಾ ಗೊತ್ತಾತು. ಆಕಿ ಏಳಿದ್ಲು 'ಅಂಗಾರೆ ನಾವಿಬ್ರೋರು ಅಕ್ಕತಂಗೇರಾದ್ವಮ್ಮ. ಬಾ, ಎಂಗೂ ನಂತಾಗು ಈಸು ಒಡ್ವೇ ಐತೆ, ನಿಂತಾಗೂ ಐತೆ. ಇಬ್ರೂ ಜತೇಲಿ ಓಗಿ ಒಂದು ಪಟ್ಣಾ ಸೇರಾನ. ನಾ ಗಂಡ ಆಗ್ತಿನಿ, ನೀ ಎಂಡ್ತಿ ಆಗು' ಅಂತಂದು ಇಬ್ರೂನೂ ಕುದ್ರಿ ಅತ್ತಿ, ಓಗಿ, ಬೆಂಕಿರಾಯನ ಪಟ್ಣ ಅನ್ನೋ ಊರು ಸೇರಿದರಂತೆ. ಅಲ್ಲಿಗೆ ಓಗಿ ಒಂದು ಮನ್ಯಾಗೆ ಇದ್ರಂತೆ. ಇಂಗೇ ಇರತಾ ಕಾಮಾಕ್ಸಿ ಒಂದು ಗಂಡು ಉಡಗನ್ನ ಜನನ ಆದ್ಲಂತೆ.

ಅದೇ ಸಮೇದಾಗೆ ಆ ಊರಿನ ರಾಜಗೆ ಒಂದು ದೊಡ್ಡ ಕಸ್ಟಬಂತಂತೆ. ಆಗದ ರಾಜರು ಯಾರೋ ಬಾಳಾಸ್ಟು ದಂಡು ದಳ ತಗಂಡು ಬಂದು, ಈ ಬೆಂಕಿರಾಯನ ಪಟ್ಣದ ಮ್ಯಾಲೆ ಮುತ್ತಿಗಿ ಆಕಿದರಂತೆ. ಈ ರಾಜಗೆ ಯಾರೂ ಗಂಡು ಮಕ್ಕಳಿರಲಿಲ್ಲಂತೆ. ರಾಜ ಆಗ್ಲೆ ಮುದುಕ ಆಗಿದ್ನಂತೆ. ಅವನು ಆ ರಾಜನ ಕೂಟೆ ಯುದ್ದ ಆಡಲಾರದೆ ಊರನಾಗೆಲ್ಲಾ ಡಂಗುರ ಆಕಿಸಿದನಂತೆ: 'ಯಾರು ಈಗ ಯುದ್ದ ಆಡಿ ಗೆಲ್ತಾರೋ ಅವರಿಗೆ ನನ್ನ ರಾಜ್ಯದ ಪಟ್ಟ ಕಟ್ಟಿ, ಮಗಳ್ನ ಕೊಟ್ಟು ಮದ್ವಿ ಮಾಡ್ತೀನಿ' ಅಂತ.

ಇದನ್ನ ಶಂದ್ರಕೊಮಾರಿ ಕೇಳಿ, "ಬನ್ನಿ ಮಂಕಾಳಮ್ಮ ನಂಗೆ ಸಾಯ ಮಾಡ್ದ್ರೇ ನಾ ಯಾಕ ಯುದ್ದ ಆಡಬಾರ್ದು?' ಅಂತ ಅಂದ್ಕಂಡು, ಗಂಡು ಉಡಿಗಿ ಉಟ್ಕಂಡು, ರಾಜನ ತಾಕೆ ಓಗಿ, 'ನಾ ರಾಜ್ಯ ಗೆದ್ದು ಬತ್ತೀನಿ' ಅಂತ ಏಳಿ, ಇಸ್ಟು ದಂಡು ಪಂಡು ತಗಂಡು ಯುದ್ದಕ್ಕೆ ಒಂಟುಬಿಟ್ಲಂತೆ. ದಾರ್‍ಯಾಗೆ ಓಗ್ತಾ 'ಅಮ್ಮಾ, ತಾಯಿ, ಬನ್ನಿ ಮಂಕಾಳಮ್ಮ! ಈಗ ನಂಗೆ ಸಾಯಮಾಡು' ಅಂತ ದ್ಯಾನಾ ಮಾಡಿದಲಂತೆ. ಈಕಿ ಅಂಗೆ ದ್ಯಾನಮಾಡುತ್ಲೂ ಆಕಡೆ ರಾಜನ ಸೈನ್ಯ ಎಲ್ಲಾ ಮಂಕು ಬಡದಂತೆ, ಎಲ್ಲ್ರೋರಲ್ಲೇ ನಿಂತ್ಬಿಟ್ರಂತೆ. ಇನ್ನೇನೂ, ಶಂದ್ರಕೊಮಾರೀನೂ ಆ ದಂಡಿನೋರನೆಲ್ಲಾ ಕಡಿದು, ಈಡಾಗಿ ಗೆದ್ದು ರಾಜ್ಯಕ್ಕೆ ಬಂದಳಂತೆ. ರಾಜಗೆ ಇದರಿಂದ ಬಲೇ ಸಂತೋಸ ಆಯ್ತಂತೆ. ಅವನು ಇನ್ನು ನಾನು ಮುದ್ಕ ಆದೆ, ನಿಂಗೇ ಪಟ್ಟ ಕಟ್ತೀನಿ. ನನ್ನ ಮಗಳ್ನ ಮದ್ವಿ ಮಾಡ್ಕೊ' ಅಂತ ಅಂದ್ನಂತೆ. ಅದಕ್ಕೆ ಈಕಿ 'ಇಲ್ಲಾ, ಇನ್ನೊಂದು ವರ್ಸ ನಂದು ವ್ರತ ಐತೆ. ಅಲ್ಲೀವರೆಗೆ ನಾನು ಮದ್ವೀ ಆಗಾಕಿಲ್ಲ. ಈಗ ಬೇಕಾದ್ರೆ, ನನ್ನ ಶಂದ್ರಾಯುದಕ ಪಟ್ಟಕಟ್ಟಿ' ಅಂದ್ಲಂತೆ.

ಪಟ್ಟ ಆದಮ್ಯಾಲೆ, ಊರ ಬಾಗಿಲಾಗೆ ಒಂದು ಅನ್ನಶತ್ರ ಕಟ್ಟಿಶಿ, ಅದರ ಬಾಗಿಲ ಮ್ಯಾಲೆ, ಆಕಿ ಗಂಡು ಉಡುಗಿ ಇಕ್ಕಿರೋ ಪೋಟಾನೇ ಆಕಿಸಿ, "ಇಲ್ಲಿಗೆ ಯಾರಾರೂ ಬಂದು, ಈ ಪೋಟಾನ ನೋಡಿ, ಏನೇನು ಅಂತಾರೆ ಅಂಬೋದ್ನ ನಂಗೆ ತಿಳಿಸ್ತಾ ಇರಬೇಕು" ಅಂತ ಆಗ್ನೀ ಮಾಡಿದಲಂತೆ.

ಇತ್ಲಾಗೆ ದೇವಕೊಮಾರ ಕುದ್ರಿನೂ ಕಳಕಂಡು ಎಂಡ್ತಿನೂ ಕಳಕಂಡು ಅಲ್ಲೀ ಇಲ್ಲೀ ತಿರಗ್ತಾ ಒಂದು ಪಟ್ಣ ಸೇರಿದನಂತೆ. ಅದೇ ಪಟ್ಣದಾಗೇ ಸತ್ಯವಂತನೂನೂ ಬಿಕಾರಿ ಅಂಗೆ ತಿರುಗ್ತಾ ಇದ್ನಂತೆ. ಒಂದಿನ ಇಬ್ರೂ ಒಬ್ಬರನ್ನೊಬ್ಬರು ನೋಡಿ ಗುರುತು ಇಡಿದರಂತೆ. ಇನ್ನೇನು, ಆವತ್ತಿನಿಂದ ಇಬ್ರೂನೂ ಜೊತೇಲೇ ಆ ಪಟ್ಣ ಈ ಪಟ್ಣ ತಿರುಕ್ಕೊಂಡು ಇರ್ತಿದ್ರಂತೆ.

ಇನ್ನೇನು, ಇಲ್ಲಿ ಆ ಶತ್ರಕ್ಕೆ ಅಂತೋರು ಇಂತೋರು ಎಲ್ರೂ ಬರ್ತಿದ್ರಂತೆ. ಎಲ್ಲಾರ ಸುದ್ದೀನೂ ಶಂದ್ರಕೊಮಾರೀಗೆ ತಿಳೀತಿತ್ತಂತೆ. ಇಂಗೇ ಇರ್ತಾ ಒಂದಿನ ಆ ನಾಕು ಜನ ಕಳ್ಳರೂನೂ ಬಂದು ಆ ಪೋಟಾನ ನೋಡಿ 'ಈತನ ಅಂಗೆ ಇರೋ ಎಣ್ಣೀನೆ, ನಮ್ಮ ಕೈಗೆ ಸಿಕ್ಕಿ ಗಸ್ತು ಕೊಟ್ಟು ಓದ್ಲು' ಅಂತ ಮಾತಾಡಿಕೊಂಡರಂತೆ. ಶಂದ್ರಕೊಮಾರಿ ಅದನ್ನ ಕೇಳಿ, ಅವರ್ನ ಒಂದು ತಾವ ಸೆರೀಗೆ ಆಕಿಸಿದಲಂತೆ. ಇನ್ನಾ ಒಂದಿನ ಆ ಸಿಪಾಯಿ ಬಂದು, ಅಂಗೇ ಅಂದುಕೊಂಡ್ನಂತೆ, ಆ ಪೋಟಾನ ನೋಡಿ. ಅವನ್ನೂನೂ ಒಂದು ಕಡೆ ಸೆರೀಗೆ ಆಕಿಸಿದಲಂತೆ. ಇನ್ನೊಂದು ದಿನ ಆ ದುರ್ಬುದ್ದಿ ಅಲ್ತಿರಿಗಿ ಇಲ್ತಿರಿಗಿ ಅಲ್ಲಿಗೆ ಬಂದ್ನಂತೆ. ಬಂದು ಅವ್ನೂನೂ ಅಂಗೇ ಮಾತಾಡಿಕೊಂಡನಂತೆ. ಅವನ್ನೂನೂ ಒಂದು ಕಡೆ ಸೆರೀ ಆಕಿಸಿದ್ಲಂತೆ.

ಇಂಗೇ ಇರ್ತಾ, ಒಂದಿನ ಸತ್ಯವಂತನೂ ದೇವಕೊಮಾರನೂ ಬಂದು, ಆ ಪೋಟಾ ನೋಡಿ ಗೋಳಾಡ್ತಿದ್ದರಂತೆ. ಆಳುಗಳು ಓಗಿ ಏಳುತ್ಲು ಶಂದ್ರಕೊಮಾರಿ ಅವರ್ನ ಮನೀಗೆ ಕರಶಿಕೆಂಡು, ಅವರಿಗೆ ನೀರು ಆಕಿ, ಉಣ್ಣಾಕ ಇಟ್ಟು, ನಡದ ಕತೀನೆಲ್ಲ ಗೋಳಾಡತಾ ಏಳಿಕಂಡಳಂತೆ. ಆ ವ್ಯಾಳಿಗೆ ಆಕಿ ಮನಿ ಬಿಟ್ಟು ಅನ್ನೆರಡು ವರ್ಸ ಆಗಿತ್ತಂತೆ. ಇನ್ನೇನು- ಆ ಊರು ರಾಜನ ತಾಕೆ ಓಗಿ, 'ನಾನು ಎಂಗ್ಸು, ಗಂಡ್ಸಲ್ಲ' ಅಂತ ಏಳಿ, ಗಂಡಗ ಪಟ್ಟ ಕಟ್ಟಿಸಿ, ಆ ಊರು ರಾಜಕೊಮಾರ್ತಿನ ಮದ್ವೀಮಾಡ್ಸಿ, ಕಳ್ರುನ್ನೂನೂ ಸಿಪಾಯಿನೂನು ಬಿಟ್ಟು ಓಡಿಸಿ, ದುರ್ಬುದ್ದೀನ ಜೊತ್ಯಾಗೆ ಕರಕಂಡು, ಊರಿಗೊಂಟ್ರಂತೆ.

ಬರ್ತಾ ದಾರ್ಯಾಗೆ ಎಲ್ರೂ ಆ ಬನ್ನಿ ಮಂಕಾಳಮ್ಮನ ಗುಡಿ ತಾವ ಇಳ್ದು, ಪೂಜೆಮಾಡಿತಿ, ಆ ದುರ್ಬುದ್ದೀನ ತಾಯಿಗೆ ಬಲಿಕೊಟ್ಟರಂತೆ. ಬನ್ನಿ ಮಂಕಾಳಮ್ಮ ಪ್ರತ್ಯಕ್ಸಾಗಿ, ಆಕಿ ಮಗನ್ನೂನೂ ಆ ಗೌಡೀರ್ನೂನೂ ಬದುಕಿಶಿಕೊಟ್ಟಳಂತೆ. ಹಿಂಗೆಲ್ರೂನೂ ಸಂತೋಸದಿಂದ ಪಟ್ಣ ಸೇರಿ, ಸುಕವಾಗಿ ವೈಬೋಗದಿಂದ ಇದ್ರಂತೆ.

ಅಜ್ಜಿ ಹೀಗೆ ಕತೆ ಮುಗಿಸಿ 'ಹೂಂ, ಇನ್ನು ಆತಲ್ಲ ಕತಿ. ಓಗ್ರಿ, ಉಂಡು ಮಲಗು ಓಗ್ರಿ. ಬಿಸಿಬಿಸಿ ಮುದ್ದಿ ಆಗ್ಯಾದೇನೋ, ನೋಡ್ರಿ' ಅಂದಳು.

-ಬಿ. ಆರ್. ಸಂಜೀವ ರೆಡ್ಡಿ.

[ಇದು ಚಿತ್ರದುರ್ಗ ಡಿಸ್ಟ್ರಿಕ್ಟಿನ ಕಡೆಯ ಕತೆ.]

ಸಂಘದ ಪ್ರಕಟನೆಗಳು

೧. ಶ್ರೀ ಕೈಲಾಸಂ ಅವರ ಸ್ಮರಣೆ

ಶ್ರೀ ಕೆ. ವಿ. ಅಯ್ಯರ್ ಅವರು ಬರೆದ ಒಂದು ವ್ಯಕ್ತಿಚಿತ್ರ.

ಕೈಲಾಸಂ ಅವರ ಕಾವ್ಯನಾಟಕಗಳಿಗಿಂತ ಬೆಲೆಯಲ್ಲಿ ಕಡಮೆಯಲ್ಲದ್ದು ಅವರ ವ್ಯಕ್ತಿ ಚೈತನ್ಯ. ಆ ಚೈತನ್ಯದ ಲೀಲೆಗಳನ್ನು ಕೆ. ವಿ. ಅಯ್ಯರವರು ಲಘುರೇಖೆಯಲ್ಲಾದರೂ ಚಿತ್ರಿಸಿ ಗುರುತು ಮಾಡಿಟ್ಟಿದ್ದಾರೆ. ಈ ಚಿತ್ರವು ವಾಸ್ತವಿಕತೆಯಿಂದ ಮನೋಹರವಾಗಿದೆ. ಕಾವ್ಯಗಳನ್ನು ಮಾಡಿದ್ದರ ಜೊತೆಗೆ ಮಾಡಿಸಿದ ಕೀರ್ತಿ ಕೈಲಾಸಂ ಅವರದು. ಆ ಕೀರ್ತಿಯ ಪ್ರಭಾಪುಂಜದಲ್ಲಿ ಈ ವ್ಯಕ್ತಿಚಿತ್ರ ಒಂದು ಉಜ್ವಲಕಿರಣ.

ಬೆಲೆ: ರೂ. ೨-೪-೦ **ಕ್ಯಾಲಿಕೊ ಪ್ರತಿ: ರೂ. ೩-೪-೦.**

೨. ಕರ್ಣಾಟಕ ಮಾಲವಿಕಾಗ್ನಿಮಿತ್ರ ನಾಟಕಂ

ಆಸ್ಥಾನ ವಿದ್ವಾನ್ ಮೋ. ಶಂ. ಸುಬ್ರಹ್ಮಣ್ಯ ಶಾಸ್ತ್ರಿಗಳ ಅನುವಾದ.

’ಮಾಳವಿಕಾಗ್ನಿಮಿತ್ರ’ವು ಕಾಳಿದಾಸನು ಬರೆದ ಐದು ಅಂಕಗಳ ನಾಟಕ. ಇದು ರಾಜನ ಅಂತಃಪುರದ ಮತ್ತು ಉದ್ಯಾನವನದ ಶೃಂಗಾರ ಪ್ರಪಂಚದಲ್ಲಿ ನಡೆದ ಪ್ರಣಯ ಕಥೆ... ನಾಟಕವು ಮೊದಲಾಗುವುದೂ ಮುಗಿಯುವುದೂ ಆಧುನಿಕ ಕಾದಂಬರಿಯ ಹಾಗೆ... ಈ ನಾಟಕದಲ್ಲಿ ಸರ್ವತೋಮುಖವಾದ ಶೃಂಗಾರಾಭಿನಯವನ್ನು ನೋಡಬಹುದು... ಪ್ರಾಯಶಃ ಮತ್ತಾವ ಶೃಂಗಾರ ನಾಟಕದಲ್ಲಿಯೂ ನಾಯಿಕೆಯ ಸೌಂದರ್ಯ ವರ್ಣನೆಗೆ ಇಷ್ಟು ಪದ್ಯಗಳು ವಿನಿಯೋಗಿಸಲ್ಪಟ್ಟಿಲ್ಲ. ಒಟ್ಟಿನ ಮೇಲೆ ಇದರಲ್ಲಿ ಕಾವ್ಯನಾಟ್ಯಗಳೆರಡರ ಗುಣಗಳೂ ಇವೆ.

ಬೆಲೆ: ರೂ. ೧-೧೨-೦ **ಕ್ಯಾಲಿಕೊ ಪ್ರತಿ: ರೂ. ೧-೧೨-೦**

೩. ಮೊನ್ನ ವನ್ನ

ಶ್ರೀಮಾನ್ ಎಸ್. ಜಿ. ಶಾಸ್ತ್ರಿ ಅವರ ಅನುವಾದ.

’ಮೊನ್ನ ವನ್ನ’ ಎಂಬುದು ಬೆಲ್ಜಿಯಂ ದೇಶದ ಮಾರಿಸ್ ಮ್ಯಾಟರ್ ಲಿಂಕ್ ಎಂಬ ಕವಿ ಬರೆದಿ-

ರುವ ಮೂರು ಅಂಕಗಳ ನಾಟಕ. ಇದು ಎರಡು ರಾಜ್ಯಗಳ ಹೋರಾಟಕ್ಕೆ ಸಂಬಂಧಿಸಿದ ನಾಟಕ, ನಾಲ್ಕು ವ್ಯಕ್ತಿಗಳಿಗೆ ಹೊಂದಿಕೊಂಡ ನಾಟಕ, ಒಂದು ಧರ್ಮಸಂಕಟವನ್ನು ಚಿತ್ರಿಸುವ ನಾಟಕ. ಈ ಸಂದರ್ಭದಲ್ಲಿ ಹೊಮ್ಮುವ ನ್ಯಾಯ ಅನ್ಯಾಯ, ಧರ್ಮ ಅಧರ್ಮ, ಋಜು ಕುಟಿಲ, ಸತ್ಯ ಅಸತ್ಯ, ಮೊದಲಾದ ದ್ವಂದ್ವಗಳ ಸಾರಾಸಾರದ ವಿವೇಚನೆಯೇ ಇಲ್ಲಿನ ಪರಿಮಳ, ಇದು ವಿಚಾರಗರ್ಭವಾದ ನಾಟಕ.

ಬೆಲೆ: ಎರಡು ರೂಪಾಯಿ. ಕ್ಯಾಲಿಕೋ ಪ್ರತಿ: ಮೂರು ರೂಪಾಯಿ.

೪. ನಾಗನ ಪದಗಳು

ಶ್ರೀ ಜಿ. ಪಿ. ರಾಜರತ್ನಂ ಅವರ ಹೊಸ ಕವನಗಳು.

ಇವು ’ರತ್ನನ ಪದಗಳು’ ಜಾತಿಯ ಕವಿತೆಗಳು. ಅಲ್ಲಿನ ’ರತ್ನ’ನಿಗಿಂತ ಇಲ್ಲಿನ ’ನಾಗ’ ಹದಿ-ನೆಂಟು ವರುಷ ಬೆಳೆದವನು. ಅವನಿಗೆ ಓದು ಬರಹ ಬಾರದು, ಇವನು ಅಕ್ಷರಸ್ಥ. ಅವನದು ಮೈಸೂರಿನ ಮಿತಕನ್ನಡ, ಇವನದು ಸರ್ವಕರ್ನಾಟಕದ ಕಿಚಡಿ. ಅವನ ಪ್ರಪಂಚದಲ್ಲಿ ಮೂರು-ಪಾಲು ಹೆಂಡದಂಗಡಿ, ಇವನದರಲ್ಲಿ ಮೂರೂವರೆ ಪಾಲು ಮನೆ ಮಟ ಹೆಂಡತಿ ಮಕ್ಕಳು. ಅವನ ಜೀವನಕ್ಕಿಂತ ಇವನ ಜೀವನ ಹೆಚ್ಚು ಪರಿಣತವಾದದ್ದು. ರತ್ನನ ಪದಗಳು ನೀರಿನ ಹಾಗೆ ಹರಿದರೆ, ನಾಗನ ಪದಗಳು ಹಾವಿನ ಹಾಗೆ ಹರಿಯುತ್ತವೆ.

ಬೆಲೆ : ರೂ. ೧-೪-೦. ಕ್ಯಾಲಿಕೊ ಪ್ರತಿ: ರೂ. ೨-೪-೦.

ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಸಾರಸ್ವತಸತ್ತ್ವಕ್ಕೆ ಎರಡು ಸಾಕ್ಷಿ

೧. ಬಾಲ ಸರಸ್ವತಿ

ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಈ ವರ್ಷ (೧೯೫೨-೫೩) ಇರುವವರಲ್ಲಿ ಒಂದು ಇಪ್ಪತ್ತು ನಾಲ್ಕು ಜನರ ಮೂವತ್ತಾರು ಬರಹಗಳನ್ನು ಇಲ್ಲಿ ರುಚಿ ನೋಡಬಹುದು. ಬೇರೆ ಬೇರೆಯ ವಿಷಯ-ಗಳು, ಬೇರೆ ಬೇರೆಯ ರೀತಿಗಳು, ಬೇರೆ ಬೇರೆಯ ಭಾಷಾ ಶೈಲಿಗಳು. ಕೃತವಾದರೂ ಕೃತಕವಾಗದೆ, ಸಹಜವಾದ ಸರಳವಾದ ವಿದ್ಯಾರ್ಥಿರಚನೆಗಳಿಗೆ ಇದು ಒಂದು ಸಣ್ಣ ಸಾಕ್ಷಿ.

ಪುಟಗಳು: ೨೦೮. **ಬೆಲೆ: ಎರಡೂವರೆ ರೂಪಾಯಿ.**

೨. ನಮ್ಮ ನಮ್ಮವರು

೧೯೩೯ರಲ್ಲಿ ಮೈಸೂರಿನಲ್ಲಿಯೂ ೧೯೪೪ರಲ್ಲಿ ತುಮಕೂರಿನಲ್ಲಿಯೂ ಇಂಟರ್‌ಮೀಡಿಯೆಟ್ಟಿಗೆ ಓದುತ್ತಿದ್ದವರ ಕೃತಿರಚನೆಗಳು. ಇದರೊಳಗಿನ ರಚನೆಗಳ ಸಂಖ್ಯೆ: ೬೬. ಅರ್ಧ ಮುಕ್ಕಾಲು ಪು-ಟಗಳಿಂದ ಹಿಡಿದು ಎಂಟು ಹತ್ತು ಪುಟಗಳವರೆಗೆ ಬೆಳೆದಿರುವ ವಿಧವಿಧವಾದ ನಗೆಬಗೆಗಳ ಹೊಸ ರುಚಿಯನ್ನು ಓದಿಯೇ ಕಾಣಬೇಕು. ವಿದ್ಯಾರ್ಥಿಗಳ ಆಶುರಚನಾ ಸಾಮರ್ಥ್ಯಕ್ಕೂ ವಿಚಾರ ವಿಲಾಸದ ವೈಖರಿಗೂ ಈ ಪುಸ್ತಕದೊಳಗಿನ ಬರಹಗಳು ಒಂದೊಂದೂ ಒಂದೊಂದು ಸಂತೋಷದ ಸಾಕ್ಷಿ.

ಪುಟಗಳು: ೧೯೨. **ಬೆಲೆ: ಎರಡೂವರೆ ರೂಪಾಯಿ.**

ಕರ್ಣಾಟಕ ಸಂಘ, ಸೆಂಟ್ರಲ್ ಕಾಲೇಜ್, ಬೆಂಗಳೂರು.